# ಕೊಡಗು ಸಂಗಾತಿ


ಜೂನ್ 1 ರಿಂದ 15, 2000 ಪಾಕ್ಷಿಕ ಪತ್ರಿಕೆ (ಬೇಶ 18 ರಿಂದ 31, ಕಾರ್ತೆಲ್ 1)

ನಂ. ೩೫, ಸವಿತಾ ನಿಲಯ, ೧ನೇ ಕ್ರಾಸ್, ೪ನೇ ಬ್ಲಾಕ್, ಜಯಲಕ್ಷ್ಮಿಪುರಂ, ಮೈಸೂರು - ೫೭೦ ೦೧೨

ಸಂಪಾದಕಿ : ಪಟ್ಟಡ ಶೀಲಾಮಣಿ

ಕನ್ನಡ ಮತ್ತು ಅರೆಭಾಷೆಯ ಏಕೈಕ ಪಾಕ್ಷಿಕ ಪತ್ರಿಕೆ

KA/SK/MYS-88 ಸಂಪುಟ : 4 ಸಂಚಿಕೆ : 11 ಪುಟಗಳು : 24 ಬೆಲೆ ರೂ. : 6-00




ಲೇಖನ : ಒಳಪುಟಗಳಲ್ಲಿ

## ರಾಜಧಾನಿಯಲ್ಲಿ ಮೈತಳೆದು ನಿಂತಿರುವ ಕೊಡಗು ಮತ್ತು ದಕ್ಷಿಣ ಕನ್ನಡ ಜಿಲ್ಲಾ ಗೌಡ ಸಮಾಜ; ಬೆಂಗಳೂರು

# ಗೌಡ ಮಹಿಳಾ ಒಕ್ಕೂಟ ಕೊಡಗು, ನಂ. 47, ಮಡಿಕೇರಿ

ಗೌಡ ವಿದ್ಯಾ ಸಂಘದ ಕಟ್ಟಡ, ಗುಡ್ಡೆ ಮನೆ ಅಪ್ಪಯ್ಯ ಗೌಡ ರಸ್ತೆ, ಮಡಿಕೇರಿ.

## 1999-2000ನೇ ಸಾಲಿನ ದ್ವಿತೀಯ ವಾರ್ಷಿಕ ಮಹಾ ಸಭೆ ಮತ್ತು ದ್ವಿತೀಯ ವಾರ್ಷಿಕೋತ್ಸವದ ಆಹ್ವಾನ ಪತ್ರಿಕೆ

ಈ ಒಕ್ಕೂಟದ ದ್ವಿತೀಯ ಮಹಾಸಭೆ 2000ನೇ ಇಸವಿ ಜೂನ್ ತಿಂಗಳು 13ನೇ ಮಂಗಳವಾರ ಪೂರ್ವಾಹ್ನ 10-00 ಗಂಟೆಗೆ ಸರಿಯಾಗಿ ಒಕ್ಕೂಟದ ಅಧ್ಯಕ್ಷೆಯರಾದ ಶ್ರೀಮತಿ ಚೀಯಂಡಿ ರಾಧ ಯಾದವರವರ ಅಧ್ಯಕ್ಷತೆಯಲ್ಲಿ ಕೆಳಗಿನ ಗೌಡ ಸಮಾಜ, ಮಡಿಕೇರಿಯಲ್ಲಿ ನಡೆಯಲಿದೆ. ಅದೇ ದಿನ ಪೂ. 10-30ರಿಂದ ಸಂಜೆ 5-00ಗಂಟೆಯವರೆಗೆ ವಾರ್ಷಿಕೋತ್ಸವದ ಕಾರ್ಯಕ್ರಮ ನಡೆಯಲಿದೆ.

ಒಕ್ಕೂಟದ ಸದಸ್ಯರೆಲ್ಲರೂ ಸಮಯಕ್ಕೆ ಸರಿಯಾಗಿ ಆಗಮಿಸಿ ಈ ಕಾರ್ಯಕ್ರಮವನ್ನು ಯಶಸ್ವಿಯಾಗಿ ನೆರವೇರಿಸಲು ಸಹಕರಿಸಬೇಕಾಗಿ ವಿನಂತಿ.

ಮಡಿಕೇರಿ

ಅಧ್ಯಕ್ಷೆ ಮತ್ತು ಆಡಳಿತ ಮಂಡಳಿಯ ಸದಸ್ಯರು

---

ಸಮಾರಂಭದ ಅಧ್ಯಕ್ಷತೆ :

**ಶ್ರೀಮತಿ ತೋಟಂಬೈಲು ಅಮ್ಮವ್ವ ಕುಶಾಲಪ್ಪ**

ಉದ್ಘಾಟನೆ :

**ಶ್ರೀಮತಿ ಸರೋಜ ಜೀವಿಜಯ**

ಮುಖ್ಯ ಅತಿಥಿಗಳು :

**ಶ್ರೀಮತಿ ಬೈಲೋಳಿರ ಮುತ್ತಮ್ಮ ಕಾರ್ಯಪ್ಪ**
**ಶ್ರೀಮತಿ ಕೋರನ ಗಂಗಮ್ಮ ಪೂಣಚ್ಚ**
**ಶ್ರೀಮತಿ ಲೋಕೇಶ್ವರಿ ಗೌಡ ವಿನಯಚಂದ್ರ**
**ಶ್ರೀಮತಿ ಯಾಲದಾಳು ಪೂವಮ್ಮ ಪೂವಯ್ಯ**

ಮುಖ್ಯ ಅತಿಥಿಗಳು :

**ಶ್ರೀ ಡಿ. ಎ. ಚಿಣ್ಣಪ್ಪ**, ಮಾಜಿ ಮಂತ್ರಿಗಳು
**ಶ್ರೀಎನ್. ಎಸ್ ದೇವಿ ಪ್ರಸಾದ್**, ಸಮಾಜ ಸೇವಕರು
**ಶ್ರೀ ಡಿ. ಎಸ್. ಮಾದಪ್ಪ**, ಮಾಜಿ ಶಾಸಕರು
**ಶ್ರೀ ಟಿ. ಎಂ. ನಾಣಯ್ಯ**, ಅಧ್ಯಕ್ಷರು, ಗೌಡ ಸಮಾಜ
**ಶ್ರೀ ಕೆ. ಕೆ. ಪೂರ್ಣಯ್ಯ**, ಅಧ್ಯಕ್ಷರು, ಗೌಡ ವಿದ್ಯಾಸಂಘ
**ಶ್ರೀ ತುಂತಜೆ ವೆಂಕಟೇಶ್**, ಅಧ್ಯಕ್ಷರು, ಗೌಡ ಸಾಂಸ್ಕೃತಿಕ ಅಕಾಡೆಮಿ

## ಸೋಬಾನೆ ಪುಸ್ತಕ ಬಿಡುಗಡೆ

---

## ಕಾರ್ಯಕ್ರಮ

೧. ಪ್ರಾರ್ಥನೆ
೨. ಸ್ವಾಗತ ಭಾಷಣ
೩. ಅಧ್ಯಕ್ಷರ ಭಾಷಣ
೪. ಸಾಂಸ್ಕೃತಿಕ ಕಾರ್ಯಕ್ರಮ
೫. ಉದ್ಘಾಟನೆ
೬. ಅತಿಥಿಗಳಿಂದ ಭಾಷಣ
೭. ವಂದನಾರ್ಪಣೆ

ಕರ ಕುಶಲ ಕೈಗಾರಿಕೆ ವಸ್ತುಗಳು ವಸ್ತು ಪ್ರದರ್ಶನ

ಭಾಗವಹಿಸುವವರು ಪ್ರವೇಶ ಶುಲ್ಕ ರೂ. 25/- ಪಾವತಿಸಬೇಕು

(ಊಟದ ವ್ಯವಸ್ಥೆ ಇರುವುದು)

ವಿ. ಸೂ. : ಸದಸ್ಯರಿಗೆ ಆಹ್ವಾನ ಪತ್ರಿಕೆ ಸಿಕ್ಕದವರು ಇದನ್ನೆ ಆಹ್ವಾನ ಪತ್ರವೆಂದು ಪರಿಗಣಿಸುವುದು.

## ಒಳನೋಟ

2000, ಜೂನ್ 1-15 ರ ತನಕ


| | ಲೇಖಕರು | ಪುಟಗಳು |
|---|---|---|
| **ಕನ್ನಡ ವಿಭಾಗ** | | |
| ಬರಗಾಲ | - ಸಂಪಾದಕೀಯ | 02 |
| ಅವಸಾನದ ಅಂಚಿನಲ್ಲಿ ಗೌಡ ಸಂಸ್ಕೃತಿ | - ಪಟ್ಟಡ ಪ್ರಭಾಕರ್ | 02 |
| ಸೀಮಾಪುರುಷ ಶ್ರೀ ಕುರುಂಜಿ ವೆಂಕಟ್ರಮಣ ಗೌಡ | - ಶ್ರೀ ಡಿ. ಜವರೇಗೌಡ (ವೀಳ್ಯ) | 04 |
| ಬೆಂಗಳೂರಿನ ಕೊಡಗು ಮತ್ತು ದಕ್ಷಿಣ ಕನ್ನಡ ಗೌಡ ಸಮಾಜದ ರೂಪು ರೇಖೆಗಳು ಹಾಗೂ ಸಾಧಿಸಿದ ಕಾರ್ಯಗಳು | - ಪ್ರೊ. ಪೂಜಾರಿ ಮೋಣಪ್ಪ | 06 |
| ವಿದ್ಯಾವಂತ ನಿರದ್ಯೋಗಿಗಳಿಗೆ ಮಾರ್ಗದರ್ಶನ ಕೈಪಿಡಿ | - ತಡಿಯಪ್ಪನ ಕುಮಾರಜಯ | 09 |
| ಕೊಡಗೆಂಬ "ಸ್ವರ್ಗಕ್ಕೆ" ಆಯುಷ್ಯವೆಷ್ಟು? | - ಬಾರಿಯಂಡ ಜೋಯಪ್ಪ | 11 |
| ಸಂಗಾತಿ ಭವಿಷ್ಯ | - ಗಿರೀಶ್ ಕುಮಾರ್ | 12 |
| ಸರ್ಪಗಂಧ - ಧಾರವಾಹಿ - 31 | - ಕೌಂಡಿನ್ಯ | 13 |
| ಮೈಸೂರು ಗೌಡ ಮಹಿಳಾ ಸಂಘಟನೆಯಿಂದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ | - ದೇವಜನ ಗೀತಾ ಗಣೇಶ್ | 14 |
| ಮರಣ ಪೂರ್ವ ಹೇಳಿಕೆ | - ಬಿ.ಕೆ. ಶ್ರೀಧರ | 15 |
| ಸಾವು, ಭಯ ಗೊತ್ತಿರದ ಅಲೆಗ್ಸಾಂಡರ್ ದಿ ಗ್ರೇಟ್ ಯಾರು? | - ಪಿ. ಪಿ. ನೀಶಾ | 19 |
| **ಅರೆಭಾಷಿಕ ವಿಭಾಗ** | | |
| ವಾಂಟೆಡ್ ಮಿಸ್ಟರ್ ರಾಜು - ಧಾರಾವಾಹಿ - 11 | - ಶಂಕರನ ಬಸಪ್ಪ | 16 |
| ಹೆಂಡ ಕುಡ್ಕ ಸೊಂಪಣ್ಣ | - ಮರದಾಳು ಶಾಂತಿ ರಾಜ | 18 |
| ತೆಕ್ಕಡೆ ತಮ್ಮನ ಜೋಕ್ | - ತೆಕ್ಕಡೆ ಕುಮಾರ್ | 20 |


| | |
|---|---|
| ಚಂದಾ ಕಳುಹಿಸುವ ಮತ್ತು ಜಾಹೀರಾತು ಪ್ರಸಾರ ಕಛೇರಿ | **ಕೊಡಗು ಸಂಗಾತಿ,** 35,"ಸವಿತಾ ನಿಲಯ", 1ನೇ ಕ್ರಾಸ್, 4ನೇ ಬ್ಲಾಕ್, ಜಯಲಕ್ಷ್ಮಿಪುರಂ, ಮೈಸೂರು - 12. **ಫೋನ್ : 0821/516771** |
| ಮಡಿಕೇರಿಯಲ್ಲಿ ಸಂಗಾತಿ ಕಛೇರಿ | ಬೈತಡ್ಕ ಜಾನಕಿ ಬೆಳ್ಯಪ್ಪ,,ನಂ. 21-16 ಎಲ್. ಐ. ಸಿ. ಹತ್ತಿರ, ರೇಸ್ ಕೋರ್ಸ್ ರಸ್ತೆ, ಮಡಿಕೇರಿ, **ಫೋನ್ : 08272/28047** |
| ಸಂಗಾತಿ ಚಿಹ್ನೆ ಮತ್ತು ಅರೆಭಾಷೆ ಕ್ಯಾಸೆಟ್ ಲಭ್ಯ | ಪಾಂಡ್ಯನ್ ಕ್ಯಾಸೆಟ್ ಅಂಗಡಿ, ಖಾಸಗಿ ಬಸ್ ನಿಲ್ದಾಣ, ಮಡಿಕೇರಿ ಫೋನ್ : 08272/29620 |
| ಕುಶಾಲ ನಗರ | ಕುಂಭಗೌಡನ ಸೋಮಣ್ಣ, ಮಯೂರ ಕೋಲ್ಡ್ ಸ್ಟೋರೇಜ್, ಮುಖ್ಯ ರಸ್ತೆ, ಕುಶಾಲನಗರ - 571 234 ಫೋನ್ : 08276/73370 |
| ಬೆಂಗಳೂರು ಮಹಾನಗರ | ಅಮ್ಮಾಜೀರ ಪೊನ್ನಪ್ಪ, 20, 1ನೇ ಮೈನ್, 4ನೇ ಕ್ರಾಸ್, ಸಾಕಮ್ಮ ಗಾರ್ಡನ್, ಬಸವನಗುಡಿ, ಬೆಂಗಳೂರು - 04, ಫೋನ್ :080/6342822 |
| ಬೆಂಗಳೂರು ಮಹಾನಗರ | ಕಲ್ಲುಮುಟ್ಲು ಬಸಪ್ಪ, ನಂ. 37, 3ನೇ ಮೇನ್, ನಂಜಪ್ಪ ಬ್ಲಾಕ್, ಕೆಂಪೇಗೌಡ ನಗರ, ಬೆಂಗಳೂರು -19,ಫೋನ್ : 080/6500946 |

**ಚಂದಾ ವಿವರ : ಜೀವಾವಧಿ ಸದಸ್ಯತನ - 2000 ರೂ., ಬಿಡಿ ಪ್ರತಿ - 6 ರೂ., ಅರ್ಧ ವಾರ್ಷಿಕ -75 ರೂ., ವಾರ್ಷಿಕ ಚಂದಾ - 150 ರೂ. (ಅಂಚೆ ವೆಚ್ಚ ಸೇರಿ), ಒಲೆಗೊಂದರಂತೆ ಸದಸ್ಯರಾಗಿ ಕೊಂಡು ಓದಿ.**

# ಸಂಪಾದಕೀಯ : ಬರಗಾಲ

ಭಾರತದ ಉತ್ತರ ಪಶ್ಚಿಮ ರಾಜ್ಯಗಳಾದ ಗುಜರಾಥ್ ಮತ್ತು ರಾಜಸ್ಥಾನ ರಾಜ್ಯಗಳು ಬರಗಾಲದಿಂದ ತತ್ತರಿಸುವ ದೃಷ್ಯವನ್ನು ಕಂಡು ಓದಿಯೂ ತಿಳಿದಾಗ ಮಾನವ ಜೀವನ ಪ್ರಕೃತಿಯ ವಿಕೋಪಕ್ಕೆ ತಲ್ಲಣಿಸುತ್ತಿರುವುದು ಒಂದು ಭಯಾನಕ ದೃಷ್ಯ. ಅಲ್ಲಿನ ಜನರ ಸಹಾಯಕ್ಕಾಗಿ ಪ್ರತೀಯೊಬ್ಬ ಮಾನವನು ತನ್ನ ಕೈಲಾದ ತನು ಮನ ಮತ್ತು ಧನವನ್ನು ಸಹಾಯ ಮಾಡಬೇಕಾದ ಸಮಯ ಬಂದಿದೆ.

ಈಗ ಬರಗಾಲಕ್ಕೆ ಒಳಗಾದ ಪ್ರದೇಶಗಳು ಪುರಾಣಗಳ ಹಾಗೂ ಪ್ರಾಚೀನ ಚರಿತ್ರೆಯ ಕಾಲದಲ್ಲಿ ವನ ಸಂಪತ್ತಿನಿಂದ ತುಂಬಿ ತುಳುಕುತ್ತಿದ್ದ ನಾಡೆಂದು ಹೇಳುತ್ತವೆ. ಉದಾ ಹರಣೆಗೆ ಈಗ ಮರುಭೂಮಿಯಾಗಿರುವ ರಾಜಸ್ಥಾನದ ಪ್ರದೇಶ ಹಿಂದೆ ಭರತ ಖಂಡವನ್ನಾಳಿದ ಭರತನ ತಂದೆ ದುಶ್ಯಂತ, ತಾಯಿ ಶಕುಂತಲೆ ತಮ್ಮ ಪ್ರೇಮ ಕ್ರೀಡೆಯನ್ನಾಡಿದ ಸ್ಥಳ ಗೋಂಡಾರಣ್ಯದಿಂದ ಕೂಡಿತ್ತೆಂದು ಪಂಡಿತರು ಊಹಿಸುತ್ತಾರೆ. ತೀರ ಇತ್ತೀಚೆಗೆ ರಾಜ್ಯಭಾರ ಮಾಡಿ ಬಾಬರನು ಬೇಟೆಗಾಗಿ ಹೊರಟಾಗ ಚಕ್ರವರ್ತಿಯ ಬೇಟೆಗೆ ಅನುಕೂಲವಾಗುವಂತೆ ಕಾಡನ್ನು ಕಡಿಸಿ ಬೇಟೆಯಾಡುವ ಪರಿಸ್ಥಿತಿ ಇದ್ದ ಪ್ರದೇಶ, ಈಗ ಮರಳು ಭೂಮಿ ಯಾಗಿರುವುದಕ್ಕೆ ಕಾರಣವೇನು? ಆಗಿನ ಜನರು ತಮ್ಮ ಸ್ವಾರ್ಥಕ್ಕಾಗಿ ಯಥೇಚ್ಚವಾಗಿ ಬೆಳೆದ ಮರ ಗಿಡ ಕಾಡನ್ನು ಉರುಳಿಸಿ, ಬಯಲಾಗಿ ಮಾಡಿದುದರಿಂದ ಅಲ್ಲವೇ ಈ ಸ್ಥಿತಿ ಬರುವುದಕ್ಕೆ ಕಾರಣ? ಆಗಿನವರ ಮನಸ್ವೇಚೆಯ ಆಟ ಈಗಿನವರಿಗೆ ಪ್ರಾಣ ಸಂಕಟ ವಾಗಿ ಪರಿಣಮಿಸಿದೆ. ಆಗಿನ ರಾಜರುಗಳು ಜನರೂ ವನಸಂಪತ್ತಿನ ನಾಶಕ್ಕೆ ಕಾರಣ ಭೂತರಾಗಿದ್ದಾರೆ ಎಂದೆರೆ ತಪ್ಪಾಗಲಾರದು.

ಇದೇ ರೀತಿ ಕೊಡಗಿನಲ್ಲಿ ಈಗಲೂ ರಾಜಕೀಯ ಧುರೀಣರು ವಿಧಾನ ಸಭೆಯಲ್ಲಿ ಮರ ಕಳ್ಳ ಸಾಗಾಣಿಕೆಯ ವಿಷಯ, ಸಿಂಹ ಗರ್ಜನೆಯನ್ನು ಮಾಡಿದರೂ ಶಾಸಕರಾಗಲೀ, ಮಂತ್ರಿಗಳಾಗಲೀ ಯಾ ಸರ್ಕಾರವಾಗಲೀ ಈ ವಿಷಯದಲ್ಲಿ ಯಾವ ರೀತಿಯ ಕಳಕಳಿ ಹೊಂದಿದ್ದಾರೆ?

ಇನ್ನೊಂದು 100 ವರ್ಷ ಈ ರೀತಿ ಸಾಗಿದರೆ ಸುಂದರವಾದ ಕೊಡಗನ್ನು ಕಾಣುವ ಬದಲು ಬರುಡಾದ ಬಂಜರು ಕೊಡಗನ್ನು ಕಾಣುವ ಪರಿಸ್ಥಿತಿ ಉಂಟಾದೀತೆಂದು ಸಂಗಾತಿಯು ಅಭಿಪ್ರಾಯ ಪಡುತ್ತದೆ.

## ಅವಸಾನದ ಅಂಚಿನಲ್ಲಿ ಗೌಡ ಸಂಸ್ಕೃತಿ

ಭಾರತ ದೇಶದ ಜಾತಿಗಳ ಅತ್ಯುನ್ನತ ಸಂಸ್ಕೃತಿ ಅಂಗವಾಗಿ ಗೌಡ ಸಂಸ್ಕೃತಿಯು ಒಂದು. ದೇಶದ ನಾನಾ ಭಾಗದಲ್ಲಿ ಸಂಸ್ಕೃತಿಯು ಅವರವರ ಜಾತಿಯ ಸಂಭಂದವಾಗಿ ಪುರಾತನ ಕಾಲದಿಂದಲೂ ನಡೆದುಕೊಂಡು ಬಂದಿದೆ. ಕೆಲವು ಪಂಗಡಗಳಲ್ಲಿ ತಮ್ಮ ಸಂಸ್ಕೃತಿಯನ್ನು ಬಿಂಬಿಸುವ ಹಲವಾರು ಕಾರ್ಯಕ್ರಮ ಗಳೆನ್ನು ಹಮ್ಮಿಕೊಂಡು ಉಳಿಸುವ ನಿಟ್ಟಿನಲ್ಲಿ ಕಾರ್ಯ ಪ್ರವೃತ್ತ ರಾದರೆ, ನಮ್ಮ ಅರೆಭಾಷೆ ಗೌಡರಿಗೆ ಇದ್ಯಾವುದರ ಪರಿವೇ ಇರುವುದಿಲ್ಲ ಎಂದರೆ ತಪ್ಪಾಗಲಾರದು. ಅರೆಭಾಷೆ ಗೌಡರ ಆಚಾರ ವಿಚಾರ ಪದ್ಧತಿ, ಸಂಪ್ರದಾಯಗಳು, ಕಟ್ಟು ಕಟ್ಟಲೆಗಳು ಸಾವಿರಾರು ವರ್ಷಗಳಿಂದ ನಡೆದುಕೊಂಡು ಬಂದಿರುತ್ತದೆ. ನಮ್ಮ ಹಿರಿಯರು ಇಂದು ಕಾಲ ಕಂಡಿರಬಹುದು. ಆದರೆ ಅವರುಗಳು ಅತಿ ಕಟ್ಟು ನಿಟ್ಟಿನ ಕ್ರಮಗಳಿಂದ ಅರೆಭಾಷೆ ಗೌಡರ ಸಂಪ್ರದಾಯವನ್ನು ಪಾಲಿಸುತ್ತಾ ತಪ್ಪದೆ ಸುಮಾರಾಗಿ 1950ನೇ ಇಸವಿ ತನಕ ಕೊಡಗಿ ನಲ್ಲಿ ನಡೆಸಿಕೊಂಡು ಬಂದಿರುವುದು ಸರ್ವ ವೇದ್ಯವಾಗುತ್ತದೆ.

1935 - 45 ರ ಸುಮಾರಿಗೆ ಕೊಡಗಿನಲ್ಲಿ ಹಳೇ ಸಂಪ್ರದಾಯದ ಉಡುಪಿನಲ್ಲಿ ಭಿನ್ನಾಭಿಪ್ರಾಯ ಬಂದಿತು. ಅಂದು ಜನಾಂಗದ ಹಿರಿಯ ಬುದ್ಧಿ ಜೀವಿಯೊಬ್ಬರಿಂದ ಕುಪ್ಪಸ ತೊಡುವುದು ಬೇರೆ ಜಾತಿಯ ಅನುಕರಣೆ ಎಂಬ ತಪ್ಪು ಕಲ್ಪನೆ ಯಿಂದ ಉಡುಪಿನ ಬಗ್ಗೆ ತೀರಾ ಬದಲಾವಣೆ ಕ್ರಮವು ಅನುಸರಿಸ ಲ್ಪಟ್ಟಿತು. ಆಗ ಅಲ್ಲಿಯ ತನಕ ಬಿಳಿ ಕುಪ್ಪಸ ದಟ್ಟಿಯಲ್ಲಿಯೇ ಮದುವೆ, ಹಬ್ಬ, ಊರಿನ ಪ್ರಮುಖ ಕಾರ್ಯ ಕ್ರಮಗಳಲ್ಲಿ ಭಾಗ ವಹಿಸುತ್ತಿದ್ದರು. ನಂತರ ಯಾವುದೋ ಒಂದು ಜಿಜ್ಞಾಸೆಯಿಂದ ಕುಪ್ಪಸದಟ್ಟಿಯ ಮದುವೆ ಕ್ರಮಕ್ಕೆ ಹಿರಿಯರಿಂದ ಅಡಚಣೆಯ ಬಿರುಕು ಬಂತು. ವಾಸ್ತವ ಸ್ಥಿತಿಯೆಂದರೆ ಇದು ನಮ್ಮ ಉಡುಪು ಅಲ್ಲವೆನ್ನುವ ಭಾವನೆಯನ್ನು ಬಿತ್ತಲಾಯಿತು.

ಕುಪ್ಪಸ ದಟ್ಟಿಯು ರಾಜ ಮಹಾರಾಜರ ಆಣತಿಯಂತೆ ಕೊಡಗು ರಾಜನ ಕಾಲದಲ್ಲಿ ನೀಡಲ್ಪಟ್ಟ ವಿಶೇಷ ಉಡುಪು ಆಗಿತ್ತು. ಅಂದು ರಾಜನ ಆಸ್ಥಾನಕ್ಕೆ ಬರುವ ಪ್ರತಿಯೊಬ್ಬ ಪ್ರಜೆಯು ಈ ಕುಪ್ಪಸದಟ್ಟಿ, ರುಮಾಲು ಕಟ್ಟಿ, ಸೊಂಟಕ್ಕೆ ದಟ್ಟಿಸುತ್ತಿ, ಚಿನ್ನದ ಅಥವಾ ಬೆಳ್ಳಿಯ ಪೀಚೆ ಕತ್ತಿಯನ್ನು ಸಿಕ್ಕಿಸಿ ಬರುವಂತಹ ಪದ್ಧತಿ ಖಡ್ಡಾಯವಾಗಿ ಜಾರಿಯಲ್ಲಿತ್ತು. ಈ ಕ್ರಮವನ್ನು ಅಂದು ನಾಡಿನ ಎಲ್ಲಾ ಕೋಮುನವರು ಪಾಲಿಸಬೇಕಿತ್ತು. ರಾಜನ ಆಸ್ಥಾನದಲ್ಲಿ ಬಿಳಿ ಬಣ್ಣದ ಈ ಹೇಳಿದ ನಿಲುವಂಗಿಗೆ ಪ್ರಥಮ ಪ್ರಾಶಸ್ತ್ಯವಿತ್ತು. ಕುಪ್ಪಸದಟ್ಟಿ ಯಾವುದೇ ಜಾತಿ ಪದ್ಧತಿಯ ಉಡುಪಾಗಿರಲಿಲ್ಲ. ಕೊಡಗು ರಾಜರ ಕಾಲದಲ್ಲಿ ಕೊಡಗಿನಲ್ಲಿ ಕೆಲವು ಪಂಗಡವನ್ನು ಬಿಟ್ಟು, ಹೆಚ್ಚಿನವರು ತಮ್ಮ ಜಾತಿ ಆಚರಣೆಗಳಲ್ಲದೆ ತಮ್ಮ ಗ್ರಾಮದ, ನಾಡಿನ ಮತ್ತು ತನ್ನ ರಾಜ್ಯದ ಆಗು ಹೋಗುಗಳಲ್ಲಿ ತೊಡುವ ಉಡುಪಾಗಿದ್ದಿತು. ಹೀಗೆ ರಾಜನಿಂದ ನೀಡಲ್ಪಟ್ಟ ಬಿಳಿ ಕುಪ್ಪಸದಟ್ಟಿ, ರುಮಾಲು, ಪೀಚೆಕತ್ತಿಯ ಸಹಿತವಾಗಿ 1940-50 ರ ದಶಕದ ತನಕವು ಮದುವೆ ಕಾರ್ಯಕ್ರಮಗಳಲ್ಲಿ ನಡೆದು ಬಂದವು.

1935-40ರ ಸುಮಾರಿಗೆ ಈ ಮೇಲಿನ ಉಡುಪಿನ ಬಗ್ಗೆ ಭಿನ್ನಾಭಿಪ್ರಾಯ ಸ್ವರವೆದ್ದ ಹಿನ್ನೆಲೆಯಲ್ಲಿ, ಹಿರಿಯರಿಂದ ಕೇಳಿದ್ದಂತೆ 1935ರಲ್ಲಿ ಕೊಡಗಿಗೆ ವೈಸರಾಯಿ ಭೇಟಿಯಿಡುವ ಸಮಯದಲ್ಲಿ ಅರೆಭಾಷೆ ಗೌಡರ ಪ್ರತಿನಿಧಿಯಾಗಿ ಶ್ರೀ ನಿಡ್ಯಮಲೆ ಮುದ್ದಪ್ಪ

ಜಡ್ಜ್‌ರಿಂದ ಪ್ರತ್ಯೇಕವಾದ ಬಿಳಿಕೋಟು, ಕೋಟಿಗೆ ಶಾಲು, ಕಚ್ಚೆ, ತಲೆಗೆ ರುಮಾಲುಗಳ ಬಳಕೆಯನ್ನು ತಂದರು. ಇದು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಗೌಡರು ಬಳಸುವ ಕ್ರಮವು ಸಹ ಹೌದಾಗಿತ್ತು. ತದನಂತರ ನಾಡಿನ ಅರೆಭಾಷೆಗೌಡರ ಮದುವೆ ಸಂಪ್ರದಾಯದ ಉಡುಪಿನಲ್ಲಿ ಜನಾಂಗದೊಳಗೆ ಸಾಕಷ್ಟು ಭಿನ್ನಾಭಿಪ್ರಾಯವು ತಲೆದೋರಿ, ಮದುವೆ ವಿಷಯದಲ್ಲಿ ಪೆಟ್ಟು ಹೊಡೆದಾಟಗಳಾಗಿ 1935, 40, 50 ರ ಸುಮಾರಿಗೆ ಮತ್ತು ನಂತರವು ನಿಧಾನವಾಗಿ ಕುಪ್ಪಸದಟ್ಟಿ ಕಣ್ಮರೆಯಾಗುತ್ತ, ಕೋಟು ಪಂಚೆ, ರುಮಾಲು ಆ ಸ್ಥಾನವನ್ನು ತುಂಬಿದವು. ಆ ದಿನಗಳಲ್ಲಿ ಹುಟ್ಟಿದ ಪ್ರತಿಯೊಬ್ಬ ಅರೆಭಾಷಿಕನಿಗೆ ತಿಳಿದ ಸತ್ಯ ಸಂಗತಿ ಗೊತ್ತಿರಬಹುದು. ತಂದೆ ದಟ್ಟಿ ಕುಪ್ಪಸದಲ್ಲಿ ಮದುವೆ ಆಗಿದ್ದರೆ, ನಂತರ ಮಗ ಕೋಟು ಪಂಚೆಯಲ್ಲಿ ಮದುವೆಯಾದ.

ದೇಶಕ್ಕೆ ಸ್ವಾತಂತ್ರ್ಯ ಬಂತು. ಗೌಡರಲ್ಲಿ ಕೆಲವೇ ಜನ ಉದ್ಯೋಗ ಮತ್ತು ವಿದ್ಯಾವಂತರಾಗಿದ್ದರು. ಬುದ್ದಿವಂತ ಹಿರಿಯರು ಮಕ್ಕಳಿಗಾಗಿ ವಿದ್ಯೆ ಕಲಿಸಿದರು. ಕಲಿತ ಮಕ್ಕಳು 1960ರ ಸುಮಾರಿಗೆ ಅರ್ಧಂಬರ್ಧ ವಿದ್ಯೆ ಕಲಿತು ಹೊರ ನಾಡಿಗೆ ಹೋಗುವಂತಾಯ್ತು. ನಂತರ ಮೈಸೂರು, ಬೆಂಗಳೂರು ಅಂತ ಸಿಕ್ಕಿದ ಕೆಲಸಗಳಲ್ಲಿ ನಿರತರಾಗಿ ತನ್ನ ಮಕ್ಕಳಿಗೆ ಅತ್ತ ಮಾತೃ ಭಾಷೆ ಇತ್ತ ಅರೆಭಾಷೆ ಯನ್ನು ಕಲಿಸದೆ, ಕನ್ನಡ, ಇಂಗ್ಲೀಷ್ ಕಲಿಸುತ್ತಾ ಅರೆಭಾಷೆಯನ್ನು ಸಂಪೂರ್ಣವಾಗಿ ಮರೆತರು. ಹಾಗೂ ಅರೆಭಾಷೆಯನ್ನು ಕಲಿಸಿದರೆ ಎಲ್ಲಿ ತನ್ನ ಮಕ್ಕಳು ಕಡಿಮೆಯೆಂದು ಜನ ತಿಳಿಯುತ್ತಾರೆಯೋ ಅನ್ನುವ ಕೀಳರಿಮೆಯಿಂದ ಹೊರ ನಡೆದ ಅರೆಭಾಷಿಕ ಮಕ್ಕಳಂತೆ ತಾನು ಸಹ ಕನ್ನಡವನ್ನೇ ಬಳಸಲಾರಂಬಿಸಿದ. ಈತ ತನ್ನ ಊರಿಗೆ ಬಂದಾಗ ಕನ್ನಡವನ್ನೇ ಮಕ್ಕಳೊಂದಿಗೆ ಮಾತನಾಡಲು ಸುರು ಮಾಡಿದಾಗ, ಹಳ್ಳಿಯಲ್ಲಿದ್ದವರು ಸಹ ತನ್ನ ಮಕ್ಕಳಿಗೆ, ಅವರಿಗೇನು ನಾವು ಕಮ್ಮಿಯೇನು ಎಂದು ಭ್ರಮಿಸಿ ತಾನು ಸಹ ತನ್ನ ಮಕ್ಕಳ ಜೊತೆ ಅರೆಭಾಷೆಯನ್ನು, ಕನ್ನಡವನ್ನು ಬಳಸಲಾರಂಬಿಸಿದ. ಹೊರನಡೆದ ಅರೆಭಾಷಿಕನ ಮಕ್ಕಳು ಹೊರಗಿನ ಜನರೊಡನೆ ಬೆರೆತು ವಿವಾಹ ಮಟ್ಟಕ್ಕೂ ಇಳಿದರು. ಇತ್ತ ಕೊಡಗಿನಲ್ಲಿ ಅಂದು ಸ್ವಲ್ಪ ಶ್ರೀಮಂತರೆನಿಸಿದ ಅರೆಭಾಷಿಕ ಗೌಡರು ನೆರೆ ಜಿಲ್ಲೆಯ ಶ್ರೀಮಂತ ವಕ್ಕಲಿಗ ಗೌಡರೊಂದಿಗೆ ಸಂಬಂಧ ಬೆಳೆಸಲು ಸುಮಾರಾಗಿ 1960ರ ನಂತರ ಪ್ರಯತ್ನಿಸಿದರು. ವಕ್ಕಲಿಗ ಗೌಡರಿಗೂ, ಅರೆಭಾಷಿಕರಿಗೂ ಮದುವೆ ಸಂಬಂದ ಈಗೀಗ ಅಂದರೆ 40ವರ್ಷಗಳಿಂದೀಚೆಗೆ ಮಾತ್ರವೇ ನಡೆದುಬಂದಿರುತ್ತದೆ. ಅದರ ಹಿಂದೆ ಸಂಬಂದಗಳು ನಡೆದಿರುವುದ ಎಲ್ಲೂ ಕಾಣುವುದಿಲ್ಲ. ಈಗಲೂ ಸಹ ಬಾರಿ ಕಮ್ಮಿಯೆನ್ನಬಹುದು.

ಇಂತಹವುದರ ಮಧ್ಯದಲ್ಲಿ ಕಟ್ಟುನಿಟ್ಟಿನ ಕಟ್ಟುಪಾಡು ಗಳಿಗೆ ತಿಲಾಂಜಲಿ ಇತ್ತ ಪ್ರಯುಕ್ತ ಉಡುಪಿನ ಬಗ್ಗೆ ಯಾರಿಗೂ ಮಮತೆ ಎದ್ದು ತೋರದಾಗಿದೆ. 1970-80ರ ದಶಕದಲ್ಲಿ ಕೋಟು ಪಂಚೆಯನ್ನು ಮದುವೆಗಳಲ್ಲಿ 10-15 ಜನ ಹಾಕುತ್ತಿದ್ದರೇ ವಿನಹ ತದ ನಂತರ ಅದು ವರ, ವರನ ತಂದೆ, ಸೋದರ ಮಾವ ಹಾಗೂ ವಧುವಿನ ತಂದೆ ಸೋದರ ಮಾವ ಮತ್ತ ಅಡೋಳಿಯಾಗಿ 7, 8 ಜನ ಮಾತ್ರ ಧರಿಸುವಂತಾಗಿ ಈಗೀಗ ಈ ಪದ್ಧತಿಯೇ ಬೇಡವೆನ್ನುವ ರೀತಿಯಲ್ಲಿ ಮುಂದುವರಿದು ಬಿಳಿ ಪೇಟಾ ಮಾತ್ರ ಇಂದು ಅರೆಭಾಷಿಕನ ತಲೆಯಲ್ಲಿ ಉಳಿಯುವಂತಾಗಿದೆ. ಕೆಲವು ಮದುವೆಗಳಲ್ಲಿ ಪೇಟಾ ಸಹ ಇಲ್ಲದಾಗಿದೆ.

ಮದುವೆಗಳಲ್ಲಿ ಸೋಬಾನೆಗಳನ್ನು ಹೇಳದೆ ಕ್ಯಾಸೆಟ್‌ನಲ್ಲಿ ಮುದ್ರಿಸಿದ ಸಿನಿಮಾ ಹಾಡುಗಳನ್ನು ಹಾಕಿ ಕುಣಿಯುತ್ತಿದ್ದಾರೆ. ಅಕ್ಕಿ ಮುಹೂರ್ತ ಪದ್ಧತಿ ಮರೆತು ಹೋಗಿ ಪಾಶ್ಚಿಮಾತ್ಯ ಮಾದರಿಯ "ರಿಸೆಪ್ಷನ್" ಏರ್ಪಡಿಸಿ, ಹೆಣ್ಣು ಗಂಡಿಗೆ ಹಿರಿಯರು ಅಕ್ಷತೆ ಹಾಕಿ ಆಶೀರ್ವಾದ ಮಾಡುವ ಬದಲು, ಕೆಲವರಂತೂ ಆರತಕ್ಷತೆ ಕಾಲದಲ್ಲಿ ಶೂ, ಟೈ ಕೋಟು ಹಾಕಿ ಗುಂಪು ಗುಂಪಾಗಿ ವೀಡಿಯೋ ಮತ್ತು ಪೋಟೋಗಳಿಗೆ ಹೆಚ್ಚಿನ ಒತ್ತು ಕೊಡುತ್ತಿದ್ದಾರೆಯೇ ಹೊರತು ಮದುವೆಯಾಗುವ ಗಂಡು ಹೆಣ್ಣುಗಳಿಗೆ ದೀಪ ಹಚ್ಚಿ ಆರತಕ್ಷತೆ ಬೇಡವೇ ಬೇಡ ಎಂಬಷ್ಟು ಮಟ್ಟಿಗೆ ನಮ್ಮ ಸಂಸ್ಕೃತಿಯು ಅಧಃ ಪತನಕ್ಕೆ ಇಳಿದಿದೆ. ಹಿರಿಯರು ಈ ವಿಷಯದಲ್ಲಿ ಯುವಕರಿಗೆ ಮಾರ್ಗದರ್ಶನ ನೀಡುತ್ತಿಲ್ಲ. ಹಿರಿಯರು ಮಾರ್ಗದರ್ಶನ ನೀಡಿದರೂ, ಕಿರಿಯರು ಅದನ್ನು ಕೇಳುವ ಪರಿಸ್ಥಿತಿಯಲ್ಲಿ ಇಲ್ಲದಷ್ಟು ಕೆಟ್ಟು ಹೋಗಿದೆ. ಇದಕ್ಕೆ ಕಾರಣ ನಮ್ಮ ಸಮಾಜದಲ್ಲಿ ಒಗ್ಗಟ್ಟು ಇಲ್ಲದಿರುವುದೇ ಮುಖ್ಯವಾಗಿದೆ. ಹಿಂದೆ ಊರು ಗೌಡ, ಊರಿನ ಹಿರಿಯರು ಮದುವೆ ಕಾರ್ಯಗಳಲ್ಲಿ ತಮ್ಮ ಮಾರ್ಗದರ್ಶನವನ್ನು ನೀಡುತ್ತಿದ್ದರು. ತಪ್ಪಿಹೋದವರನ್ನು ಗದರಿಸಿಯೋ ತಪ್ಪು ದಂಡವನ್ನು ವಿಧಿಸಿಯೋ ಸರಿಪಡಿಸುತ್ತಿದ್ದರು. ಆಗ ಸಮೂಹದ ತೀರ್ಮಾನಕ್ಕೆ ಬೆಲೆ ಇತ್ತು. ಈಗ ಅದು ಇಲ್ಲದೆ ಹೇಳುವವರಿಲ್ಲದೆ, ಕೇಳುವವರಿಲ್ಲದೆ, ದಿಕ್ಕುದೆಸೆಯಿಲ್ಲದೆ ಇನ್ನೂ ಹತ್ತು ಇಪ್ಪತ್ತು ವರ್ಷಗಳಲ್ಲಿ ಯಾವ ಕಟ್ಟು ಪಾಡುಗಳು ಇಲ್ಲದೆ ಆಚಾರ ವಿಚಾರಗಳಿಗೆ ತಿಲಾಂಜಲಿ ಹಾಕಿ ಒಂದು ಹಿಡಿತ ಇಲ್ಲದ ಸಮಾಜವಾಗಿ ಲಂಗು ಲಗಾಮಿಲ್ಲದೆ ಇಲ್ಲದ ಸಮಾಜವಾಗಿ ಪರಿಣಮಿಸುತ್ತದೆನ್ನುವುದರಲ್ಲಿ ಸಂಶಯವೇ ಇಲ್ಲ.

ಪರಕೀಯರ ಪ್ರಭಾವದಿಂದ ಸಂಪೂರ್ಣವಾಗಿ ಅರೆಭಾಷಿಕ ಗೌಡರು ಮದುವೆ ಸಮಯದಲ್ಲಿ ಉಡುಪಿನ ಬಗ್ಗೆ ತಾತ್ಸಾರ ತೋರಿ, ನಮ್ಮ ಹಿಂದಿನ ಕಾಲಕಂಡ ತಲೆಮಾರಿಗೆ ಅವಮಾನ ಮಾಡುವ ಈಗಿನ ಯುವ ಪೀಳಿಗೆಗೆ ಏನನ್ನ ಬೇಕೋ ತಿಳಿಯ ದಾಗಿದೆ. 1925ರಿಂದ 1950ರ ತನಕ ನಮ್ಮ ಹಿರಿಯರು ಪಾಲಿಸುತ್ತಿದ್ದ ಕಟ್ಟುನಿಟ್ಟಿನ ಕ್ರಮವನ್ನು ಇಂದಿನ ಯುವಕರು ಮರುಪಾಲಿಸಬೇಕಲ್ಲದೆ, ಈ ನಿಟ್ಟಿನಲ್ಲಿ ಕೊಡಗು ಗೌಡ ಸಾಂಸ್ಕೃತಿಕ ಅಕಾಡೆಮಿ ಮತ್ತು ಎಲ್ಲಾ ಗೌಡ ಸಮಾಜಗಳು ಎಚ್ಚೆತ್ತು ಖಡ್ಡಾಯವಾಗಿ ಕಾರ್ಯ ಪ್ರವೃತ್ತರಾಗಬೇಕಾಗಿದೆ. ಇಲ್ಲದೆ ಹೋದಲ್ಲಿ ಸಂಸ್ಕೃತಿ ಮತ್ತು ಸಂಪ್ರದಾಯ ನಾಶವಾದ ಹೊಣೆಯನ್ನು ಪೂರ್ಣವಾಗಿ ಈ ಮೇಲಿನ ಸಂಸ್ಥೆಗಳು ಹೊರಬೇಕಾಗಿದೀತು. ಕಾಲ ಮಿಂಚುವ ಮೊದಲೆ ಸಂಬಂದ ಪಟ್ಟ ಸಂಸ್ಥೆಗಳು ಕಾರ್ಯ ಪ್ರವೃತಿಯಾಗುವುದು ಜನಾಂಗದ ದೃಷ್ಟಿಯಿಂದ ಒಳ್ಳೆಯದೆಂದು ಸಂಗಾತಿಯ ಅನಿಸಿಕೆಯಾಗಿದೆ.

ಪಟ್ಟಡ ಪ್ರಭಾಕರ್

# ಗೌಡ ಜನಾಂಗದ ಮೇರು ವ್ಯಕ್ತಿತ್ವದೌನ್ನತ್ಯಗಳ ಸೀಮಾಪುರುಷ ಶ್ರೀ ಕುರುಂಜಿ ವೆಂಕಟ್ರಮಣ ಗೌಡ (ಮುಂದುವರಿದ ಭಾಗ)



ಇವಲ್ಲದೆ ಅತ್ಯಾಧುನಿಕ ಮತ್ತು ಸುಸಜ್ಜಿತವಾದ 200 ಹಾಸಿಗೆಗಳ ಕೆ.ವಿ.ಜಿ. ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರ, ಸುಳ್ಯ ಆರಂತೋಡು, ಪೆರಾಜೆ ಮತ್ತು ಕೊಲ್ಲಮೊಗ್ರುವಿನಲ್ಲಿರುವ ಪ್ರೌಢಶಾಲೆಗಳು ಮತ್ತು ಇತ್ತೀಚೆಗೆ ಕೊಡಗಿನ ಭಾಗಮಂಡಲದಲ್ಲಿ ಕೈಗಾರಿಕಾ ತರಬೇತಿ ಕೇಂದ್ರ, ಇವು ಶ್ರೀ ಕುರುಂಜಿಯವರ ಆಲೋಚನೆ ಮತ್ತು ಕಾರ್ಯದಕ್ಷತೆಯ ದ್ಯೋತಕವಾಗಿ ಕಾರ್ಯನಿರ್ವಹಿಸುತ್ತಿವೆ.

"ನಾನು ನೆಟ್ಟಿರುವ ಅಡಿಕೆ ಸಸಿಗಳು ಫಲಕೊಡಲಾರಂಭಿಸಿದಾಗ ಅದನ್ನು ವ್ಯಯಿಸಿ ಒಂದು ಪ್ರಥಮ ದರ್ಜೆ ಕಾಲೇಜನ್ನು ಸುಳ್ಯದಲ್ಲಿ ಸ್ಥಾಪಿಸುತ್ತೇನೆ " ಎಂದು ಒಂದು ಸಾರ್ವಜನಿಕ ಸಭೆಯಲ್ಲಿ ನುಡಿದಂತೆಯೆ ನಡೆದು ತೋರಿಸುವ ಮೂಲಕ ಆರಂಭಗೊಂಡ ಇವರ ಕಾರ್ಯದಕ್ಷತೆ ಆನೆ ಹೆಜ್ಜೆಯಿಟ್ಟದ್ದೆ ಮಹಾಮಾರ್ಗವೆಂಬಂತೆ ಮುಂದುವರಿಯುತ್ತಿದೆ, ನಾಗಾಲೋಟ ದಲ್ಲಿದೆ. ಜ್ಯೂಲಿಯಸ್ ಸೀಜರ್ " ಬಂದೆ, ಕಂಡೆ, ಗೆದ್ದೆ" ಎಂದರೆ ಶ್ರೀ ಕೆವಿಜಿಯವರು " ಆಲೋಚಿಸಿದೆ, ವ್ಯಯಿಸಿದೆ, ಕಟ್ಟಿಬೆಳೆಸಿದೆ" ಎನ್ನುವಂತಹದಾಗಿದೆ.

ಕೊಡಗಿನ ಮತ್ತು ದ.ಕ. ಜಿಲ್ಲೆ ಮತ್ತು ಬೆಂಗಳೂರು ಜಿಲ್ಲೆಯ ಹಲವಾರು ಸ್ಥಳಗಳಲ್ಲಿ ಪ್ರಥಮ ದರ್ಜೆಯ ಕಾಲೇಜು ಮತ್ತು ವೃತ್ತಿ ಶಿಕ್ಷಣ ತರಬೇತಿ ಸಂಸ್ಥೆಗಳನ್ನು ಪ್ರಾರಂಭಿಸುವ ಆಲೋಚನೆ ಇವರದ್ದಾಗಿದ್ದು ಆಯುರ್ವೇದಿಕ್ ಕಾಲೇಜು, ಮೆಡಿಕಲ್ ಕಾಲೇಜು ಸ್ಥಾಪಿಸುವ ಕನಸು ನನಸಾಗುವ ಹಂತದಲ್ಲಿದೆ. ಮುಂದಿನ ಶೈಕ್ಷಣಿಕ ವರ್ಷದಿಂದ ಮಹಿಳಾ ಪ್ರಥಮ ದರ್ಜೆಯ ಕಾಲೇಜು ಪ್ರಾರಂಭಿಸಲಿರುವುದು ಸುಳ್ಯದ ಜನರಿಗೆ ನೀಡಲಿರುವ 1996ನೇ ವರ್ಷದ ಮೊದಲ ಉಡುಗೊರೆಗಳಲ್ಲೊಂದು. ನಮ್ಮ ಸಮಾಜಕ್ಕೆ ತಾನು ಏನನ್ನು ನೀಡಬಹುದೆಂದೇ ಹಗಲು ರಾತ್ರಿ ಚಿಂತಿಸುತ್ತಿರುವ ಇವರ ಸುಂದರ ಕನಸಿನ ಚಿತ್ರಣವನ್ನು ಉರುಳುವ ಕಾಲಚಕ್ರ ಮಾತ್ರವೆ ನೀಡಬಲ್ಲದು. ಮಣ್ಣಿನ ಮಗನೊಬ್ಬ ಫೀನಿಕ್ಸ್ ಪಕ್ಷಿ ತನ್ನನ್ನು ತಾನೆ ಸುಟ್ಟುಕೊಂಡು ಮರುಹುಟ್ಟು ಪಡೆಯುವಂತೆ ತನ್ನ ಪರಿಶ್ರಮದ ಬೆವರ ಹನಿಗಳಿಂದಲೆ ಇಷ್ಟು ಬೃಹತ್ ವಿದ್ಯಾಸಂಸ್ಥೆಗಳನ್ನು ಕಟ್ಟಿ ಬೆಳಸಿ ಸಾರ್ಥಕ ಬಾಳನ್ನು ನಡೆಸುತ್ತಿರುವ ಅದ್ವಿತೀಯ ವ್ಯಕ್ತಿ ಬಹುಶಃ ಈ ದೇಶದಲ್ಲಿಯೇ ಏಕೈಕ!

## ತಣಿಯದ ದಾನ ಚಿಂತಾಮಣಿಯ ಮುಕುಟದಿ ಶೋಭಿಪ ಗರಿಗಳ ಸಾಲು :

ಮರಗಿಡಗಳ ಫಲಪುಷ್ಪ, ನದಿಗಳ ನೀರು ಮಹಾತ್ಮರ ತನು ಮನ ಧನ ಬೇರೆಯವರಿಗಾಗಿಯೆ ವಿನಿಯೋಗವಾಗುತ್ತದೆ. ನೂರಕ್ಕೊಬ್ಬ ಶ್ರಮಿಕನಿರಬಹುದು, ಸಾವಿರಕ್ಕೊಬ್ಬ ವೀರನಿರಬಹುದು, ಲಕ್ಷಕ್ಕೊಬ್ಬ ಕವಿಯಿರಬಹುದು ಆದರೆ ಕೋಟಿಗೊಬ್ಬ ದಾನಿ ಮೂಡುವುದು ದುರ್ಲಭವಂತೆ. ಇಂತವರೊಬ್ಬ ಅಪರೂಪದ ವ್ಯಕ್ತಿ ನಮ್ಮ ಮಧ್ಯೆ ಇರುವದು ನಮ್ಮೆಲ್ಲರ ಭಾಗ್ಯದ ಸಂಗತಿ. ಕೊಡಲು ಮನಸ್ಸಿದ್ದವರಿಗೆ ಶ್ರೀಮಂತಿಕೆ ಇರುವುದಿಲ್ಲ, ಶ್ರೀಮಂತಿಕೆ ಇದ್ದವರಿಗೆ ಕೊಡಲು ಮನಸ್ಸಿರುವುಲ್ಲ. ಆದರೆ ಇವೆರಡೂ ಶ್ರೀ ಕುರುಂಜಿಯವರ ಜೀವನ ಬಂಡಿಯಲ್ಲಿ ಜೋಡೆತ್ತಿನಂತೆ ಸಾಗುತ್ತಿರುವುದು ಅಪರೂಪದ ದೃಶ್ಯ. ಕಾಮನಬಿಲ್ಲು ಭೂಮ್ಯಾಕಾಶಕ್ಕೆ ಕೊಂಡಿಯಾದಂತೆ. ಹೃದಯ ಶ್ರೀಮಂತಿಕೆಯನ್ನೊಳಗೊಂಡ ಶ್ರೀಮಂತರೆಂದೇ ಪ್ರಖ್ಯಾತರಾಗಿರುವ ಇವರು ಹೇಳುತ್ತಾರೆ, "ಇಂದು ಇದ್ದವ ನಾಳೆ ಇರುವುದಿಲ್ಲ", ಬರುವಾಗ ಏನನ್ನೂ ತರಲಿಲ್ಲ, ಹೋಗೂವಾಗಲಂತೂ ಏನನ್ನೂ ಕೊಂಡೊಯ್ಯಲು ಸಾಧ್ಯವಾಗುವುದಿಲ್ಲ, ಆದರೆ ಕೊಟ್ಟದ್ದು ಮಾತ್ರ ನನ್ನೊಂದಿಗೆ ಬರುತ್ತದೆ" " ದಾನ ಮಾಡಿದಷ್ಟು ನನ್ನ ಸಂಪತ್ತು ನೂರ್ಮಡಿ ವೃದ್ಧಿಗೊಳ್ಳುತ್ತದೆ",' ದಾನಕೊಟ್ಟು, ನೋಡಬೇಕು ಅದರಿಂದಾಗುವ ಸಂತೋಷವನ್ನು" ಎಂದು ನುಡಿಯುವ ಇವರ ಹೃದಯ ವಿಶಾಲತೆ ಅಳತೆಗೆ ನಿಲುಕದು.

ಲಕ್ಷಗಟ್ಟಲೆ ಕೊಡುವವರೆಂದು ಖ್ಯಾತರಾಗಿರುವ ಶ್ರೀ ಕುರುಂಜಿಯವರು ಕೊಡಗು, ದಕ್ಷಿಣ ಕನ್ನಡ, ಮೈಸೂರು, ಮಂಡ್ಯ ಮತ್ತು ಬೆಂಗಳೂರುಗಳಲ್ಲಿ ಸುಮಾರು ರೂಪಾಯಿ 50 ಲಕ್ಷ ದೇಣಿಗೆ ನೀಡಿ 29 ಕಲ್ಯಾಣ ಮಂಟಪಗಳನ್ನು ಕಟ್ಟಿಸಿದ್ದಾರೆ. ಸುಳ್ಯ ತಾಲೂಕು ಹಾಗೂ ಆಸುಪಾಸಿನ ಸರಕಾರಿ ಮತ್ತು ಖಾಸಗಿ ಪ್ರಾಥಮಿಕ, ಮಾಧ್ಯಮಿಕ, ಪ್ರೌಢಶಾಲೆಗಳಲ್ಲಿ ಮತ್ತು ಜ್ಯೂನಿಯರ್ ಕಾಲೇಜುಗಳಲ್ಲಿ ಇಂಗ್ಲೀಷು ಗ್ರಂಥಾಲಯವನ್ನು ತೆರೆಯಲು ಸ್ವಯಂ ಪ್ರೇರಿತರಾಗಿ ಉದಾರ ದೇಣಿಗೆ ನೀಡಿ ಪ್ರೋತ್ಸಾಹಿಸಿದ್ದಾರೆ. ಈ ಪ್ರಯೋಜನವನ್ನು 157 ವಿದ್ಯಾಸಂಸ್ಥೆಗಳು ಪಡೆದುಕೊಂಡಿವೆ. ಪ್ರತಿಯೊಂದು ಶಿಕ್ಷಣ ಸಂಸ್ಥೆಗೂ ರೂ. 4000. ದ ಒಂದೊಂದು ಉಕ್ಕಿನ ಕಪಾಟುಗಳನ್ನು ನೀಡಲಾಗಿದೆ. ಇದಕ್ಕೆ ತಗುಲಿದ ವೆಚ್ಚ ಸುಮಾರು 6.50 ಲಕ್ಷ ರೂಪಾಯಿಗಳು. ಸುಳ್ಯ ತಾಲೂಕಿನಲ್ಲಿ ಜ್ಞಾನ ದೇಗುಲಗಳ ಯೋಜನೆ ತುಂಬಾ ಯಶಸ್ಸುಗಳಿಸಲು ಶ್ರೀ ಕುರುಂಜಿಯವರ ತುಂಬು ಹೃದಯದ ಸಹಕಾರವೇ ಕಾರಣವಾಗಿದೆ. ಇದಕ್ಕಾಗಿ ಸುಳ್ಯ ತಾಲೂಕಿನ 108 ಜ್ಞಾನದೇಗುಲಗಳ ಸ್ಥಾಪನೆಗೆ ಒಟ್ಟು 11 ಲಕ್ಷ ರೂಪಾಯಿಗಳ ದೇಣಿಗೆ ನೀಡಿದ್ದಾರೆ. ಸುಳ್ಯ ತಾಲೂಕಿನಲ್ಲಿರುವ 27 ಗ್ರಾಮ ಪಂಚಾಯಿತಗಳಲ್ಲಿಯೂ ಒಂದೊಂದು ಕಲಿಕಾ ಕೇಂದ್ರವನ್ನು ಸ್ಥಾಪಿಸಬೇಕೆನ್ನುವ ಸರ್ಕಾರದ ಮತ್ತೊಂದು ಯೋಜನೆಗೆ ಬೆನ್ನೆಲುಬಾಗಿ ನಿಂತಿರುವ ಶ್ರೀ ಕುರುಂಜಿಯವರು ಈಗಾಗಲೇ 15 ಕೇಂದ್ರಗಳಿಗೆ ತಲಾ ರೂ. 5000

ಧನಸಹಾಯ ನೀಡಿರುತ್ತಾರೆ. ಇದರ ಜೊತೆಗೆ ಸುಳ್ಯ ತಾಲೂಕಿನ 15 ಜನಶಿಕ್ಷಣ ನಿಲಯಗಳಿಗೂ ರೂ. 4000 ಬೆಲೆಯ ಒಂದೊಂದು ಉಕ್ಕಿನ ಕಪಾಟು ನೀಡಲು ಒಪ್ಪಿಕಾರ್ಯ ಆರಂಭಿಸಿದ್ದಾರೆ. ಸುಳ್ಯ ತಾಲೂಕಿನ ಹನ್ನೆರಡು ರಂಗ ಮಂದಿರಗಳಿಗೆ ಲಕ್ಷಗಟ್ಟಲೆ ಧನಸಹಾಯ ನೀಡಿರುತ್ತಾರೆ ಮತ್ತು ಇನ್ನು ಮುಂದೆ ಕಟ್ಟಲು ಪ್ರಾರಂಭಿಸಲಿರುವ ಯುವ ಸಂಘಗಳ ಕಟ್ಟಡ ಮತ್ತು ರಂಗ ಮಂದಿರಗಳಿಗೆ ನೆರವು ನೀಡಲು ಯೋಜನೆಯನ್ನು ರೂಪಿಸಿಕೊಂಡಿದ್ದಾರೆ. ಬೆಳೆಯುತ್ತಿರುವ ಸುಳ್ಯ ಪಟ್ಟಣಕ್ಕೆ ಒಂದು ಭವ್ಯ 'ಪುರಭವನ' ಬೇಕೆಂಬ ಶ್ರೀಯುತರ ಒತ್ತಾಸೆಯ ಫಲವಾಗಿ ಕಾರ್ಯ ಆರಂಭವಾಗಿದ್ದು ಮುಕ್ತಾಯದ ಹಂತದಲ್ಲಿದೆ. ಶ್ರೀಯುತರು ಪುರಭವನದ ಒಳಗೆ ಭವ್ಯವಾದ ರಂಗಮಂದಿರ ಮತ್ತು ಅತಿಥಿ ಕೊಠಡಿಗಳನ್ನು ಕಟ್ಟಲು ರೂ ನಾಲ್ಕು ಲಕ್ಷಕ್ಕೂ ಮೀರಿದ ಮೊತ್ತವನ್ನು ವ್ಯಯಿಸಿದ್ದಾರೆ. ಶ್ರೀಯುತರು ಧರ್ಮ ಮತ್ತು ದೇವರ ಬಗ್ಗೆ ಅಪಾರ ಗೌರವ ಮತ್ತು ಭಕ್ತಿಯುಳ್ಳವರಾಗಿದ್ದು ತೋಡಿಕಾನದ ದೇವಾಲಯದ ಎರಡು ಮಹಾದ್ವಾರಗಳನ್ನು 1,75,000 ರೂ. ವೆಚ್ಚದಲ್ಲಿ ಉದಾರವಾಗಿ ನಿರ್ಮಿಸಿಕೊಟ್ಟಿದ್ದಾರೆ. ಈ ರೀತಿಯ ವಿಷಯಗಳನ್ನು ಬರೆಯುವುದಾದರೆ ಅದೊಂದು ದೊಡ್ಡ ಪುಸ್ತಕವೇ ಆಗಬಹುದು. ಇತ್ತೀಚೆಗೆ ಮಹಾ ಸಂಭ್ರಮದಿಂದ ನಡೆದ ಶ್ರೀ ಕ್ಷೇತ್ರ ಆದಿ ಚುಂಚನಗಿರಿಯ ಮಠಾಧಿಪತಿಗಳಾದ ಶ್ರೀ ಶ್ರೀ ಶ್ರೀ ಬಾಲಗಂಗಾಧರ ನಾಥ ಸ್ವಾಮೀಜಿಯವರ 50 ನೇ ಹುಟ್ಟು ಹಬ್ಬದ ಸುವರ್ಣ ಮಹೋತ್ಸವದ ಸಂದರ್ಭದಲ್ಲಿ ಶ್ರೀ ಕುರುಂಜಿಯವರು ತಮ್ಮ ಗೌರವ ಮತ್ತು ಭಕ್ತಿಯ ಸಂಕೇತವಾಗಿ 15 ಲಕ್ಷ ರೂಪಾಯಿ ವೆಚ್ಚದ ಸುಂದರ ಸುವರ್ಣ ಕಿರೀಟವನ್ನು ನೀಡಿದ್ದಾರೆ. ಈ ರೀತಿ ದಾನ, ಧಮ ಮತ್ತು ಇತರೆ ಸತ್‌ಕಾರ್ಯಗಳಿಗೆ ಉದಾರವಾಗಿ ದೇಣಿಗೆ ನೀಡುತ್ತಿರುವ ಶ್ರೀ ಕುರುಂಜಿಯವರನ್ನು ಜನರ ಬಾಯಲ್ಲಿ 'ಕಲಿಯುಗದ ದಾನಶೂರ ಕರ್ಣ'ನೆಂದೇ ತುಂಬಿ ಹೇಳಿದ್ದಾರೆ.

**ಹೊತ್ತರೂ ಮಾನವ ದೇಹವನು ದುಡಿತದ ಪರಿಯಲಿ ಹಿಂದಿಕ್ಕಿಹರು ಯಂತ್ರವನು :**

ಬೆವರಿನ ಹನಿಗಳ ಫಲವೇ ಈ ಸುಂದರ ಸಂಸ್ಕೃತಿ. ಆಯಾಸ ವರಿಯದ ಪರಿಶ್ರಮದ ದುಡಿಮೆ ಮತ್ತು ಉರುಳುವ ಸಮಯದ ಸದುಪಯೋಗವೇ ಶ್ರೀ ಕುರುಂಜಿಯವರ ಯಶಸ್ಸಿನ ಮೆಟ್ಟಿಲುಗಳು. ಇವರು ದಿನದ 18 ಗಂಟೆಗಳನ್ನೂ ದುಡಿಮೆಗಾಗಿಯೇ ವಿನಿಯೋಗಿಸುತ್ತಿದ್ದಾರೆ. " ದುಡಿಮೆಯ ಬೆನ್ನೇರಿ ಹೊರಟವರನ್ನು ದರಿದ್ರ ಹಿಂದಿಕ್ಕಲು ಸಾಧ್ಯವೇ?" ಇದು ಶ್ರೀ ಕುರುಂಜಿಯವರ ಪ್ರಶ್ನೆ ದುಡಿಮೆಗೆ ಮತ್ತೊಂದು ಹೆಸರು ಶ್ರೀ ಕುರುಂಜಿಯವರು. ಸಮಯದ ಬೆಲೆಯನ್ನರಿತು ಕ್ಷಣ ಕ್ಷಣವನ್ನೂ ಉಪೇಕ್ಷಿಸದೆ ಸಮಾಜದ ಒಳಿತಿಗಾಗಿ ದುಡಿಯುತ್ತಿರುವ ಇವರಂಥ ಶ್ರೀಮಂತ ವ್ಯಕ್ತಿಗಳನ್ನೂ ಕಾಣುವುದೇ ವಿರಳ. ಅವರ ದಿನಚರಿಯನ್ನೂ ಕಾಣದವರಿಗೆ ತಿಳಿಸಿದರೆ ನಂಬುವುದಿರಲಿ ಇಂಥವರೊಬ್ಬರು ಈ ಕಾಲದಲ್ಲಿ ಇರುವುದರ ಬಗ್ಗೆಯೆ ಆಶ್ಚರ್ಯಪಟ್ಟಾರು. ಬೇರೆ ಬೇರೆ ಕಾರಣಗಳಿಗಾಗಿ ಊರನ್ನು ಬಿಟ್ಟ ದಿನಗಳನ್ನು ಬಿಟ್ಟರೆ ಉಳಿದಂತೆ ಕಛೇರಿಗೆ ಬರುವ ಕಾರ್ಯ ಸೂರ್ಯೋದಯದಷ್ಟೇ ನಿಖರ. ಕಟ್ಟಡ ಕಟ್ಟುವಲ್ಲಿ, ಬಣ್ಣ ಬಳಿಯುವಲ್ಲಿ, ಯಂತ್ರಗಳನ್ನು ಸ್ಥಾಪಿಸುವಲ್ಲಿ ಎಲ್ಲೆಲ್ಲೂ ಅವರೆ, ದಣಿವರಿಯದ ದುಡಿಮೆ ಜತೆಗೆ ಇತರರಿಗೂ ಸ್ಫೂರ್ತಿಯ ಚಿಲುಮೆ. ಈ 67 ರ ಪ್ರಾಯದಲ್ಲೂ ಅವರಲ್ಲಿ ಹೊಮ್ಮುತ್ತಿರುವ ಉತ್ಸಾಹ ಸ್ಫೂರ್ತಿ, ಕರ್ತವ್ಯ ಪ್ರಜ್ಞೆ ಕಾರ್ಯತತ್ಪರತೆ, ಕಠಿಣಶ್ರಮಕ್ಕೂ ಮಣಿಯದ ದೈಹಿಕ ಬಲ ಮತ್ತು ಇವೆಲ್ಲಕ್ಕೂ ಕಾರಣವಾದ ಆತ್ಮ ಬಲದ ಬಗ್ಗೆ ತಲೆದೂಗಲೇಬೇಕು. ಆಲಸ್ಯವೆಂಬ ಪದ ಇವರ ಶಬ್ದಕೋಶದಲ್ಲಿ ಇಲ್ಲವೇ ಇಲ್ಲ. ಇವರಿಗೆ ಊಟದ ಸಮಯವೆಂಬುದಿಲ್ಲ. ಅದು ಯಾವಾಗಲೂ ಕೆಲಸ ಮುಗಿದ ನಂತರವೆ ನಡೆಯುವಂಥದ್ದು. ಕೆಲಸ ನಿಲ್ಲಿಸಿ ಊಟಕ್ಕೆ ಹೋದದ್ದು ಇಲ್ಲವೇ ಇಲ್ಲ, ಆದರೆ ಕೆಲಸವನ್ನು ಪೂರ್ಣಗೊಳಿಸುವುದಕ್ಕಾಗಿ ಊಟದ ಸಮಯವನ್ನು ಮುಂದೆ ಹಾಕುವುದು ನಿತ್ಯವೂ ಇರುತ್ತದೆ. ಮಧ್ಯಾಹ್ನದ ಊಟ 4 ಗಂಟೆಗಾದರೆ ಬೇಗ ಆದಂತೆ. ಊಟದ ನಂತರ ಹಗಲು ನಿದ್ರೆಯಿರಲಿ ತುಸು ವಿಶ್ರಾಂತಿಗೂ ಅವಕಾಶವಿಲ್ಲ. "ನಿದ್ರೆಗೆ ನಿಗದಿ ಪಡಿಸಿಕೊಂಡಿರುವ ಅತ್ಯಲ್ಪ ಸಮಯದಲ್ಲೂ ನನ್ನ ಮುಂದಿನ ಯೋಜನೆಗಳ ಬಗ್ಗೆ ಕನಸ್ಸು ಕಾಣುತ್ತೇನೆ" ಎಂದು ಶ್ರೀಯುತರು ಹೇಳುವುದರಿಂದ ಅವರ 24 ಗಂಟೆಗಳೂ ದುಡಿಮೆಗಾಗಿಯೇ ವಿನಿಯೋಗವಾದಂತೆಯೇ ಆಗುತ್ತದೆ. ಈ ರೀತಿ ದುಡಿದರೆ ಜೀವನದಲ್ಲಿ ಹಿಂದುಳಿಯಲು ಸಾಧ್ಯವೆ? ಇದೇ ಅವರು ಮುಟ್ಟಿದ್ದೆಲ್ಲವೂ ಚಿನ್ನವಾಗುವ ಹಿಂದಿರುವ ಸತ್ಯ. "ಯಂತ್ರಕ್ಕಾದರೂ ಸ್ವಲ್ಪ ವಿರಾಮ ಬೇಕಾಗುತ್ತದೆ ಆದರೆ ಶ್ರೀ ಕುರುಂಜಿಯವರಿಗೆ ಅದರ ಅಗತ್ಯವೂ ಇಲ್ಲವೆಂಬಂತೆ ಕಾಣುತ್ತದೆ" ಎಂದು ಜನರು ಮಾತಾಡುವುದು ನಿತ್ಯದ ಸಂಗತಿಯಾಗಿದೆ.

**ಮಣ್ಣಿನ ಮಕ್ಕಳ ಕೀರ್ತಿಪತಾಕೆ ಮುಗಿಲಿಗೇರಿಸಿದ ಮುಂದಾಳು :**

ಶ್ರೀ ಕುರುಂಜಿಯವರು ಮೂಲತಃ ಮಣ್ಣಿನ ಮಗ. ಕೃಷಿಯೇ ಅವರ ಜೀವನ ಮತ್ತು ಸಾಧನೆಯ ಮೂಲಾಧಾರ. ತಮ್ಮ ಕೃಷಿಯ ವರಮಾನದಿಂದಲೇ ಅಭಿವೃದ್ಧಿ ಕಾರ್ಯಗಳನ್ನು ನಿರ್ವಹಿಸುತ್ತಿರುವುದೆಂದರೆ ಯಾರಿಗೂ ಆಶ್ಚರ್ಯವಾಗಬಹುದಾದರೂ ಇದೊಂದು ಸತ್ಯ ಸಂಗತಿ. ಶ್ರೀಯುತರು ಕೈಗೆತ್ತಿಕೊಂಡು ವಿಷಯದಲ್ಲಿ ಅವರೆ ಅದ್ವಿತೀಯರೆಂದಾಗುತ್ತಾರೆ. ಕಾರಣ ಅದನ್ನೂ ಅವರು ಒಂದು ತಪಸ್ಸಿನ ಹಾಗೆ ಭಾವಿಸುತ್ತಾರೆ. ಅವರು ಕೃಷಿಯಲ್ಲಿ ಸಾಧಿಸಿರುವ ಅದ್ಭುತ ಪ್ರಗತಿ ಯಾರಿಗೂ ಬೆರಗು ಹುಟ್ಟಿಸುವಂತಹದು. ಸುಮಾರು 35 ಎಕರೆಗೂ ಮೀರಿದ ಭೂಮಿಯಲ್ಲಿ ಇವರು ಮೂಡಿಸಿರುವ ಕೃಷಿಯ ಚಿತ್ತಾರಕ್ಕೆ ತಾಯಿ ಪಯಸ್ವಿನಿಯ ಜಲಭರಿತ ವಿಶಾಲ ಮಡುವುಗಳೇ ಬಣ್ಣಗಳು. ಕಲಾಕಾರನೊಬ್ಬ ತನ್ನ ಸುಂದರ ಭಾವನೆಗಳಿಗೆ ಬಣ್ಣದ ರೂಪ ಕೊಡುವಂತೆ ಶ್ರೀ ಕುರುಂಜಿಯವರು ತಮ್ಮ ಅಡಿಕೆ ತೋಟವನ್ನು ತಿದ್ದಿ, ತೀಡಿ, ನೀರುಣಿಸಿ ಪೋಷಿಸಿ ಬೆಳಸಿ ನಿಲ್ಲಿಸಿದ್ದಾರೆ. ತಾಯಿ ಮಗುವನ್ನು ನೋಡಿಕೊಂಡಂತೆ ಇವರು ತಮ್ಮ ಅಡಿಕೆಯ ಮರಗಳ ಲಾಲನೆ ಪಾಲನೆಯನ್ನು ಮಾಡುತ್ತಿರುವುದರಿಂದ ಭೂತಾಯಿ ಒಲಿದು ಬಂಗಾರದ ಮಳೆಗರೆಯುತ್ತಿದ್ದಾಳೆ. ಈ ವಿಷಯದಲ್ಲಿ ಇವರ ಧರ್ಮಪತ್ನಿ ಶ್ರೀಮತಿ ಜಾನಕಿ ಇವರ ದುಡಿಮೆ ಮತ್ತು ಶ್ರದ್ಧೆಯನ್ನು ಎಷ್ಟು ವಿವರಿಸಿದರೂ ಅದು

14ನೇ ಪುಟಕ್ಕೆ

# ಬೆಂಗಳೂರಿನ ಕೊಡಗು ಮತ್ತು ದಕ್ಷಿಣ ಕನ್ನಡ ಗೌಡ ಸಮಾಜದ ರೂಪು ರೇಖೆಗಳು ಹಾಗೂ ಸಾಧಿಸಿದ ಕಾರ್ಯಗಳು

1964ರಲ್ಲಿ ಬೆಂಗಳೂರಿನಲ್ಲಿ ಮೊಟ್ಟಮೊದಲು "ಕೊಡಗು ಗೌಡ ಸಮಾಜ" ಎಂಬ ನಾಮಾಂಕಿತದಿಂದ ಪ್ರಾರಂಭವಾಯಿತು. ಈ ಸಮಾಜದ ಉದ್ದೇಶವು ಕೊಡಗು ಗೌಡರ ಸಾಂಸ್ಕೃತಿಕ ಚಟುವಟಿಕೆಗಳನ್ನು ಆಚರಿಸುವುದು ಹಾಗೂ ಕೊಡಗಿನಿಂದ ಬಂದ ಗೌಡರು ಬೆಂಗಳೂರಿನಲ್ಲಿ ನೆಲಸಿದವರು ವರ್ಷದಲ್ಲಿ ಒಂದೆರಡು ಸಲ ಬಂದು ಸ್ಥಳದಲ್ಲಿ ಸೇರಿ ಸಂತೋಷದಿಂದ ಕಾಲ ಕಳೆಯುವ ರೀತಿಯಾಗಿತ್ತು. ಆ ರೀತಿ 1968ರ ವರೆಗೆ ನಡೆದು 1968 ರಲ್ಲಿ ಸಮಾಜದವರು "ಕೊಡಗು ಗೌಡ ಸಂಸ್ಕೃತಿ" ಎಂಬ ಸ್ಮರಣ ಸಂಚಿಕೆಯನ್ನು ಪ್ರಕಟಿಸಿ ಗೌಡರ ಚಾರಿತ್ರಿಕ- ಹಿನ್ನಲೆ ಗೌಡರ ಹುಟ್ಟಿನಿಂದ ಸಾಯುವ ವರೆಗಿನ ಪದ್ಧತಿಗಳು ಸೋಬಾನೆ ಹಾಗೂ ಅರೆಭಾಷೆಯ ಮತ್ತು ತುಳು ಭಾಷೆಯ ಹಾಡುಗಳನ್ನು ಪ್ರಕಟಿಸಿ ಗೌಡರ ಇತಿಹಾಸದಲ್ಲಿ ಪುಸ್ತಕದ ರೂಪದಲ್ಲಿ ಮೊತ್ತಮೊದಲಿನ ಪ್ರಕಟಣೆ ಯನ್ನು ಗೌಡ ಬಾಂಧವರಿಗೆ ಓದುವ ಸಂದರ್ಭವನ್ನು ಕಲ್ಪಿಸಿ ಕೊಟ್ಟರು, ಎಂಬುದಾಗಿ ಹೇಳಲು ಹೆಮ್ಮೆಯಾಗಿದೆ. ಇದೇ ಸಮಯದಲ್ಲಿ ಈ ಸಮಾಜಕ್ಕೊಂದು ಉಪನಿಯಮವನ್ನು 968ನೇ ಇಸವಿಯ ಮಹಾಸಭೆಯಲ್ಲಿ ಮಂಡಿಸಲಾಗಿ ಕೊಡಗಿನಿಂದಲೂ ಹಾಗೂ ದಕ್ಷಿಣ ಜಿಲ್ಲೆಯಿಂದ ಸಭೆಗೆ ಹಾಜರಾದ ಕುಲಬಾಂಧವರುಗಳ ಸಲಹೆಯ ಮೇರೆಗೆ ಕೊಡಗು ಗೌಡ ಸಮಾಜದ ಬದಲಾಗಿ "ಗೌಡ ಸಮಾಜ ಬೆಂಗಳೂರು" ಎಂಬುದಾಗಿ ಹೆಸರಿಟ್ಟ ಉಪನಿಯಮವನ್ನು ಮಹಾಸಭೆಯು ಅಂಗೀಕರಿಸಿತು. ಆದರೆ ಮಹಾಸಭೆಯ ನಂತರ ಹಲವಾರು ಮಹನೀಯರು "ಗೌಡ ಸಮಾಜದ ಬೆಂಗಳೂರು" ಎಂಬ ಹೆಸರು ಸರಿಯಲ್ಲವೆಂಬುದಾಗಿ ಆರೋಪವನ್ನು ಎತ್ತಿದುದರಿಂದ 1969ರಲ್ಲಿ ಒಂದು ವಿಶೇಷ ಮಹಾಸಭೆಯನ್ನು ಕರೆದು ಕೊಡಗು ಮತ್ತು ದಕ್ಷಿಣ ಕನ್ನಡ ಗೌಡ ಸಮಾಜ ಎಂಬುದಾಗಿ ಪುನಃ ಹೆಸರನ್ನು ತಿದ್ದುಪಡಿ ಮಾಡಲಾಯಿತು. ಇದಕ್ಕೂ ಕೆಲವರು ಒಪ್ಪದೆ ಹೊರಗೆ ಬಂದು "ಕೊಡಗು ಗೌಡ ಸಮಾಜ" ವೆಂಬ ಇನ್ನೊಂದು ಸಮಾಜವನ್ನು ಕಟ್ಟಿದರು ಆದರೆ "ಕೊಡಗು ಮತ್ತು ದಕ್ಷಿಣ ಕನ್ನಡ ಗೌಡ ಸಮಾಜ" ಎಂಬ ಸಮಾಜದಲ್ಲಿ ಕೊಡಗಿನವರನೇಕರು ಉಳಿದುಕೊಂಡು ದಕ್ಷಿಣ ಕನ್ನಡದ ಗೌಡರೊಡನೆ ಸೇರಿ ಸಮಾಜದ ಅಭಿವೃದ್ದಿಗೆ ದುಡಿದರು.

ಬೆಂಗಳೂರಿನ ಕೊಡಗು ಮತ್ತು ದಕ್ಷಿಣ ಕನ್ನಡ ಗೌಡ ಸಮಾಜದವರು 1969ರಲ್ಲಿ ಕೊಡಗು ಮತ್ತು ದಕ್ಷಿಣ ಕನ್ನಡ ಗೌಡರಿಗೆ ಕರ್ನಾಟಕ ರಾಜಧಾನಿಯೂ ಹಾಗೂ ಭಾರತದ ಕೈಗಾರಿಕಾ ರಾಜಧಾನಿ ಎಂದು ಕರೆಯಲ್ಪಡುವ ಬೆಂಗಳೂರಿಗೆ ಕೊಡಗು ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳಿಂದ ಕೆಲಸಕ್ಕಾಗಿ ಉನ್ನತ ತಾಂತ್ರಿಕ ಹಾಗೂ ಇನ್ನಿತರ ವಿದ್ಯಾಭ್ಯಾಸಕ್ಕಾಗಿ ಬರುವ ಬಡ ಯುವಕ ಯುವತಿಯರು ತಾವು ಬಂದು ಕೆಲಸಗಳನ್ನು ಸುಗಮವಾಗಿ ಹಾಗೂ ಕಡಿಮೆ ಖರ್ಚಿನಲ್ಲಿ ಕೆಲಸ ಕಾರ್ಯಗಳನ್ನು ಮಾಡಿಕೊಂಡು ಹೋಗಲೂ ಹಾಗೂ ಇಲ್ಲಿ ನೆಲಸಿರುವ ಗೌಡರ ಸಾಂಸ್ಕೃತಿಕ, ಸಾಮಾಜಿಕ ವಿದ್ಯಾಭ್ಯಾಸ, ಆರ್ಥಿಕ ಅಭಿವೃದ್ಧಿಯನ್ನು ಮಾಡಿಕೊಳ್ಳಲು ತಮ್ಮದೇ ಆದ ಸ್ವಂತ ಕಟ್ಟಡವನ್ನು ಹೊಂದಿ ಈ ಸಮಾಜದ ಮುಖಾಂತರ ಇಲ್ಲಿಗೆ ಬರುವ ಗೌಡ ಯುವಕ ಯುವತಿಯರಿಗೆ ಸರಕಾರಿ ಹಾಗೂ ಸರಕಾರೇತರ ಸಂಸ್ಥೆಗಳಲ್ಲಿ ಕೆಲಸ ದೊರಕಿಸುವ ಹಾಗೂ ವಿದ್ಯಾ ಸಂಸ್ಥೆಗಳಲ್ಲಿ ಅಂದರೆ ಇಂಜಿನಿಯರಿಂಗ್, ಮೆಡಿಕಲ್ ಹಾಗೂ ಇತರ ಔದ್ಯೋಗಿಕ ಸಂಸ್ಥೆಗಳಲ್ಲಿ ಪ್ರವೇಶವನ್ನು ಪಡೆಯುವುದಕ್ಕೂ ಹಾಗೂ ಬೆಂಗಳೂರು ಮಹಾನಗರದಲ್ಲಿ ನೆಲಸಿರುವ ಗೌಡರ ಕುಟುಂಬದ ಹಾಗೂ ಅವರ ಸಂಬಂಧಿಕರು ತಮ್ಮ ಆರ್ಥಿಕ ಸ್ಥಿತಿಗಳನ್ನು ಉತ್ತಮ ಪಡಿಸುವುದಕ್ಕೆ ಉಪಕಸುಬುಗಳನ್ನು ಪ್ರಾರಂಭಿಸುವುದಕ್ಕೆ, ವ್ಯಾಪಾರ, ಸಣ್ಣ ಸಣ್ಣ ಕೈಗಾರಿಕೆಗಳನ್ನು ಸ್ಥಾಪಿಸುವುದಕ್ಕೆ ಸಹಾಯಕವಾಗುವುದಕ್ಕೆ ತಮ್ಮದೇ ಆದ ಕಟ್ಟಡವನ್ನು ಹೊಂದಬೇಕೆಂಬ ನಿರ್ಣಯವನ್ನು ಮಾಡಿತು.

ಈ ನಿರ್ಣಯದ ಕಾರ್ಯಗತಕ್ಕಾಗಿ ಸರಕಾರದ ವತಿ ಯಿಂದಾಗಲೀ ಬೆಂಗಳೂರಿನ ಪ್ರಾಧಿಕಾರದ ವತಿಯಿಂದಾಗಲೀ ಕರ್ನಾಟಕ ಗೃಹ ನಿರ್ಮಾಣ ಮಂಡಲಿಯ ಮುಖಾಂತರವಾಗಲೀ ನಿವೇಶನವನ್ನು ಹೊಂದುವ ಆಶೆಯಿಂದ ಈ ದಿಶೆಯಲ್ಲಿ ಹಲವಾರು ಪ್ರಯತ್ನಗಳು ನಡೆದವು. ಈ ಪ್ರಯತ್ನಗಳಿಗೆ ಸಂಬಂಧ ಪಟ್ಟವರಿಂದ ಹೆಚ್ಚಿನ ಪ್ರೋತ್ಸಾಹ ದೊರೆಯದ್ದರಿಂದ ಸಮಾಜವೇ ಹಣವನ್ನು ಸಂಗ್ರಹಿಸಿ ಸ್ವಂತವಾಗಿ ತನ್ನ ಆರ್ಥಿಕ ಸ್ಥಿತಿಯನ್ನನುಸರಿಸಿ ನಿವೇಶನವನ್ನು ಕೊಂಡುಕೊಳ್ಳುವ ತೀರ್ಮಾನಕ್ಕೆ ಬಂದಿತು.

1969ರಲ್ಲಿ ಕೊಡಗು ಮತ್ತು ದಕ್ಷಿಣ ಕನ್ನಡ ಗೌಡ ಸಮಾಜದವರು ಬೆಂಗಳೂರಿನ ಗಂಗೇನಹಳ್ಳಿ ಬಡಾವಣೆಯಲ್ಲಿ 40 × 60 ಅಡಿ ವಿಸ್ತೀರ್ಣದ ಒಂದು ನಿವೇಶನವನ್ನು ಸಮಾಜಕ್ಕಾಗಿ ವಿಕ್ರಯಿಸಲು ಒಪ್ಪಂದವನ್ನು ಮಾಡಿಕೊಂಡು 1970ರಲ್ಲಿ ಕ್ರಯಕ್ಕೆ ಪಡಕೊಂಡರು 1970ರಲ್ಲಿ ಈ ಸಮಾಜವು "ಕೊಡಗು ಮತ್ತು ದಕ್ಷಿಣ ಕನ್ನಡ ಗೌಡ ಸಮಾಜದ ಸಂಸ್ಕೃತಿ" ಎಂಬ ಹೊತ್ತಿಗೆ ಯನ್ನು, 1968ರ ಕೊಡಗು ಗೌಡ ಸಮಾಜದ ಸಂಸ್ಕೃತಿ ಸಂಚಿಕೆಯ ಲೇಖನ ಹಾಡು ಮತ್ತು ಸೋಬಾನೆಗಳ ಜೊತೆಗೆ ಇನ್ನೂ ಹೆಚ್ಚಿನ ಮಾಹಿತಿಯನ್ನು ಕೊಡುವ ಗೌಡರ ಚರಿತ್ರೆ, ಪದ್ಧತಿಗಳು, ಸೋಬಾನೆ ಗಳು ಹಾಡುಗಳಿಂದ ಕೂಡಿದ ಪ್ರಕಟಣೆಯನ್ನು ಹೆಚ್ಚಿನ ಜನರಿಗೆ ಉಪಯೋಗವಾಗುವಂತೆ 1970ರಲ್ಲಿ ಇನ್ನೊಂದು ಸಂಚಿಕೆಯನ್ನು ಪ್ರಕಟಿಸಿತು. 1970ರಲ್ಲಿ ಇನ್ನೊಂದು ಸ್ಮರಣ ಸಂಚಿಕೆಯನ್ನು ಪ್ರಕಟಿಸಿತು. ನಂತರ 1996ರಲ್ಲಿ ಗೌಡ ಸಂಸ್ಕೃತಿ ಮತ್ತು ಕೈಪಿಡಿಯನ್ನು ಹೊರಡಿಸಿತು. 1997ರಲ್ಲಿ ದಿವಂಗತ ನಿಡ್ಯಮಲೆ ಮುದ್ದಪ್ಪನವರ ಜನ್ಮ ಶತಾಬ್ದಿಯನ್ನು ಆಚರಿಸಿ, ಅವರ ವಿಷಯ ದಲ್ಲಿ ಸುಮಾರು 80 ಪುಟಗಳ ಸ್ಮರಣೆ ಸಂಚಿಕೆಯನ್ನು ಪ್ರಕಟಿಸಿತು.

1970ರಿಂದ ಇಲ್ಲಿಯ ವರೆಗೆ ಆಡಳಿತ ಮಂಡಳಿಯವರು ಹಾಗೂ ಇತರ ವ್ಯಕ್ತಿಗಳು ಕೊಡಗು ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಪ್ರವಾಸ ಕೈಕೊಂಡು ಚಂದಾವನ್ನು ಎತ್ತಿ ಗಂಗೇನ ಹಳ್ಳಿಯ ನಿವೇಶನದಲ್ಲಿ ಅಡಿಪಾಯವನ್ನು ಹಾಕಿದರು. ಈ ಕೆಲಸವು ಮುಂದುವರಿಯ ಬೇಕಾದರೆ ಇನ್ನು ಎರಡು ಮೂರು ಲಕ್ಷ ರೂಪಾಯಿಗಳ ಹಣ ಸಂಗ್ರಹವಾಗಬೇಕಾಗಿದೆ.

ಇಲ್ಲಿರುವ ಸಮಾಜದ ಸದಸ್ಯರು ಹೆಚ್ಚಿನವರು ಮೂರನೆ ಮತ್ತು ನಾಲ್ಕನೆ ದರ್ಜೆಯ ನೌಕರರೂ ಕಾರ್ಮಿಕರೂ ಆಗಿರುವುದರಿಂದ ಸಮಾಜದ ಕಾರ್ಯಕಲಾಪಗಳಿಗೆ ಹೆಚ್ಚಿನ ಆಸಕ್ತಿಯಿಂದ ಕೆಲಸ ಮಾಡಲು ಬಿಡುವಿಲ್ಲದ ಕಾರಣದಿಂದ ಬೆಂಗಳೂರಿನಿಂದ ತಮ್ಮ ತಮ್ಮ ಊರುಗಳಿಗೆ ಆಗಾಗ್ಗೆ ಹೋಗಿ ಈ ಕೆಲಸಕ್ಕಾಗಿ ಹಣ ಸಂಗ್ರಹ ಮಾಡುವುದಕ್ಕೆ ಸಾಧ್ಯವಾಗದೆ ಹೋಗಿದೆ.

ಅದೂ ಅಲ್ಲದೆ ಕೊಡಗು ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ವಾಸಿಸುವ ಹೆಚ್ಚಿನ ಗೌಡರಿಗೆ ಬೆಂಗಳೂರಿನಲ್ಲಿ ನಮ್ಮದೇ ಕಟ್ಟಡವು ಅತಿ ಶೀಘ್ರದಲ್ಲಿ ಆದರೆ ನಮ್ಮ ಯುವಕ ಹಾಗೂ ಯುವತಿಯರ ಏಳಿಗೆಗೆ ಇದರಿಂದ ಪ್ರಯೋಜನವಾಗುವುದೆಂಬ ಮನವರಿಕೆ ಆದಂತೆ ನನಗೆ ಕಂಡು ಬರುವುದಿಲ್ಲ. ಕಾರಣವೇನೆಂದರೆ ಇಲ್ಲಿನ ಕಾರ್ಯಕರ್ತರು ಕೊಡಗು ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಿಗೆ ಚಂದಾ ವಸೂಲಾತಿಗೆ ಹೋದರೆ ಕೊಡಗಿನಲ್ಲಿ ಅಥವಾ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇರುವ ತಮಗೆ ಬೆಂಗಳೂರಿನಲ್ಲಿ ಕಟ್ಟಡಕಟ್ಟಿ ಏನಾಗಬೇಕೆಂಬ ಧೋರಣೆ ಇರುವುದು ಕಂಡು ಬರುತ್ತಿದೆ. ಇದರಿಂದ ಚಂದಾ ವಸೂಲಾತಿಗೆ ಹೋದ ಕಾರ್ಯಕರ್ತರ ಉತ್ಸಾಹ ತಗ್ಗಿದೆ. ಇನ್ನು ಮುಂದೆ ಯಾವ ರೀತಿಯಲ್ಲಿ ಕಟ್ಟಡದ ಕೆಲಸ ಮುಂದುವರಿಸಬೇಕೆಂಬ ಯೋಚನೆ ಇಲ್ಲಿನ ಜನರಿಗೆ ಆಗಿದೆ.

1982ರಲ್ಲಿ ಬೆಂಗಳೂರಿನ ಕೊಡಗು ಮತ್ತು ದಕ್ಷಿಣ ಕನ್ನಡ ಗೌಡ ಸಮಾಜದ ಪರವಾಗಿ ಕೊಡಗು ಮತ್ತು ದಕ್ಷಿಣ ಕನ್ನಡ ಗೌಡ ಜನರ ಪ್ರತಿಯೊಂದು ಕುಟುಂಬದವರಿಗೆ ಬೆಂಗಳೂರಿನಲ್ಲಿ ನಿವೇಶನ ಪಡೆಯುವ ಯೋಜನೆಯಿಂದ ಈ ಜನರು ಅತಿ ಹೆಚ್ಚಿನ ಸಂಖ್ಯೆಯಲ್ಲಿ ಇಲ್ಲಿಗೆ ಬಂದು ನೆಲಸಿ ತಮ್ಮ ಆರ್ಥಿಕ ವಿದ್ಯಾಭ್ಯಾಸ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳ ಅಭಿವೃದ್ಧಿ ಸಾಧಿಸಲು ಬೆಂಗಳೂರಿನ ಹತ್ತಿರದ ಹಳ್ಳಿಗಳಲ್ಲಿ 23 ಎಕ್ರೆ ಭೂಮಿಯನ್ನು 17ಲಕ್ಷ ರೂಪಾಯಿಗಳಿಗೆ ವಿಕ್ರಯಿಸಿ 250 ಜನರಿಗೆ ಮನೆ ಕಟ್ಟುವ ನಿವೇಶನಗಳನ್ನು ಹಂಚಲು ಏರ್ಪಾಡು ಮಾಡಿ, ಮೊದಲು ಈ ಸಹಕಾರ ಸಂಘದ ಹೆಸರು ಕೊಡಗು ಮತ್ತು ದಕ್ಷಿಣ ಕನ್ನಡ ಗೌಡ ಗೃಹ ನಿರ್ಮಾಣ ಸಹಕಾರ ಸಂಘವೆಂಬುದಾಗಿ ಹೆಸರಿಸಿದಾಗ ಸರ್ಕಾರದವರ ವಿರೋಧವಿದ್ದುದರಿಂದ ಅದನ್ನು ಕೆಂಪೇಗೌಡ ಗೃಹ ನಿರ್ಮಾಣ ಸಹಕಾರ ಸಂಘವೆಂಬುದಾಗಿ ಹೆಸರು ಬದಲಾಯಿಸಲಾಯಿತು. ಇಲ್ಲಿಯವರೆಗೆ ಪೂರ್ತಿ ಹಣ ಪಾವತಿ ಮಾಡಿದವರಿಗೆಲ್ಲಾ 95% ಸದಸ್ಯರ ಹೆಸರಿಗೆ ನೊಂದಾವಣೆ ಮಾಡಿಸಲಾಗಿದೆ. ಸರ್ಕಾರದ ಹಲವಾರು ಕಾನೂನಿನ ಅಡಚಣೆಯನ್ನು ನಿವಾರಿಸಬೇಕಾದುದರಿಂದ ಕೆಲವೇ ವರ್ಷಗಳಲ್ಲಿ ಆಗಬೇಕಾದ ಕೆಲಸ ಹಲವಾರು ವರ್ಷಗಳ ನಂತರ ಕಾರ್ಯಸಾಧನವಾಯಿತು. ಈ ಸಮಾಜದ ಕಟ್ಟಡ ನಿರ್ಮಾಣಕ್ಕೆ ಈ ಸಹಕಾರ ಸಂಘದ ಸಾಲವನ್ನು ಪಡೆದು ಈಗ ಪೂರ್ತ ಸಾಲವನ್ನು ಬಡ್ಡಿಸಮೇತ ಮರುಪಾವತಿ ಮಾಡಿ ಕಟ್ಟಡವನ್ನು ಬಾಡಿಗೆಗೆ ಕೊಟ್ಟು ತಿಂಗಳಿಗೆ 80 ಸಾವಿರ ರೂಪಾಯಿ ಬಾಡಿಗೆ ಬರುತ್ತಿದ್ದು ಸಮಾಜದ ಆರ್ಥಿಕ ಸ್ಥಿತಿ ಸುಧಾರಿಸಿದ್ದು 1995 ರಿಂದ ಹಲವಾರು ವಿಧದ ಕಾರ್ಯಕ್ರಮವನ್ನು ಸಮಾಜ ಹಮ್ಮಿಕೊಂಡಿದೆ. ಈಗ ಸಮಾಜದ ವಾರ್ಷಿಕ ಮಹಾಸಭೆಯ ಸಂದರ್ಭದಲ್ಲಿ ವಿವಿಧ ಆಟಗಳು, ಪಂದ್ಯಾಟಗಳು, ಸಂಗೀತ, ನೃತ್ಯ, ಅಭಿನಯ ಪ್ರಬಂಧ ಸ್ಪರ್ಧೆ, ಭಾಷಣ ಸ್ಪರ್ಧೆ, ಸೌಂದರ್ಯ ಸ್ಪರ್ಧೆ, ಸ್ಥಳದಲ್ಲಿಯೇ ಚಿತ್ರ ಬಿಡಿಸುವ ಸ್ಪರ್ಧೆ, ವಾಲಿಬಾಲ್, ಫುಟ್‌ಬಾಲ್, ಬ್ಯಾಡ್ ಮಿಂಟನ್, ಹಾಕಿ, ಕಬ್ಬಡಿ ಮುಂತಾದ ಪಂದ್ಯಗಳ ಸ್ಪರ್ಧೆಗಳನ್ನು ಏರ್ಪಡಿಸಿ 4 ವರ್ಷದ ಹಸುಳೆಯಿಂದ ಹಿಡಿದು 70-80 ವರ್ಷದ ವಯೋವೃದ್ಧರಿಗೂ ಭಾಗವಹಿಸುವ ಸಂದರ್ಭವನ್ನು ಕಲ್ಪಿಸಿಕೊಡಲಾಗಿದೆ.

ಇದಲ್ಲದೆ ಮಹಿಳಾ ವಿಭಾಗವನ್ನು ತೆರೆದು ಮಹಿಳೆಯರಿಗೆ ಹೊಲಿಗೆ ತರಬೇತಿ, ಮಹಿಳಾ ಮತ್ತು ಮಕ್ಕಳ ಸಮಸ್ಯೆಗಳನ್ನು ಕುರಿತು ಚರ್ಚೆ ಹಾಗೂ ನುರಿತ ಪರಿಣತರಿಂದ ಸಲಹೆಗಳನ್ನು ಏರ್ಪಡಿಸಲಾಗುತ್ತಿದೆ

ಇದಲ್ಲದೆ ಆಟೋಟಗಳಲ್ಲಿ ವಿದ್ಯಾ ಪ್ರತಿಭೆಯಲ್ಲಿ ಸಾರ್ವಜನಿಕವಾಗಿ ಹೆಸರು ಪಡೆದ ಎಲ್ಲಾ ಹಂತದ ಮಹನೀಯರನ್ನು ಸತ್ಕರಿಸುವ ವಿದ್ಯಾರ್ಥಿ ವಿದ್ಯಾರ್ಥಿನಿಯರು 7ನೇ ತರಗತಿಯಿಂದ ಮೇಲಿನ ಎಲ್ಲಾ ತರಗತಿಗಳ ಪಬ್ಲಿಕ್ ಪರೀಕ್ಷೆಗಳಲ್ಲಿ ರೇಂಕ್ ಪಡೆದವರಿಗೆ ಸನ್ಮಾನ ಪ್ರಶಸ್ತಿಗಳು ಹಾಗೂ ಬಡ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಸಹಾಯಧನ ನೀಡುವ ಯೋಜನೆಯನ್ನು ಹಾಕಿಕೊಂಡಿದ್ದಾರೆ. ಈ ಎಲ್ಲಾ ಚಟುವಟಿಕೆಗಳಿಗಾಗಿ ವರ್ಷಕ್ಕೆ 40 ರಿಂದ 50 ಸಾವಿರ ರೂಪಾಯಿ ವಿನಿಯೋಗ ಮಾಡು ತ್ತಿದೆ. ತನ್ನ ಆದಾಯದ 20 ರಿಂದ 25%ದ ಹಣವನ್ನು ಖರ್ಚು ಮಾಡುತ್ತಿದೆ. ಅಲ್ಲದೆ ಈ ಹಲವು ವರ್ಷಗಳಿಂದ ವಿವಾಹ ಸಂಪರ್ಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಈ ವರ್ಷ ಮುಖಾಮುಖಿ ಕಾರ್ಯಕ್ರಮ ಏರ್ಪಡಿಸಿ 20ಜನ ಯುವಕರು 22ಜನ ಯುವತಿಯರೂ ಭಾಗವಹಿಸಿ ಕಾರ್ಯಾಕ್ರಮ ಯಶಸ್ವಿಯಾಯಿತು.

ಈ ಕಾರ್ಯಕ್ರಮಗಳಿಂದ ಸಮಾಜವು ತನ್ನ ಸದಸ್ಯರು ಹಾಗೂ ಕುಟುಂಬದ ಎಲ್ಲರಿಗೂ ಭಾಗವಹಿಸುವ ಅವಕಾಶವನ್ನು ಒದಗಿಸುವ ಕಾರ್ಯ ಕ್ರಮದಿಂದ ಜನಾಂಗದ, ಸಾಂಸ್ಕೃತಿಕ, ಶೈಕ್ಷಣಿಕ ಆರ್ಥಿಕ ವಿಷಯಗಳಲ್ಲಿ ಅಭಿವೃದ್ಧಿ ಹೊಂದಲು ಕಾರ್ಯಕ್ರಮಗಳನ್ನು ಮುಂದುವರಿಸಿಕೊಂಡು ಬರುತ್ತಿದೆ ಈ ರೀತಿಯ ಕಾರ್ಯಕ್ರಮಗಳನ್ನು ದಕ್ಷಿಣ ಕನ್ನಡ ಜಿಲ್ಲೆಯ ಹಾಗೂ ಕೊಡಗಿನ ಸಂಘ ಸಂಸ್ಥೆಗಳು ಸಹ ಹಮ್ಮಿಕೊಂಡರೆ ಜನಾಂಗದ ಪ್ರತಿಯೊಬ್ಬ ಪ್ರಜೆಯ ಅಭಿವೃದ್ಧಿಯು ಈಗಿನಕ್ಕಿಂತ ನೂರು ಪಾಲು ಹೆಚ್ಚುವುದರಲ್ಲಿ ಯಾವ ಸಂಶಯವೂ ಇಲ್ಲವೆನ್ನಬಹುದು.

ಸಂಘ ಸಂಸ್ಥೆಗಳು ತನ್ನ ಆದಾಯದ ಕೆಲವು ಭಾಗವನ್ನು ಈ ರೀತಿ ವಿಯೊಗಿಸಿದರೆ ಮಾತ್ರ ಪ್ರಗತಿಗೆ ಸಾಧ್ಯ. ಇದಲ್ಲದೆ ಬರೇ ಊಟ ಉಪಚಾರ ಭಾಷಣಗಳಿಂದ ಸಮಾಜ ಅಭಿವೃದ್ಧಿಯಾಗದು

---

**ಚಿಕಿತ್ಸೆ**

ಮಾನಸಿಕ ಸಮಸ್ಯೆಗಳ್ಗೆ
ಹೋಮಿಯೋಪತಿ ಚಿಕಿತ್ಸೆ
ಆದ್ರೆ, ಅಂವ ಮಾಡ್ತ್ ಹೋಮ್‌ಲಿ (Home)
(ಪತಿ) ಅಂಞ ಖರ್ಚ್‌ನ ಚಿಕಿತ್ಸೆ

ಕೆರೆಮೂಲೆ ಸಂಧ್ಯಾ

---

ಅಕ್ಷರವಿಲ್ಲದ ಬಾಳೆಲ್ಲ ಅಂಧಕಾರದಲ್ಲಿನ ಗೋಳು

## ಕೊಡಗು ಮತ್ತು ದಕ್ಷಿಣ ಗೌಡ ಸಮಾಜದ ಅಧ್ಯಕ್ಷರುಗಳು

| *ಕೊಡಗು ಗೌಡ ಸಮಾಜ* | *ಸಾಧಿಸಿದ ಕೆಲಸ* |
|---|---|
| 1964 to 1966 ದಿ\|\| ಕೆದಂಬಾಡಿ ಮುದ್ದಪ್ಪನವರು ಸ್ಥಾಪಕ ಅಧ್ಯಕ್ಷರು | ಕೊಡಗು ಗೌಡ ಸಮಾಜದ ಸ್ಥಾಪನೆ |
| 1966to 1967 ದಿ\|\| ಚೆರಿಯಮನೆ ಪೊನ್ನಪ್ಪನವರು | |
| 1967to 1968 ಪೂಜಾರಿ ಮೊಣ್ಣಪ್ಪನವರು | ಸಮಾಜಕ್ಕೆ ಬೈಲಾ ತಯಾರಿಸಿದ್ದು. |
| *ಗೌಡ ಸಮಾಜ ಬೆಂಗಳೂರು* | ಗೌಡ ಸಂಸ್ಕೃತಿ ಪುಸ್ತಕ ಹೊರಡಿಸಿದ್ದು. |
| 1968 to 1969 ಪ್ರೊ\|\| ಪಡ್ಡಂಬೈಲು ಮುದ್ದಪ್ಪ ಗೌಡರು | |
| ಕೊಡಗು ಮತ್ತು ದಕ್ಷಿಣ ಕನ್ನಡ ಗೌಡ ಸಮಾಜ, ಬೆಂಗಳೂರು | |
| 1969-1972 ಶ್ರೀ ಪಡ್ಡಂಬೈಲು ವೆಂಕಟರಮಣ ಗೌಡರು | ಸಮಾಜಕ್ಕೊಂದು ನಿವೇಶನವನ್ನು ವಿಕ್ರಯಿಸಿದ್ದು. ಹೆಚ್ಚಿನ ವಿವರ ಗಳಿಂದ ಗೌಡ ಸಂಸ್ಕೃತಿ ಪುಸ್ತಕವನ್ನು ಪ್ರಕಟಿಸಿದ್ದು ಮತ್ತು ಸಮಾಜದ ಬೈಲಾವನ್ನು ನೊಂದಾಯಿಸಿದ್ದು |
| 1972ರಿಂದ 1995 ದಿ\|\| ಡಾ\|\| ಕಾಯರಮಾರ್ ವೀರಪ್ಪಗೌಡರು | ಗೌಡ ಸಮಾಜದ ಕಟ್ಟಡ ಮತ್ತು ಒಂದು ಮಹಡಿಯನ್ನು ಕಟ್ಟಿಸಿದ್ದು. 1987ರಲ್ಲಿ ಸಮಾಜದ ಕಟ್ಟಡವನ್ನು ಉದ್ಘಾಟಿಸಿದ್ದು, ಆಟೋಟ ಸ್ಪರ್ಧೆ ಹಾಗೂ ಸ್ಮರಣ ಸಂಚಿಕೆಯನ್ನು ಬಿಡುಗಡೆ ಮಾಡಿದ್ದು. |
| 1996 -1997-1998 ಪ್ರೊ\|\| ಪೂಜಾರಿ ಮೊಣ್ಣಪ್ಪನವರು | ಗೌಡ ಸಂಸ್ಕೃತಿ ಮತ್ತು ಕೈಪಿಡಿಯನ್ನು ಪ್ರಕಟಿಸಿದ್ದು. 2ನೇ ಮಹಡಿಯನ್ನು ಕಟ್ಟಿಸಿದ್ದು , ಮಹಿಳಾ ಸಂಘ ಸ್ಥಾಪನೆ, ಹೊಲಿಗೆ ತರಬೇತಿ ಕೇಂದ್ರ ತೆರೆದದ್ದು. ದಿ\|\| ನಿಡ್ಯಮಲೆ ಮುದ್ದಪ್ಪನವರ ಜನ್ಮ ಶತಾಬ್ದಿ ಆಚರಿಸಿ ಸ್ಮರಣ ಸಂಚಿಕೆ ಹೊರಡಿಸಿದ್ದು, ವಿವಿಧ ಆಟೋಟಗಳು ಸಾಂಸ್ಕೃತಿಕ ಸ್ಪರ್ಧೆ ಸಂಗೀತ ಸ್ಪರ್ಧೆ, ನೃತ್ಯ ಸ್ಪರ್ಧೆಗಳನ್ನು ಏರ್ಪಡಿಸಿದ್ದು. |
| 1998ರಿಂದ ಶ್ರೀ ದಂಬೆಕೋಡಿ ಆನಂದನವರು | ಸಾಂಸ್ಕೃತಿಕಕ ಆಟೋಟಗಳ ಪ್ರಭಂದಗಳ ಸ್ಪರ್ಧೆ , ಸೌಂದರ್ಯ ಸ್ಪರ್ಧೆ ಪಂದ್ಯಾಟಗಳ ಸ್ಪರ್ಧೆ, ವಿವಾಹವಾಗುವ ಯುವಕ ಯುವತಿಯರ ಮುಖಾ ಮುಖಿ ಕಾರ್ಯಕ್ರಮ. |

## ಕೆಂಪೇಗೌಡ ಗ್ರಾಮೀಣ ಗೃಹ ನಿರ್ಮಾಣ ಸಹಕಾರ ಸಂಘದ ಅಧ್ಯಕ್ಷರುಗಳು

| | |
|---|---|
| 1982 ಶ್ರೀ ಪೂಜಾರಿ ಮೊಣ್ಣಪ್ಪನವರು, ಚೀಫ್ ಪ್ರಮೋಟರ್ | ಜಕ್ಕೂರು ಮತ್ತು ಶ್ರೀ ಗಂಧದ ಕಾವಲ್ ನಲ್ಲಿ 22 ಎಕರೆ ಜಮೀನನ್ನು ನಿವೇಶನಕ್ಕಾಗಿ ಕ್ರಯಕ್ಕೆ ಕೊಂಡುಕೊಳ್ಳಲು ಒಪ್ಪಂದ, ಸಂಘಕ್ಕಾಗಿ ಬೈಲಾ ತಯಾರಿಸಿದ್ದು ಮತ್ತು ಸಂಘವನ್ನು ರಿಜಿಸ್ಟರ್ ಮಾಡಿದ್ದು. |
| 1983-84 ಶ್ರೀ ಪೂಜಾರಿ ಮೊಣ್ಣಪ್ಪನವರು ಸ್ಥಾಪಕಾಧ್ಯಕ್ಷರು | ಜಕ್ಕೂರಿನ 2 ಸರ್ವೆ ನಂಬರ್ ಜಮೀನನ್ನು ಸಂಘದ ಡೈರೆಕ್ಟರ್‌ಗಳ ಹೆಸರಿಗೆ ರಿಜಿಸ್ಟರ್ಡ್ ಮಾಡಿದ್ದು. |
| 1984 ದಿ\|\| ಬನ್ನೂರು ಐತಪ್ಪ ಗೌಡರು | ಜಮೀನಿನ ಕನ್ವರ್ಸನಿಗಾಗಿ ಪ್ರಯತ್ನ. |
| 1984 ರಿಂದ 1990.ರವರೆಗೆ ಕೊಪ್ಪಡ ಲಕ್ಷ್ಮಣಗೌಡರು | ಕೊಂಡ ಜಮೀನಿನಲ್ಲಿ ಲೇಔಟ್ ಮಾಡಿಸಿದ್ದು. ಕನ್‌ವೆರ್ಸನ್ ಮಾಡಿಸಿದ್ದು, |
| 1990 ರಿಂದ 1995 ಡಾ. ಪಡಂಬೈಲು ಮುದ್ದಪ್ಪ ಗೌಡರು | 23 ಜನರಿಗೆ ನಿವೇಶನ ರಿಜಿಸ್ಟರ್ ಮಾಡಿಸಿದ್ದು. ಲೇಔಟ್ ಕೆಲಸವನ್ನು ಪೂರೈಸಿದ್ದು. |
| 1995 ರಿಂದ ನಂಗಾರು ನಾಣಯ್ಯನವರು | ಜಕ್ಕೂರು ಮತ್ತು ಶ್ರೀಗಂದಕಾವಲಿನಲ್ಲಿ ನಿವೇಶನವನ್ನು ಸದಸ್ಯರ ಹೆಸರಿಗೆ ರಿಜಿಸ್ಟರ್ ಮಾಡಿರುವುದು. |

ಪ್ರೊ. ಪೂಜಾರಿ ಮೊಣಪ್ಪ

---

**ಮನೆತುಂಬ ಮಕ್ಕಳಿದ್ದರು ಮಕ್ಕಳಿರೆಡೆ ಸಾಕು**

# ವಿದ್ಯಾವಂತ ನಿರುದ್ಯೋಗಿಗಳಿಗೆ ಮಾರ್ಗದರ್ಶಿ - 2

**ಟಿ. ಪಿ. ಕುಮಾರ ಜಯ**

ಹಿಂದಿನ ಸಂಚಿಕೆಯಿಂದ ಮುಂದುವರೆದಿದೆ.

VII ವಿದ್ಯಾವಂತ ನಿರುದ್ಯೋಗಿಗಳಿಗೆ ವಿವಿಧ ವೃತ್ತಿಗಳಲ್ಲಿ ತರಬೇತಿ ನೀಡುವ ಹಲವಾರು ಕಾರ್ಯಕ್ರಮಗಳನ್ನು ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆಯು ಹಮ್ಮಿಕೊಂಡಿದೆ. ತರಬೇತಿ ಅವಧಿಯಲ್ಲಿ ಶಿಷ್ಯ ವೇತನ ಸಹಿತ ಹಾಗೂ ಶಿಷ್ಯ ವೇತನ ರಹಿತ ತರಬೇತಿಗಳು, ವಸತಿ ಸಹಿತ ಹಾಗೂ ವಸತಿ ರಹಿತ ತರಬೇತಿಗಳಿವೆ. ಅಲ್ಲದೇ ಮೈಸೂರಿನ ಗ್ರಾಮಾಂತರ ಪ್ರದೇಶಗಳಲ್ಲಿ ಕಡ್ಡಾಯವಾಗಿ ಅಪ್ರೆಂಟಿಸ್‌ಗಳ ನೇಮಕಾತಿ ಮಾಡಿಕೊಳ್ಳಬೇಕಾದ ಸುಮಾರು 130 ಉದ್ದಿಮೆಗಳಿವೆ. ಇಲ್ಲಿ ವೃತ್ತಿಪರಕರ್ಮಿಗಳಿಗೆ ಅಪ್ರೆಂಟಿಸ್ ತರಬೇತಿ ನೀಡಲಾಗುವುದು.

**ವಿವರಗಳಿಗೆ ಸಂಪರ್ಕಿಸಿ :** ಜಿಲ್ಲಾ ವ್ಯವಸ್ಥಾಪಕರು,
ಜಿಲ್ಲಾ ಕೈಗಾರಿಕಾ ಕೇಂದ್ರ, ಕಾವೇರಿ
ಸಯ್ಯಾಜಿರಾವ್ ರಸ್ತೆ, ಮೈಸೂರು - 570 001.

VIII ಅಪ್ರೆಂಟಿಸ್ ಶಿಪ್ ಆಕ್ಟ್ 1961 ರ ಪ್ರಕಾರ ಕೈಗಾರಿಕೆಗಳಲ್ಲಿ ಸ್ವಯಂ ಉದ್ಯೋಗಕ್ಕೆ ಅನುವಾಗುವಂತೆ ಅಪ್ರೆಂಟಿಸ್‌ಗಳ ನೇಮಕಾತಿ ಕಡ್ಡಾಯವಾಗಿದೆ. ಈ ಕೆಳಕಂಡ ವೃತ್ತಿಗಳಲ್ಲಿ ಅಪ್ರೆಂಟಿಸ್‌ಶಿಪ್ ತರಬೇತಿ ನೀಡಲಾಗುತ್ತದೆ.

| | | |
|---|---|---|
| 1. ಫಿಟರ್ | 10th Pass | 3 Years |
| 2. ಟರ್‌ನರ್ | " | 3 Years |
| 3. ಮೆಷಿನಿಷ್ಟ್ | " | 3 Years |
| 4. ಮೆಷಿನಿಷ್ (ಗ್ರೈಂಡರ್) | " | 3 Years |
| 5. ಪ್ಯಾಟ್‌ರನ್ ಮೇಕರ್ | 8th Pass | 3 Years |
| 6. ಮೌಲ್ಡರ್ | | 3Years |
| 7. ಫೋರ್ಜರ್ ಮತ್ತು ಹೀಟ್ ಟ್ರೀಚರ್ | 10th Pass | 3 Years |
| 8. ಶೀಟ್ ಮೆಟಲ್ ವರ್ಕರ್ | " | 3 Years |
| 9. ವೆಲ್ಡರ್(ಗ್ಯಾಸ್ ಮತ್ತು ಎಲೆಕ್ಟ್ರಿಕ್) | 8th Pass | 2 Years |
| 10. ಮೋಟಾರ್ ವೆಹಿಕಲ್ ಬಾಡಿ ಬಿಲ್ಡರ್ | 10th Pass | 2 Years |
| 11. ಎಲೆಕ್ಟ್ರೀಷಿಯನ್ | " | 3 Years |
| 12. ಲೈನ್‌ಮನ್ | " | 3 Years |
| 13. ವೈರ್‌ಮ್ಯಾನ್ | 8th Pass | 3 Years |
| 14. ಆಟೋ ಎಲೆಕ್ಟ್ರೀಷಿಯನ್ | 10th Pass | 2 Years |
| 15. ಎಲೆಕ್ಟ್ರೀಷಿಯನ್ ಏರಕ್ರಾಫ್ಟ್ | " | 4 Years |
| 16. ವೈಂಡರ್ ಆರ್ಮೇಚರ್ | " | 3 Years |
| 17. ಕೇಬಲ್ ಜಾಯಿಂಟರ್ | " | 3 Years |
| 18. ಎಲೆಕ್ಟ್ರೀಷಿಯನ್ (ಮೈನ್ಸ್) | " | 3 Years |
| 19. ಎಲೆಕ್ಟ್ರೋ ಪ್ಲೇಟರ್ | " | 3 Years |
| 20. ಕಾರ್‌ಪೆಂಟರ್ | 8th Pass | 3 Years |
| 21. ಪ್ಲಂಬರ್ | 10th Pass | 3 Years |
| 22. ಮೇಸನ್ (ಬಿಲ್ಡಿಂಗ್ ಕನ್‌ಸ್ಟ್ರಕ್ಟರ್) | 8th Pass | 2 Years |
| 23. ಫರ್‌ನಿಚರ್ ಮತ್ತು ಕ್ಯಾಬಿನೆಟ್ ಮೇಕರ್ | " | 3 Years |
| 24. ಸ್ಪೋರ್ಟ್ಸ್ ಗುಡ್ಸ್ ಮೇಕರ್ (ವುಡ್) | " | 2 Years |
| 25. ಮಿಲ್‌ರೈಟ್ ಮ್ಯೆಂಟೆನೆನ್ಸ್ ಮೆಕಾನಿಕ್ | 10th Pass | 3 Years |
| 26. ಮೆಷಿನ್ ಮ್ಯೆಂಟೆನೆನ್ಸ್ (ಟೆಕ್ಸ್‌ಟೈಲ್ ಮೆಷಿನರಿ) | " | 3 Years |
| 27. ಮೆಕಾನಿಕ್ ಮ್ಯೆಂಟೆನೆನ್ಸ್ (ಕೆಮಿಕಲ್ ಪ್ಲಾಂಟ್) | " | 3 Years |
| 28. ಮೆಕಾನಿಕ್ ಡೈರಿ ಮ್ಯೆಂಟೆನೆನ್ಸ್ | " | 3 Years |
| 29. ಮೆಕಾನಿಕ್ ಸ್ಯೂಯಿಂಗ್ ಮೆಷಿನ್ | 8th Pass | 1 Year |
| 30. ಮೆಕ್ಯಾನೈಜ್ ಮೈನಿಂಗ್ ಮೆಷಿನರಿ | 10th Pass | 3 Years |
| 31. ಟೂಲ್ ಅಂಡ್ ಡೈ ಮೇಕರ್ | " | 4 Years |
| 32. ಪ್ಲಾಸ್ಟಿಕ್ ಮೌಲ್ಡ್ ಮೇಕರ್ | " | 4 Years |
| 33. ಇಂಸ್ಟ್ರುಮೆಂಟ್ಸ್ ಮೆಕ್ಯಾನಿಕ್ | " | 3Years |
| 34. ಮೆಕಾನಿಕ್ ಇಂಸ್ಟ್ರುಮೆಂಟ್ಸ್ ಏರ್ ಕ್ರಾಫ್ಟ್ | " | 4 Years |
| 35. ವಾಚ್ ಅಂಡ್ ಕ್ಲಾಕ್ ರಿಪ್ಯೆರರ್ | " | 3 Years |
| 36. ರಿಫ್ರಿಜಿರೇಷನ್ ಅಂಡ್ ಏರ್ ಕಂಡೀಷನಿಂಗ್ ಮೆಕ್ಯಾನಿಕ್ | " | 3 Years |
| 37. ಮೆಕಾನಿಕ್ (ಮೋಟಾರ್ ವೆಹಿಕಲ್) | 8th Pass | 3 Years |
| 38. ಮೆಕಾನಿಕ್ (ಡಿಸಲ್) | " | 3 Years |
| 39. ಮೆಕಾನಿಕ್ (ಟ್ರಾಕ್ಟರ್) | " | 3 Years |
| 40. ಮೆಕಾನಿಕ್ (ಅರ್ತ್‌ಮೂವಿಂಗ್ ಮೆಷಿನರಿ) | 10th Pass | 4 Years |
| 41. ಮೆಕಾನಿಕ್ (ಮೆರೈನ್ ಡಿಸೆಲ್ ಇಂಜಿನ್ಸ್) | 8th Pass | 3 Years |
| 42. ಡ್ರೈವರ್ ಕಂ ಫಿಟ್ಟರ್ | 10th Pass | 3Years |
| 43. ಡ್ರಾಫ್ಟ್‌ಮನ್ (ಸಿವಿಲ್) | 10th Pass | 3 Years |
| 44. ಡ್ರಾಫ್ಟ್‌ಮನ್ (ಮೆ.) | " | 3 Years |
| 45. ಸರ್ವೇಯರ್ | " | 3 Years |
| 46. ಫಿಟ್ಟರ್ ಸ್ಟ್ರಕ್ಚರಲ್ | " | 3 Years |
| 47. ಬಾಯಿಲರ್ ಅಟೆಂಡೆಂಟ್ | " | 3 Years |
| 48. ಸ್ಟೀಮ್ ಟರ್‌ಬೈನ್ ಆಪರೇಟ್ ಕಂ ಆಕ್ಸಿಲಿಯರಿ ಪ್ಲಾಂಟ್ ಆಪರೇಟರ್ | " | 3 Years |
| 49. ಸ್ವಿಚ್ ಬೋರ್ಡ್ ಅಟೆಂಡೆಂಟ್ | " | 3 Years |
| 50. ಹ್ಯಾಂಡ್ ಕಂಪೊಸಿಟರ್ | " | 2 Years |
| 51. ಲಿನೋ ಆಪರೇಟರ್ | " | 3 Years |
| 52. ಮೋನೊ ಕೀ ಬೋರ್ಡ್ ಆಪರೇಟರ್ | " | 3 Years |
| 53. ಮೋನೊ ಕ್ಯಾಸ್ಟರ್ ಆಪರೇಟರ್ | " | 2 Years |
| 54. ಲೆಟರ್ ಪ್ರೆಸ್ ಮೆಷಿನ್ ಮ್ಯೆಂಡರ್ | " | 3 Years |
| 55. ಪ್ರೋಸೆಸ್ ಕ್ಯಾಮರಾಮನ್ | " | 3 Years |
| 56. ರಿಟಚರ್ ಲಿಥೋಗ್ರಾಫಿಕ್ | " | 3 Years |
| 57. ಎನ್‌ಗ್ರೇವರ್ | " | 3 Years |
| 58. ಬುಕ್ ಬೈಂಡರ್ | " | 2 Years |

**ಆರತಿಗೊಬ್ಬ ಮಗಳು ಕೀರ್ತಿಗೊಬ್ಬ ಮಗ**

| | | |
|---|---|---|
| 59.ಪ್ಲೇಟ್‌ಮೇಕರ್ (ಲಿಥೋಗ್ರಾಫಿಕ್) | 10th Pass | 2 Years |
| 60.ಲಿಥೋ ಆಫ್‌ಸೆಟ್ (ಮೆಷಿನ್ ಮೈಂಡರ್) | " | 3 Years |
| 61.ಕುಕ್ (ಜನರಲ್) | " | 3 Years |
| 62.ಕುಕ್ (ವೆಜಿಟೇರಿಯನ್) | " | 1½ Years |
| 63.ಸ್ಟೀವರ್ಡ್ | " | 1½ Years |
| 64.ಬೇಕರ್ ಅಂಡ್ ಕನ್‌ಫೆಕ್ಷನರ್ | " | 2 Years |
| 65.ಹೌಸ್ ಕೀಪರ್ | " | 1½ Years |
| 66.ಹೋಟೆಲ್ ಕ್ಲರ್ಕ್ ಆರ್ ರಿಸೆಪ್‌ಷನಿಸ್ಟ್ ಆರ್ ಫ್ರಂಟ್ ಆಫೀಸರ್ ಅಸಿಸ್ಟೆಂಟ್ | " | 1½ Years |
| 67.ವೀವರ್ | 8th Pass | 6 months |
| 68.ಡಾಫರ್ ಕಂ ಪೀಸರ್ | 8th Pass | 6 months |
| 69.ಟೆಂಡರ್ (ಡ್ರಾಯಿಂಗ್/ಸ್ಪೀಡ್/ಫ್ಲೈ ಫ್ರೇಮ್ಸ್) | " | 6 months |
| 70.ವೈಂಡರ್ (ಟೆಕ್ಸ್‌ಟೈಲ್) | " | 6 months |
| 71.ನಿಟ್ಟರ್ (ಹೊಸೈರಿ) | 10th Pass | 1½Years |
| 72.ಪ್ರಿಂಟಿಂಗ್ ಟೆಕ್ಸ್‌ಟೈಲ್ | 10th Pass | 6months |
| 73.ಕ್ರೀಲ್-ಬಾಯ್-ಕಂ-ವ್ರಾಪರ್ | 8th Pass | 6 months |
| 74.ಸಿರ್ದಾರ್ (ಕೊಲಿಯರಿ) | " | 3 Years |
| 75.ಪಾಟ್ ಫೈಯರ್ ಬ್ಲಾಸ್ಟರ್ (ಮೈನ್ಸ್) | " | 2Years |
| 76.ಮೇಟ್ (ಮೈನ್ಸ್) | " | |
| 77.ಅಟೆಂಡೆಂಟ್ ಆಪರೇಟರ್ (ಸಿ. ಪಿ.) | 10th Pass | 3 Years |
| 78.ಇಂಸ್ಟ್ರುಮೆಂಟ್ ಮೆಕಾನಿಕ್ (ಸಿ. ಪಿ.) | " | 3 Years |
| 79.ಲ್ಯಾಬೋರೇಟರಿ ಅಸಿಸ್ಟೆಂಟ್ | " | 3 Years |
| 80.ಡಿಸೈನರ್ ಅಂಡ್ ಮಾಸ್ಟರ್ ಕಟ್ಟರ್ | " | 2 Years |
| 81.ಟೈಲರ್ (ಮೆನ್) | 8th Pass | 11/2 Years |
| 82.ಟೈಲರ್ (ವುಮೆನ್) | " | 11/2 Years |
| 83.ಟೈಲರ್ (ಜೆನರಲ್) | " | 2 Years |
| 84.ಮೆಕಾನಿಕ್ (ಅಗ್ರಿಕಲ್ಚರ್ ಮೆಷಿನರಿ) | " | 3 Years |
| 85.ಹಾರ್ಟಿಕಲ್ಚರ್ ಅಸಿಸ್ಟೆಂಟ್ | 10 thPass | 2 Years |
| 86.ಸ್ಟಾಕ್ ಮನ್ (ಡೈರಿ) | " | 2 Years |
| 87.ಅಟೆಂಡೆಂಟ್ ಆಪರೇಟರ್ (ಡೈರಿ) | " | 3 Years |
| 88.ಪಂಪ್ ಮೆಷಿನ್ | " | 2 Years |
| 89.ಸ್ಪೋರ್ಟ್ಸ್ ಗೂಡ್ಸ್ ಮೇಕರ್ (ಲೆದರ್) | 8th Pass | 2Years |
| 90.ಲೆದರ್ ಗೂಡ್ಸ್ ಮೇಕರ್ | " | 2 Years |
| 91.ಫೂಟ್‌ವೇರ್ ಮೇಕರ್ | 8th Pass | 2 Years |
| 92.ಫಿನಿಷ್ಡ್ ಲೆದರ್ ಮೇಕರ್ | " | 2 Years |
| 93.ಮೈಂಟೆನೆನ್ಸ್ ಮೆಕಾನಿಕ್ ಫಾರ್ ಲೆದರ್ ಮೆಷಿನರಿ | 10th Pass | 3 Years |
| 94.ಷಿಪ್‌ರೈಟ್ (ಸ್ಟೀಲ್) | " | 3 Years |
| 95.ಪೈಪ್ ಫಿಟ್ಟರ್ | " | 3 Years |
| 96.ರಿಗ್ಗರ್ | 8th Pass | 2 Years |
| 97.ಗ್ಯಾಸ್ ಕಟ್ಟರ್ | " | 2 Years |
| 98.ಷಿಪ್‌ರೈಟ್ (ವುಡ್) | 10th Pass | 2Years |
| 99.ಮೆಕಾನಿಕ್ ರೇಡಿಯೋ ಅಂಡ್ ರಾಡಾರ್ ಏರ್ ಕ್ರಾಫ್ಟ್ | 10th Pass | 4 Years |
| 100. ಎಲೆಕ್ಟ್ರಾನಿಕ್ ಮೆಷಿನ್ | " | 3 Years |
| 101. ಮೆಕ್ಯಾನಿಕ್ ಟೆಲಿವಿಷನ್ (ವೀಡಿಯೋ) | " | 3 Years |
| 102. ಫೋಟೋಗ್ರಾಫರ್ | " | 2 Years |
| 103. ಬ್ರಿಕ್‌ಲೇಯರ್ (ರಿಫ್ರಾಕ್ಟರಿ) | " | 2 Years |
| 104. ಫರ್‌ನೇಸ್ ಆಪರೇಟರ್ (ಸ್ಟೀಲ್ ಇಂಡಸ್ಟ್ರಿ) | 10th Pass | 2 Years |
| 105. ಸ್ಟೀಲ್ ಮೆಲ್ಟಿಂಗ್ ಹೆಡ್ | " | 2 Years |
| 106. ಮಿಲ್ ಹೆಡ್ | " | 2 Years |
| 107. ಕ್ರೇನ್ ಆಪರೇಟರ್ (ಓವರ್ ಹೆಡ್) (ಸ್ಟೀಲ್ ಇಂಡಸ್ಟ್ರಿ) | " | 2 Years |
| 108. ಬ್ಯೂಟಿಷಿಯನ್ | " | 2 Years |
| 109. ಹೇರ್ ಡ್ರೆಸರ್ | " | 2 Years |
| 110. ಹೆಲ್ತ್ ಅಂಡ್ ಸ್ಲಿಮ್ಮಿಂಗ್ ಅಸಿಸ್ಟೆಂಟ್ | " | 2 Years |
| 111. ಸೆರಾಮಿಕ್ ಮೌಲ್ಡರ್ | 8th Pass | 2 Years |
| 112. ಸೆರಾಮಿಕ್ ಕಾಸ್ಟರ್ | " | 2 Years |
| 113. ಸೆರಾಮಿಕ್ ಕಿಲ್ನ್ ಆಪರೇಟರ್ | " | 2 Years |
| 114. ಸೆರಾಮಿಕ್ ಪ್ರೆಸ್ ಆಪರೇಟರ್ | " | 2 Years |
| 115. ಸೆರಾಮಿಕ್ ಮೌಲ್ಡರ್ | " | 2 Years |
| 116. ಸೆರಾಮಿಕ್ ಡೆಕೊರೇಟರ್ | " | 2 Years |
| 117. ಮೌಲ್ಡರ್ (ರಿಫ್ರಾಕ್ಟರಿ) | " | 2 Years |
| 118. ಎನಾಮಲ್ ಗ್ಲೇಜರ್ | " | 2 Years |
| 119. ಇನ್ಸುಲೇಟರ್ ಮೇಕರ್/ಮೆಷಿನ್ ಆಪರೇಟರ್ (ಸೆರಾಮಿಕ್) | 10th Pass | 3 Years |
| 120. ಆಪ್ಟಿಕಲ್ ವರ್‌ಕರ್ | " | 3 Years |
| 121. ಪೈಂಟರ್ (ಜೆನ್) | 8th Pass | 3 Years |
| 122. ಪೈಂಟರ್ (ಮರ್‌ಸಿನ್) | " | 2 Years |
| 123. ಡಾಟಾ ಪ್ರಿಪರೇಷನ್ ಅಂಡ್ ಕಂಪ್ಯೂಟರ್ ಸಾಫ್ಟ್‌ವೇರ್ | 12th Pass | 2 Years |
| 124. ಫೈಬರ್ ರೀನ್‌ಫೋರ್ಸ್‌ಡ್ ಪ್ಲಾಸ್ಟಿಕ್ ಪ್ರೊಸೆಸರ್ | 10th Pass | 2 Years |
| 125. ಪ್ಲಾಸ್ಟಿಕ್ ಪ್ರೊಸೆಸಿಂಗ್ ಆಪರೇಟರ್ | " | 2 Years |
| 126. ಆಟೋ ಮೆಷಿನ್ | 8th Pass | 2 Years |

ತರಬೇತಿ ಅವಧಿಯಲ್ಲಿ ತಿಂಗಳಿಗೆ ರೂ 680.00ರಿಂದ ರೂ. 1020.00ರವರೆಗೆ ಶಿಷ್ಯವೇತನ ನೀಡಲಾಗುವುದು ಫೆಬ್ರುವರಿ 1ರಿಂದ 15ರವರೆಗೆ ಮೊದಲನೇ ಅಧಿವೇಶನದಲ್ಲಿ ಹಾಗೂ ಆಗಸ್ಟ್ 1ರಿಂದ ಆಕ್ಟೋಬರ್ 15ರವರೆಗೆ ಎರಡನೆಯ ಅಧಿವೇಶನದಲ್ಲಿ ಅಪ್ರೆಂಟಿಸ್ ಶಿಪ್‌ಗಾಗಿ ನೇಮಕಾತಿ ಮಾಡಿಕೊಳ್ಳಲಾಗುವುದು. ಅಪ್ರೆಂಟಿಸ್‌ಗಳನ್ನು ಈ ಕೆಳಕಂಡ ಕೈಗಾರಿಕೆ ಕಾರ್ಖಾನೆಗಳಲ್ಲಿ ನೇಮಕಾತಿ ಮಾಡಲಾಗುತ್ತದೆ.

ಮುಂದುವರಿಯುತ್ತದೆ

# ಕೊಡಗೆಂಬ "ಸ್ವರ್ಗಕ್ಕೆ" ಆಯುಷ್ಯವೆಷ್ಟು?

ನಮ್ಮ ದೇಶದ ಹಲವು ರಾಜ್ಯಗಳು ಬಿಸಿಲ ಝಳಕ್ಕೆ ಸಿಕ್ಕಿ ಕಾದ ಬಾಣಲಿಯಂತಾದ ಈ ಹೊತ್ತು.. ತುತ್ತು ಕೂಳಿರಲಿ ಹನಿ ನೀರಿಗೂ ಬರ ಬಂತಲ್ಲ! ಕೋಟಿ ಕೋಟಿ ಹಣ ಸುರಿಸಿದರೂ ನೀರುಸಿಕ್ಕದು, ಕಾಳು ಸಿಕ್ಕದು. ಏಪ್ರಿಲ್, ಮೇ ತಿಂಗಳಲ್ಲಿ ದಿನಂಪ್ರತಿ ಸುದ್ದಿ ಮಾಧ್ಯಮಗಳಲ್ಲಿ ಬರುತ್ತಿರುವ ಸುದ್ದಿ: ಬರ, ಬಿಸಿಗಾಳಿ, ಜನ ದನ ಸಾವು...... ಇತ್ಯಾದಿ. ಅಲ್ಲಿ ಹಾಗಿರಲು ಇಲ್ಲಿ: "ಪ್ರವಾಸಿಗರ ಸ್ವರ್ಗವೋ, ದಕ್ಷಿಣದ ಕಾಶ್ಮೀರವೋ ಮತ್ತೊಂದೋ ಎನಿಸಿಕೊಂಡಿರುವ ಕೊಡಗಿನ ಅರಣ್ಯವೊಂದರ ಈ ಸುಂದರ ಛಾಯಾಚಿತ್ರವನ್ನು ಗಮನಿಸಿ. ಆಹಾ! ಎಷ್ಟು ಸುಂದರ ಎನ್ನುವಿರಿ. ಇದು ಕೊಡಗಿನ ಮದೆನಾಡಿನ ಒಂದು ಕಾಡು. ಕಡುಬೇಸಗೆಯಲ್ಲೂ ಸುರಮ್ಯವೆನಿಸುವ ಈ ಕಾಡು... ಬಣ್ಣ ಬಣ್ಣದ ಹೂ ತಳಿರು ತಳೆದ ಈ ಕಾಡು ಕೊಡಗಿನ ಸೌಂದರ್ಯಕ್ಕೆ ಮೆರುಗು ಕೊಟ್ಟಿದೆ. ಬೆಟ್ಟ ಗುಡ್ಡಗಳ, ನದಿ, ಝರಿಗಳ ಬೆಡಗಿನ ಕೊಡಗು ಕಣ್ಣಿಗೆ ತಂಪನ್ನು ಮನಕ್ಕೆ ಮುದನನ್ನು ನೀಡುತ್ತಿದೆ. ಇಲ್ಲಿ ಕಡು ಬೇಸಗೆಯಲ್ಲೂ ಅಮ್ಮಮ್ಮಾ ಎಂದರೆ ೨೭° ಸೆಂ. ಉಷ್ಣಾಂಶಕ್ಕಿಂತ ಹೆಚ್ಚು ಇಲ್ಲವೇಇಲ್ಲ. ಅತೀ ಕಡಿಮೆ ಎಂದರೆ ೧೭° ಸೆಂ. ಗಿಂತ ಕೆಳಗಿಳಿದುದೇ ಇಲ್ಲ. ಈಗ ಯೋಚಿಸಿ ನೋಡಿ ರಾಜಾ ಸ್ಥಾನವೋ, ಗುಜರಾತೊ, ಒರಿಸ್ಸಾವೋ..೪೬° ಸೆಂ. ಉಷ್ಣಾಂಶದ ಆ ಕುಲುಮೆಯಲ್ಲಿ ಈ ತಂಪಿನ ತವರ್ಮನೆ ಕೊಡಗೆಲ್ಲಿ ಎಂದು."

ಈ ಛಾಯಾಚಿತ್ರದಲ್ಲಿ ರಂಗುರಂಗಾಗಿ ಕಾಣುತ್ತಿರುವುದೆಲ್ಲವೂ ಹೂ ಎಂದು ಭ್ರಮಿಸಬೇಡಿ, ಅದು ಭಿನ್ನ ಭಿನ್ನ ಮರಗಳಲ್ಲಿ ಭಿನ್ನಭಿನ್ನ ಬಣ್ಣದ ಚಿಗುರಿನ ಬಿಂಕ! ಚಾಕಟೆ, ಧೂಪ, ನೋಂಜಳ ಮುಂತಾದ ಮರಗಳ ಚಿಗುರೆಲೆಗಳ ಸಂಭ್ರಮ ಆಹಾ: ಚಿಗುರೇ ಈ ರೂಪದಲ್ಲಿರಲು ಇನ್ನು ಹೂಗಳೋ! ಆ ವರ್ಣನೆ ಮಾಡಿ ನಿಮ್ಮ ಹೊಟ್ಟೆ ಉರಿಸಲಾರೆ. ಈ ಕಾಡಿನಲ್ಲಿ ಬೆತ್ತ, ನೊಗ, ಬಳಂಜಿ, ಹೆಬ್ಬಲಸು ಹಾಗೂ ಬಹಳಷ್ಟು ಮೃದು ಜಾತಿಯ ಮರಗಳಿವೆ. ಬೀಟೆಯೋ, ಹೊನ್ನೆಯೋ, ಮತ್ತಿಯೋ ಈ ಕಾಡಿನಲ್ಲಿಲ್ಲ. ಎಲ್ಲೋ ಅಲ್ಲೊಂದು ಇಲ್ಲೊಂದು ದೇವದಾರು ಮತ್ತು ಬರಿಹೊನ್ನೆ ಮರಗಳಿವೆ. ಹಚ್ಚೇನಿದೆ.

ಭೀಮರಾಜ, ಕಾಳಿಂಗ, ಮಡಿವಾಳ, ಕೋಂಬಕ್ಕಿ, ಚೋರೆ, ಗಿಳಿ, ಮಂಡೆಮುರ್ಕ, ಕೊಟ್ಟು ಮುಡ್ಡ, ಹೊಟ್ಟ ಈ ಮುಂತಾದ ಹಕ್ಕಿಗಳಿವೆ. ಮಂಗಗಳಿವೆ. ಕೆಂಜರಿಯಾಗಲಿ, ಪಾಂಚಾ(ಹಾರುವ ಬೆಕ್ಕು) ವಾಗಲೀ ಇಲ್ಲ. ಕಾಳಿಂಗ ಸರ್ಪ, ಹೆಬ್ಬಾವು, ಹಸಿರಾವು, ಬಾಳೆಕಟ್ಟಹಾವು, ಕೇರೆ ಹಾವು, ಕಾಟಿಮುರ್ಕ ಹಾವುಗಳಿವೆ. ಮುಳ್ಳು ಹಂದಿ, ಕಾಡುಹಂದಿ, ಕಾಡುಕುರಿ, ಕಾಡು ಕೋಳಿ, ಕಿರ್‌ಕೋಳಿಗಳಿವೆ. ಜಿಂಕೆಗಳಾಗಲಿ, ಕಡವೆಗಳಾಗಲಿ, ಆನೆಗಳಾಗಲಿ ಈ ಕಾಡಿನಲ್ಲಿಲ್ಲ. ಏಕೆಂದರೆ ಈ ಕಾಡು ಊರಿನ ನಡುವಿನ ಕಾಡು. ಇಪ್ಪತ್ತು ವರ್ಷಗಳ ಹಿಂದೆ ಚಿಪ್ಪುಹಂದಿ ಮತ್ತು ಉಡಗಳಿದ್ದವು. ಈಗ ಅವುಗಳ ಸದ್ದಡಗಿ ಹೋಗಿದೆ.

ಹಾಲ್ಫೆ ಹಲಸು, ಮಾವು, ನೇರಳೆ, ಗೊಟ್ಟೆ, ಕರ್‌ಮಂಜಿ, ಬೀರುಗದ ಹಣ್ಣುಗಳಿವೆ. ಅಕ್ಕಿ, ತೀನ, ನಾರೆ ಗೆಣಸುಗಳಿವೆ. ಈ ಕಾನನದ ನಡುವೆ ಜುಳುಜುಳು ನಾದಗೈಯುತ್ತ ಹರಿಯುವ ಝರಿ ಇದೆ. ಆ ಝರಿಯ ಕಲ್ಲನ್ನು ಸರಿಸಿದರೆ ಏಡಿಗಳಿವೆ. ಜಿಗಣೆಗಳಿರುವ ಕಾಡಿನ ಮಣ್ಣು ತೇವಯುತವಾಗಿರುತ್ತದೆಂದರ್ಥ. ನಾವಿನ್ನೂ ಜೀವಜಾಲದ ನಂಬಿಟಿನ ಗುಟ್ಟು ತಿಳಿದಿಲ್ಲವಲ್ಲ!

ರಾತ್ರಿ ಹೊತ್ತು ಈ ಕಾಡನ್ನು ನೋಡುವುದ ಇನ್ನೂ ಚಂದ. ಮೋಡದ ಮರೆಯಲ್ಲಿ ಅವಿತುಕೊಂಡ ನಕ್ಷತ್ರ ಲೋಕ ನಮಗೇಕೆ? ಇಲ್ಲಿದೆ ಇಡೀ ತಾರಾಲೋಕ. ಮಿಳ್ ಮಿಳ್ಳನೆ ಮಿನುಗುವ ಅಗಣಿತ ಪ್ರಮಾಣದ ಮಿಣ್‌ಪುಳಿಗಳು. ಇಡೀ ಕಾನನವನ್ನು ಬೇಳಕಿನಂಗಳ ಮಾಡಿಬಿಡುವ ನೋಟ. ಕಣಿವೆ ಕಂದರಗಳಲ್ಲಿ ಏರಿ ಇಳಿದು ಆಟವಾಡುವ ಆ ಬೆಳಕಿನ ಹುಳಗಳು ನಿಜಕ್ಕೂ ಪ್ರಜ್ವಲಿಸುವ ವಜ್ರಗಳು. ಯಾವ ವಿದ್ಯುತ್ ಕಂಬವೂ ಬೇಡ. ಯಾವ ಲೈನ್ ಮ್ಯಾನ್ ಬೇಡ, ಅದಕ್ಕಿಂತಲೂ ಮುಖ್ಯವಾಗಿ ಯಾರ ಅಪ್ಪಣೆಯೂ ಬೇಡ: ಈ ಮಿನುಗುವ ಜೀವಿಗಳಿಗೆ ಬರೇ ಹಾರಾಡುವ ಬೆಳಕಷ್ಟೇ ಅಲ್ಲ. ನೆಲದಲ್ಲೇ ಹರಿದಾಡುವ ಎರಡು ಅಂಗುಲದಷ್ಟು ಉದ್ದ ಬೆಳಕಿನ ಹುಳುಗಳೆಷ್ಟು ಬೇಕು ? ರೆಕ್ಕೆಯಿಲ್ಲ, ಹಾರಲಾಗದ ಆ ಹುಳುಗಳು ನೀಲಿ ಬಣ್ಣದ ಬೆಳಕನ್ನು ಸೂಸುತ್ತಾ ಅನ್ನ ಹುಡುಕುವ ಸಂಭ್ರಮ.

ಈ ಎಲ್ಲಾ ಜೀವಿಗಳ ಮನೆಯೇ ಈ ಕಾಡು.

ಆದರೆ ಇದೇ ಕಾಡು ಬಯಲಾದರೆ?

ಕಾಫಿಗೆ ಬೆಲೆ ಏರಿದಂತೆಲ್ಲಾ ಮರಗಳು ನೆಲಕ್ಕುರುಳುತ್ತಿವೆ. ತೋಟ ವಿಶಾಲವಾಗುತ್ತಿದೆ. ಮನುಷ್ಯ ಸ್ವಾರ್ಥಿ, ಕ್ರೂರಿ, ಎಂದೆಲ್ಲಾ ಹೇಳಿಕೊಳ್ಳುತ್ತೇವೆ. ಆದರೆ ರೈತನೂ ಬದುಕಬೇಕಲ್ಲ? ಎಲ್ಲರೊಡನೆ ಸಮಾನವಾಗಿ ಬಾಳಬೇಕಾದರೆ ಅವನ ಒಡೆತನದ ಜಮೀನನ್ನು ಬದಲಾಗುತ್ತಿರುವ ಪರಿಸ್ಥಿತಿಗೆ ಸರಿಯಾಗಿ ಬದಲಾಯಿಸಿಕೊಳ್ಳಬೇಕಲ್ಲವೆ. ರೈತನೂ ಉಳಿಯಬೇಕು ಕಾಡೂ ನಾಶವಾಗಬಾರದು. ಹಾಗಾದರೆ ನಾವೇನು ಮಾಡಬೇಕು?

ಏಲಕ್ಕಿಯಂತಹ ಬೆಳೆ ಬೆಳೆಯಲು ಪ್ರೋತ್ಸಾಹ ಕೊಡಬೇಕು. ಏಲಕ್ಕಿ ಕೆ.ಜಿ. ಯೊಂದರ ಕನಿಷ್ಠ ಬೆಲೆ 500 ರೂಗಳಿಗಿಂತ ಕೆಳಗಿಳಿಯಕೂಡದು. ಈ ನಿಯಮವನ್ನು ಸರಕಾರ ತಂದರೆ ಮತ್ತು "ಸ್ಥಿರಬೆಲೆ" ಉಳಿದರೆ ಈ ಛಾಯಾ ಚಿತ್ರದಂತಹ ಕಾಡು ಉಳಿದೇ ಉಳಿಯುತ್ತದೆ. ಇಲ್ಲವಾದರೆ ಕಾಲು ಶತಮಾನದ ಉರುಳುವ ಮುನ್ನ ಕಾಡು ಉರುಳುತ್ತದೆ. ನಿತ್ಯದ ಉಷ್ಣತಾಮಾನ ೪೫° ಸೆ. ಗಿಂತ ಹೆಚ್ಚಾಗಬಹುದು. ನೀರಿಗಾಗಿ ಸಮುದ್ರಕ್ಕೇ ಹೋಗ ಬೇಕಾಗಬಹುದು.

**ಬಾರಿಯಂಡ. ಜೋಯಪ್ಪ, ಮದೆ**

---

ಹುಡುಗರು
ತಮ್ಮ ಕಡೆಯೇ ನೋಡುತ್ತಾರೆ
ಎಂದು ಹುಡುಗಿಯರು
ದೂರುತ್ತಾರೆ
ಅದನ್ನವರು ಹೇಗೆ
ತಿಳಿಯುತ್ತಾರೆ?

---

ಅಪಘಾತಕ್ಕೆ ಅವಸರವೇ ಕಾರಣ

## ಸಂಗಾತಿ ಭವಿಷ್ಯ : ಜೂನ್ 1ರಿಂದ 15, 2000

ಜೋತಿಷ್ಯರು : ಗಿರೀಶ್‌ಕುಮಾರ್, ಕೊಯನಾಡು

**ಮೇಷ ರಾಶಿ :** ದೇಹದಲ್ಲಿ ಅನಾರೋಗ್ಯ ಕಾಡುವ ಸಂಭವವಿದೆ. ಅನೇಕ ರೀತಿಯಿಂದ ವಂಚನೆಗೆ ಒಳಗಾಗುವಿರಿ. ಹಣಕಾಸಿನ ವ್ಯವಹಾರದಲ್ಲಿ ನಷ್ಟ ಅನುಭವಿಸುವಿರಿ. ಶತ್ರುಗಳ ಕಿರಿಕಿರಿ ತಪ್ಪದ್ದಲ್ಲ. ಮನಸ್ಸಿಗೆ ನೆಮ್ಮದಿ ಇರಲಾರದು. ಪಂಚೇಂದ್ರಿಯಗಳಿಗೆ ಕಡಿವಾಣ ಹಾಕಿರಿ.

**ವೃಷಭ ರಾಶಿ :** ದೈವಾನುಕೂಲ ಸ್ವಲ್ಪಮಟ್ಟಿಗೆ ಇದೆ. ಆಪ್ತ ಬಂಧುಗಳಲ್ಲಿ ಕಲಹವೇರ್ಪಡುವುದು. ಅನಾರೋಗ್ಯ ಕಾಡುವುದು. ಜನ್ಮರಾಶಿಯಲ್ಲಿ ಶನಿ ಇರುವುದು. ವ್ಯವಹಾರ ಉದ್ಯೋಗದಲ್ಲಿ ಅಪಜಯ ಅನುಭವಿಸುವಿರಿ. ಶನಿ ಮಂತ್ರ ಜಪಿಸಿರಿ. "ಓಂ ಶನೀಶ್ವರಾಯ ನಮಃ"

**ಮಿಥುನ ರಾಶಿ :** ವ್ಯವಹಾರ ಉದ್ಯೋಗದಲ್ಲಿ ದಕ್ಕೆ ಬರಲಾರದು. ಆದರೆ ಹಣಕಾಸಿ ವ್ಯವಹಾರದಲ್ಲಿ ಸ್ವಲ್ಪ ಮಟ್ಟಿಗೆ ಮಾತ್ರ ಲಾಭಾಂಶ ದೇಹದಲ್ಲಿ ಪಿತ್ತ ಸಂಬಂಧ ವ್ಯಾದಿಗಳು ಕಾಣಿಸಿಕೊಳ್ಳುವುದು. ಮಿತ್ರರೊಡನೆ ವ್ಯವಹರಿಸುವಾಗ ಸಮಾಧಾನದಿಂದ ವ್ಯವಹರಿಸಿ.

**ಕರ್ಕಾಟಕ ರಾಶಿ :** ಉದ್ಯೋಗದಲ್ಲಿ ಜಯ ನಿಮ್ಮ ಪಾಲಿಗಿದೆ. ಹಣಕಾಸಿನ ವ್ಯವಹಾರದಲ್ಲಿ ತುಂಬ ಪ್ರಗತಿಯನ್ನು ಸಾಧಿಸುವಿರಿ. ಹೊಸ ಭೂಮಿ ಖರೀದಿಗೆ ಉತ್ತಮ ಕಾಲ. ಶುಭ ಫಲಗಳು ಕಾಣುವುದು.

**ಸಿಂಹ ರಾಶಿ :** ಕೈಗೊಂಡ ಕಾರ್ಯಗಳಲ್ಲಿ ಸಫಲತೆಯನ್ನು ಅನುಭವಿಸುವಿರಿ. ಹಣಕಾಸಿನ ವ್ಯವಹಾರದಲ್ಲಿ ನೆಮ್ಮದಿ. ಸಂಸಾರ ವಲಯದಲ್ಲಿ ತುಸು ನೆಮ್ಮದಿ. ದೇವತಾರಾಧನೆ ಮಾಡುವುದರಿಂದ ಕುಟುಂಬ ಅಭಿವೃದ್ಧಿ ಆಗುವುದು. ಸಮಾಧಾನದಿಂದ ವರ್ತಿಸಿ.

**ಕನ್ಯಾರಾಶಿ :** ಸಂಸಾರ ವಲಯದಲ್ಲಿ ಅನೇಕ ವಿಧದಲ್ಲಿ ವ್ಯಾಧಿ, ಕಷ್ಟ-ನಷ್ಟಗಳು ತಪ್ಪಿದ್ದಲ್ಲ. ಉಷ್ಣ ಸಂಬಂಧ ರೋಗ, ಅಜೀರ್ಣತೆ ಕಂಡುಬರುವ ಸಂಭವವಿದೆ. ಸ್ವಂತ ಬಂಧುಗಳೊಡನೆ ನಿಷ್ಠುರ, ಅಪಘಾತ ಭಯವಿದೆ. ವಿಷ್ಣುವಿನ ಆರಾಧನೆ ಮಾಡುವುದರಿಂದ ಸ್ವಲ್ಪ ಮಟ್ಟಿಗೆ ಸಮಾಧಾನವಾಗುವುದು.

**ತುಲಾರಾಶಿ :** ಕೈಗೊಂಡ ಕೆಲಸಗಳು ನಿಧಾನಗತಿಯಲ್ಲಿ ನೆರವೇರುವುದು. ಗೃಹವಲಯದಲ್ಲಿ ಸ್ವಲ್ಪಮಟ್ಟಿಗೆ ನೆಮ್ಮದಿ ಇದೆ. ವ್ಯಾಪಾರಸ್ಥರಿಗೆ ಸ್ವಲ್ಪ ಲಾಭಾಂಶವಿದೆ. ಆದರೂ ಕಷ್ಟ ನಷ್ಟಗಳು ಒಂದಲ್ಲ ಒಂದು ರೀತಿಯಿಂದ ನಿಮ್ಮನ್ನು ಕಾಡಲಿದೆ.

**ವೃಶ್ಚಿಕ ರಾಶಿ :** ಕುಟುಂಬ ವಲಯದಲ್ಲಿ ನಿಷ್ಠುರಗಳು ವಿಮೋಚನೆಯಾಗಿ ಮನಸ್ಸಿಗೆ ನೆಮ್ಮದಿ ಸಿಗುವುದು. ಶತ್ರುಗಳು ದೂರಾಗುವರು. ರೋಗದಿಂದ ವಿಮುಕ್ತಿ. ಹೊಸ ಭೂಮಿ ಖರೀದಿ ಯೋಗವಿದೆ.

**ಧನುಸ್ಸುರಾಶಿ :** ಕುಟುಂಬದಲ್ಲಿ ಸಕಲಕಾರ್ಯಗಳು ಕೈಗೂಡುವುದು. ಹಣಕಾಸಿನ ವ್ಯವಹಾರದಲ್ಲಿ ಯಾವುದೇ ಕೊರತೆ ಬರಲಾರದು. ಮಾನಸಿಕ ವ್ಯಾಧಿ ಸ್ವಲ್ಪ ಮಟ್ಟಿಗೆ ಕಡಿಮೆಯಾಗಲಿದೆ. ಗೃಹವಲಯದಲ್ಲಿ ಲಗ್ನ ಕಾರ್ಯಗಳು ನೆರವೇರುವುದು.

**ಮಕರ ರಾಶಿ :** ಕೈ ಬಿಟ್ಟ ಕಾರ್ಯಗಳು ನೆರವೇರಿ ಮನಸ್ಸಿಗೆ ನೆಮ್ಮದಿ ಇರುವುದು. ಮಿತ್ರರ ಸಹಕಾರ ಸಿಗುವುದು. ಕುಟುಂಬ ವಲಯದಲ್ಲಿ ಹೊಸ ವಿಷಯ ಪ್ರಸ್ತಾಪವಾಗಲಿದೆ. ಆದರೂ ಮನಸ್ಸಿಗೆ ದುಃಖ, ಕಲಹ ಇತ್ಯಾದಿ ಫಲಗಳು ಕಾಣುವುದು. ಶನಿಯ ಆರಾಧನೆಯಿಂದ ಕಷ್ಟಗಳು ಪರಿಹಾರ.

**ಕುಂಬ ರಾಶಿ :** ದೈವಾನುಕೂಲವಿರುವುದು ಕೈಗೊಂಡ ಕಾರ್ಯಗಳು ನಿಧಾನಗತಿಯಲ್ಲಿ ನೆರವೇರುವುದು ಶುಭಕಾರ್ಯಗಳು ಕೈಗೂಡುವುದು. ಶತ್ರುಗಳ ಉಪದ್ರವ ಕಡಿಮೆಯಾಗುವುದು. ಹಣಕಾಸು ಯಥೇಚ್ಛವಾಗಿ ಕೈಗೂಡುವುದು. ಆದರೆ ಆರೋಗ್ಯ ಹದಗೆಡುವ ಸಂಭವವಿದೆ.

**ಮೀನ ರಾಶಿ :** ಅನೇಕ ರೀತಿಯಲ್ಲಿ ಮನಸ್ಸಿಗೆ ನೆಮ್ಮದಿ ಇಲ್ಲ. ಧನಹಾನಿಯಾಗುವುದು. ಉದರದಲ್ಲಿ ವ್ಯಾದಿ ಕಾಣಿಸಿಕೊಳ್ಳುವುದು. ವಂಚನೆಗೆ ಒಳಗಾಗುವಿರಿ. ವ್ಯವಹಾರ ಮಾಡುವಾಗ ಎಚ್ಚರ ಅಗತ್ಯ. ಸಂಚಾರದಿಂದ ಆಯಾಸ ವಿಷ್ಣುವಿನ ಸಾನಿಧ್ಯದಲ್ಲಿ ಪೂಜೆ ಮಾಡಿಸಿರಿ.

---

### ಕವನ : ಪರಿವರ್ತನೆ

ಮುಳುಗಿದ್ದೆ ನಾನು ಚಿಂತೆಯ ಕಡಲಲ್ಲಿ
ಸುಳಿದಳು (ಕೊಡಗು) ಸಂಗಾತಿ ನನ್ನ ಬಳಿ
ಸರಿದಿತ್ತು ಮನಕೆ ಮುತ್ತಿದ ಮುಸುಕು
ಚದುರಿತ್ತು ಹೃದಯಕ್ಕೆ ಕವಿದ ಮಬ್ಬು.

ನೈಯಣ್ಣೀರ.ರಶಿ, ಕಡಿಯತ್ತೂರು

### ನಗೆ ಹನಿ - ಅಂದ್

ಅಂದ್ ವಾಲ್ಮೀಕಿ ಬರ್ತ್
ಒಂದೇ ರಾಮಾಯಣ
ಇಂದ್ ರಾಜಕಾರಣಿಗ
ದಿನವೂ ಬರ್ದವೆ
ಹಲವಾರ್ ಹಗರಣಗ.

-ಸಂಧ್ಯಾ ಪಿ.ವಿ.

---

**ವೇಗವೇ ಆಪತ್ತು, ನಿಧಾನವೇ ಸಂಪತ್ತು**




✦ ಕೌಂಡಿನ್ಯ : ಧಾರವಾಹಿ-31

ರೇವತಿಗೆ ಭಯವಾಯಿತು !

ಈ ನಿಗೂಢ ಪ್ರಕರಣಗಳ ಬಗ್ಗೆ ತನಗೆ ಸುಳಿವು ಗೊತ್ತಿದೆ. ತಾನು ತನಿಖೆಗೆ ಸಹಾಯ ಮಾಡುತ್ತೇನೆ ಎಂದು ಪೋಲಿಸರಿಗೆ ಹೇಳಿದ್ದಳು. ಅದು ಪಬ್ಲಿಕ್ ಸ್ಟೇಟ್‌ಮೆಂಟ್!

ಇದರ ಪರಿಣಾಮ ಭೀಕರ !

ರೇವತಿ ಭಯಾತುರದಿಂದ ಗುಂಪಿನ ಕಡೆ ಸರಸರನೆ ಕಣ್ಣಾಡಿಸುತ್ತಿದ್ದಾಳೆ. ಇದನ್ನೆಲ್ಲಾ ತೆರೆಯ ಮರೆಯಲ್ಲಿ ನಿಂತು ನಡೆಸುತ್ತಿರುವ ವ್ಯಕ್ತಿ ಗುಂಪಿನಲ್ಲಿ ಇರಬಹುದೆ?

ಒಬ್ಬ ವ್ಯಕ್ತಿ ಇವಳ ಮೇಲೆ ಕೆಂಗಣ್ಣಿನ ದೃಷ್ಟಿಯನ್ನು ಬೀರಿದ್ದನು ! ರೇವತಿ ನಡುಗಿದಳು.

ಆ ವ್ಯಕ್ತಿ ಪ್ರಸನ್ನ !

ಬೆನ್ನಿನ ಹುರಿಯಲ್ಲಿ ನಡುಕ ಉಂಟಾಯಿತು. ತಾನು ಈಗ ಇರುವುದು ಪ್ರಸನ್ನನ ಬಂಗಲೆಯಲ್ಲಿ!

ತನಗೇನಾದರೂ ತೊಂದರೆಯಾದರೆ?

ಇಲ್ಲ...ಇಲ್ಲ... ಪ್ರಸನ್ನನನ್ನು ನಂಬಲು ಸಾಧ್ಯವೇ ಇಲ್ಲ.

ತಾನು ಇನ್ನು ಮುಂದೆ ಅಲ್ಲಿರಬಾರದು.

ಹಾಗಾದರೆ ಇನ್ನೆಲ್ಲಿ ಇರಲಿ?

ಶ್ರೀಕಂಠ ಅಜ್ಜಿ ನೆನಪಾದರು. ಅದೇಕೋ ಅಲ್ಲಿಗೆ ಹೋಗಬೇಕು ಅಂತ ಅನಿಸಲಿಲ್ಲ. ದೇವಸ್ಥಾನದ ಪೂಜಾರಿ ನೆನಪಾದನು.

ಪೂಜಾರಿ ತುಂಬು ಪ್ರಾಯದ ಯುವಕ !

ತನ್ನಂತಹ ಹೆಣ್ಣು ಅವನ ಜೊತೆ ದೇವಸ್ಥಾನದಲ್ಲಿ ಉಳಿದುಕೊಂಡರೆ ಹಳ್ಳಿಯ ಜನಗಳು ಏನು ಅನ್ನುತ್ತಾರೆ !

ಪೋಲಿಸ್ ಅಧಿಕಾರಿ ಮುಂದೆ ಬಂದು "ಅಂದ ಹಾಗೆ ನಿಮ್ಮ ಹೆಸರೇನು ಮೇಡಂ? !

ರೇವತಿ ತನ್ನ ಪರಿಚಯ ಮಾಡಿ ಕೊಂಡಳು. ಪೋಲಿಸ್ ಅಧಿಕಾರಿ "ನೀವು ಇರೋದು ಎಲ್ಲಿ?"

"ಎಡತೊರೆ ಬಂಗಲೆಯಲ್ಲಿ"

"ಓ.ಕೆ. ನಾನು ಬಂಗಲೆಗೇ ಬರುತ್ತೇನೆ. ನಿಮಗೆ ತಿಳಿದಿರೋದನ್ನೆಲ್ಲಾ ನನಗೆ ಹೇಳಿ ಸಹಕರಿಸಿ".

"ಯಾವಾಗ ಬರುತ್ತೀರ?"

"ಮಧ್ಯಾಹ್ನ"

"ಓ.ಕೆ. ಕಾದಿರುತ್ತೇನೆ"

ಸಮಯ ಕಳೆದಂತೆ ಲಿಂಗಯ್ಯನ ದೇಹಕ್ಕೆ ಸುತ್ತಿಕೊಂಡಿದ್ದ ಹಾವುಗಳು ಚಲಿಸಲಾರಂಭಿಸಿದವು !

ಹುತ್ತದತ್ತ ಸಾಗುತ್ತಿವೆ !

ಹಳ್ಳಿಯ ಬಹುಮಂದಿಗೆ ಇದು ಪವಾಡ ಸದೃಶ್ಯದಂತೆ ಕಂಡು ಬರುತ್ತಿದೆ. ಬೆರಗಾಗಿ ನೋಡುತ್ತಿದ್ದಾನೆ.

ರೇವತಿಗೆ ಸುಳಿವು ದೊರೆತಿದೆ !

ಅದನ್ನು ಬೇಗ ಪೋಲಿಸ್ ಅಧಿಕಾರಿಗೆ ತಿಳಿಸಬೇಕೆಂಬ ಕುತೂಹಲ ಕಾಡುತ್ತಿದೆ. ಅವಳು ಮುಂದೆ ಬಂದು "ಸಾರ್ ಹೆಣವನ್ನು ಪೋಸ್ಟ್ ಮಾರ್ಟಮ್‌ಗೆ" ಕಳಿಸುತ್ತೀರ ಅಲ್ಲವೇ?"

"ಹೌದು, ಯಾಕೆ?"

"ಲಿಂಗಯ್ಯನವರಿಗೆ ಹಾವು ಕಚ್ಚಿ ವಿಷ ದೇಹದಲ್ಲಿ ಸೇರಿದೆಯೆ ಅನ್ನೋದನ್ನ ಪತ್ತೇ ಮಾಡಬೇಕು"

ಪೋಲಿಸ್ ಅಧಿಕಾರ ನಗುತ್ತಾ "ಅಲ್ರೀ ಮೇಡಂ... ಇಷ್ಟೊಂದು ಹಾವುಗಳು ಮೈತುಂಬಾ ಸುತ್ತಿಕೊಂಡಿರುವಾಗ ಒಂದಾದರೂ ಕಚ್ಚದೆ ಇರಲು ಸಾಧ್ಯವೆ?"

"ಇಲ್ಲ...ಕಚ್ಚಲಾರದು".

ಆಶ್ಚರ್ಯವಾಗುತ್ತಿದೆ ಎಲ್ಲರಿಗೂ

ರೇವತಿ "ನನ್ನ ಊಹೆ ಸರಿಯಾಗಿದ್ದರೆ ಲಿಂಗಯ್ಯನಿಗೆ ಹಾವು ಕಚ್ಚಿರುವುದಿಲ್ಲ. ಬೇಕಾದರೆ ಪರೀಕ್ಷಿಸಿ"

"ಮತ್ತೆ ಪ್ರಾಣ ಹೇಗೆ ಹೋಗಿದೆ?"

"ಅತಿಯಾದ ಭಯದಿಂದ ಹೃದಯ ಕ್ರಿಯೆ ನಿಂತಿದೆ"

"ವಾಟ್.....!"

ರೇವತಿ "ಅಲ್ಲದೆ ಇನ್ನೇನು ಸಾರ್, ಇಷ್ಟೊಂದು ಸರ್ಪಗಳು ಮೈಗೆ ಸುತ್ತಿಕೊಂಡರೆ ಭಯದಿಂದ ಗುಂಡಿಗೆ ಒಡೆಯುವುದಿಲ್ಲವೆ?" ಎಂದು ಕೇಳಿದಳು.

ಪೋಲಿಸ್ ಅಧಿಕಾರಿ "ಯೂ ಆರ್ ರೈಟ್. ನಾನು ಇದನ್ನು ಕನ್‌ಫರ್ಮ್ ಮಾಡಿಕೊಳ್ಳುತ್ತೇನೆ."

"ಥ್ಯಾಂಕ್ ಯೂ ಇನ್ಸ್‌ಪೆಕ್ಟರ್".

ಹೆಣವನ್ನು ನಗರದಲ್ಲಿರುವ ಆಸ್ಪತ್ರೆಗೆ ಕಳುಹಿಸಲು ವ್ಯವಸ್ಥೆ ಮಾಡಲಾಯಿತು. ಜನಗಳು ಚದುರುತ್ತಿದ್ದಾರೆ.

ಪ್ರಸನ್ನ ಅವಳ ಹತ್ತಿರ ಬಂದು ಗಂಭೀರವಾಗಿ "ರೇವತಿ ಮನೆಗೆ ಬರುತ್ತೀರ?"

"ಇಲ್ಲ ನೀವು ಹೋಗಿರಿ. ಆಮೇಲೆ ಬರುತ್ತೇನೆ".

"ಓ... ಪತ್ತೇದಾರಿಕೆ ನಡೆಸಬೇಕೆ?"

ಉತ್ತರಿಸಲಿಲ್ಲ ರೇವತಿ !

ಪ್ರಸನ್ನ ಜೀಪಿನಲ್ಲಿ ಹೊರಟು ಹೋದ ಕೂಡಲೇ ಜನಗಳ ಗುಂಪಿನಿಂದ ಪೂಜಾರಿ, ಶ್ರೀಕಂಠ ಬಂದರು.

ಶ್ರೀಕಂಠ ಗಾಬರಿಯಿಂದ "ರೇವತಿಯವರೆ ನೀವು ದುಡುಕುತ್ತಿದ್ದೀರ ಅಂತ ಅನಿಸುತ್ತದೆ".

ಪೂಜಾರಿ "ಅಲ್ರೀ.... ಓದಿದವರಾಗಿ ಈ ರೀತಿ ಪಬ್ಲಿಕ್‌ನಲ್ಲಿ ಪೋಲಿಸರ ಜೊತೆ ಮಾತಾಡುತ್ತಾರೆಯೆ?

18ನೇ ಪುಟಕ್ಕೆ

ಇಲ್ಲಿಯವರೆಗೆ.........

ಸಂಪಿಗೆ ಪುರದಲ್ಲಿ ನಾಲ್ಕನೆಯ ದುರಂತ, ಎಡತೊರೆ ಮನೆತನ ಅಣ್ಣ ಲಿಂಗಯ್ಯ ಸರ್ಪಗಳಿಗೆ ಬಲಿಯಾಗಿರುತ್ತಾನೆ. ಪೋಲಿಸ್ ತನಿಖೆ ನಡೆಯುತ್ತದೆ. ಈ ಪ್ರಕರಣದ ಹಿಂದೆ ಮನುಷ್ಯನ ಕೈವಾಡ ಇದೆ ಎಂದು ಸಂದೇಹ ಬರುತ್ತದೆ. ರೇವತಿ ತಾನು ಸುಳಿವು ನೀಡಿ ಸಹಾಯ ಮಾಡುವುದಾಗಿ ಪೋಲಿಸರಿಗೆ ತಿಳಿಸುತ್ತಾಳೆ.

ಮುಂದೆ ಓದಿ.........

ಉಪ್ಪಿಗಿಂತ ರುಚಿಯಿಲ್ಲ, ತಾಯಿಗಿಂತ ದೇವರಿಲ್ಲ

# ಮೈಸೂರು ಗೌಡ ಮಹಿಳಾ ಸಂಘಟನೆಯಿಂದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ :





ಹೆಣ್ಣು ಅಬಲೆಯಲ್ಲ, ಸಬಲೆ, ಕೇವಲ ನಾಲ್ಕು ಗೋಡೆಗಳ ಮಧ್ಯೆ ಇರುವುದನ್ನು ಬಿಟ್ಟು ಹೊರಗೆ ಬರಬೇಕು. ಅದಕ್ಕೆ ವಿದ್ಯಾಭ್ಯಾಸ ಮುಖ್ಯ. ಹೆಣ್ಣು ಸ್ವಾವಲಂಬಿಯಾಗಿ ಬದುಕಬೇಕು. ಮೂಡನಂಬಿಕೆಯನ್ನು ಬಿಡಬೇಕು. ಬದುಕಲ್ಲಿ ಧೈರ್ಯ, ಧೃಢತೆ, ಗುರಿಯನ್ನು ಇಟ್ಟುಕೊಂಡು ಅದರಂತೆ ನಡೆದರೆ ಏನನ್ನೂ ಸಾಧಿಸ ಬಹುದು, ಎಂದು ಕುಡಕಂಡಿ ಲಲಿತಾ ಸೋಮಣ್ಣನವರು ದಿನಾಂಕ 1-04-2000ನೇ ಶನಿವಾರದಂದು ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯ ಅಂಗವಾಗಿ ನಡೆದ ಸಭಾ ಕಾರ್ಯಕ್ರಮದಲ್ಲಿ ಅಧ್ಯಕ್ಷ ಸ್ಥಾನದಿಂದ ಮಾತನಾಡಿದರು. ಸಭಾಕಾರ್ಯಕ್ರಮ ತೆಕ್ಕಡೆ ಶಾರದ ಜನಾರ್ಧನ್‌ರವರ ಪ್ರಾರ್ಥನೆಯೊಂದಿಗೆ ಪ್ರಾರಂಭ ವಾಗಿ, ಪಟ್ಟಡ ಶೀಲಾಮಣಿ ಪ್ರಭಾಕರರವರು ಅತಿಥಿಗಳನ್ನು ಸ್ವಾಗಿತಿಸಿದರು. ಕಾರ್ಯದರ್ಶಿನಿ ಗೀತಾ ಮೋಂಟಡ್ಕರವರ ವರದಿ ವಾಚನದ ನಂತರ ಸಂಘದ ಅಧ್ಯಕ್ಷರಾದ ದಂಬೆಕೋಡಿ ಭಾಗೀರಥಿ ಯವರು ಅತಿಥಿಗಳನ್ನು ಸಭೆಗೆ ಪರಿಚಯಿಸಿದರು. ಪೆರಿಯನ ಕುಮಾರಿ ಚಿಂತನಾ ದಯಾನಂದ ಹಾಗೂ ಲಲಿತಾ ಸೋಮಣ್ಣ ನವರು ಮುಖ್ಯ ಅತಿಥಿಯಾಗಿದ್ದರು. ಆ ದಿನದ ವಿಶೇಷ ಕಾರ್ಯ ಕ್ರಮವಾಗಿ ಪೆರಿಯನ ಕುಮಾರಿ ಚಿಂತನಾ ದಯಾನಂದರವರು ಹೂ ಅಲಂಕಾರದ ಬಗ್ಗೆ ಉತ್ತಮವಾದ ಪ್ರಾತ್ಯಕ್ಷಿಕ ಮಾಹಿತಿಯನ್ನು ಸಭೆಗೆ ಮಾಡಿ ತೋರಿಸಿದರು. ಅಂದು ನಡೆದ ಮ್ಯಾಚಿಂಗ್ ಡ್ರೆಸ್ಸ್ ಸ್ಪರ್ಧೆಯಲ್ಲಿ ಕೊಡಲಿಂಗನ ತಿಲಕ ಮೋದಪ್ಪನವರು ಮೊದಲ ಬಹುಮಾನ ಗಳಿಸಿದರೆ, ದ್ವಿತೀಯ ಬಹುಮಾನವನ್ನು ಉಳುವಾರನ ಜಯಶ್ರಿ ಸುಬ್ಬಯ್ಯ ಹಾಗೂ 3ನೇ ಬಹುಮಾನ ಕೊರಂಬಡ್ಕ ಶಾರದ ಬಸಪ್ಪನವರ ಪಾಲಾಯಿತು. ಹೌಸಿ, ಹೌಸಿ, ಆಟ ನಡೆದು ನಂತರ ಕಾಫಿ ವ್ಯವಸ್ಥೆ ಇತ್ತು. ಕುಯ್ಯಮುಡಿ ಮೀನಾಚಂಗಪ್ಪನವರ ವಂದನಾರ್ಪಣೆಯೊಂದಿಗೆ ಕಾರ್ಯಕ್ರಮ ಕೊನೆಗೊಂಡಿತು.

ವರದಿ : ದೇವಜನ ಗೀತಾ ಗಣೇಶ್

---

4ನೇ ಪುಟದಿಂದ

ಅಪೂರ್ಣವೆ. ಪತಿಯವರ ದಣಿವರಿಯದ ದುಡಿಮೆ ವಿದ್ಯಾ ದೇಗುಲಗಳಲ್ಲಿದ್ದರೆ ಇವರದು ಭೂಮಾತೆಯ ಮಡಿಲಲ್ಲಿ ಫಲದಿಂದ ತುಂಬಿತೂಗುತ್ತಿರುವ ಅಡಿಕೆ ತೋಟವೆಂಬ ದೇಗುಲದಲ್ಲಿ. ಇಬ್ಬರೂ ಪರಸ್ಪರ ಪೈಪೋಟಿ ನಡೆಸುತ್ತಿದ್ದಾರೋ ಎಂಬಂತೆ ಭಾಸವಾಗುತ್ತದೆ, ನೋಡುವವರ ಕಣ್ಣಳಿಗೆ. ಈ ಆದರ್ಶ ಪತಿ ಪತ್ನಿಯರ ಜೀವನ ಶೈಲಿ ಮತ್ತು ದುಡಿಮೆಯ ವಿಧಾನ ನೋಡುವ, ಕೇಳುವ ಮತ್ತು ತಿಳಿಯುವವರ ಮೇಲೆ ಅಪಾರ ಪ್ರಭಾವವನ್ನು ಬೀರುತ್ತದೆ ಜೊತೆಗೆ ಅತ್ಯಾನಂದವನ್ನು ನೀಡುತ್ತದೆ. ಶ್ರೀ ಕುರುಂಜಿಯವರು ತಮ್ಮ ತೋಟವನ್ನು ಆದಾಯ ತರುವ ಮೂಲವೆಂಬಂತೆ ಮಾತ್ರ ನೋಡುತ್ತಿಲ್ಲ ಅದಕ್ಕೆ ತಮ್ಮ ಪ್ರೀತಿಯ ಸಿಂಚಗೈಯುತ್ತಿದ್ದಾರೆ. ತಾಯಿ ತನ್ನ ಬೆಳೆಯುತ್ತಿರುವ ಮಗುವನ್ನು ಕಂಡು ನಲಿದಾಡುವಂತೆ, ಗುರು ತನ್ನ ಶಿಷ್ಯನ ಬೆಳವಣಿಗೆಯನ್ನು ಕಂಡು ಸಂತೋಷಗೊಳ್ಳುವಂತೆ ಶ್ರೀ ಕುರುಂಜಿಯವರು ತಮ್ಮ ಅಡಿಕೆ ಮರಗಳ ನಳನಳಿಸುವ ಅಚ್ಚಹಸುರಿಗೆ, ಗರ್ಭದಿಂದ ಹೊರಹೊಮ್ಮುವ ಸಿಂಗಾರಗಳ ವೈಯಾರಕ್ಕೆ ಮತ್ತು ಅವುಗಳ ತುಂಬಿ ತೊನೆಯುವ ಗೊನೆಗಳ ಸೊಬಗಿಗೆ ಮುದಗೊಳ್ಳುತ್ತಾರೆ. ಭಾವಪರವಶರಾಗುತ್ತಾರೆ ಮತ್ತು ತಮ್ಮ ದಿನದ ದುಡಿತದ ದಣಿವನ್ನು ತಣಿಸಿಕೊಳ್ಳುತ್ತಾರೆ. ನಾನು ಬಹಳಷ್ಟು ಬಾರಿ ಅವರೊಂದಿಗೆ ತೋಟಕ್ಕೆ ಹೋಗಿದ್ದೇನೆ. ಆವಾಗ ನಾನು ಈ ಕೃಷಿ ಋಷಿಯ ಮೈಮನಗಳುಂಟಾಗುವ ಭಾವನಾ ಲಹರಿಗಳನ್ನು ಕಂಡು ಪುಳಕಿತನಾಗಿದ್ದೇನೆ. ಸುಧಾರಿತ ಕೃಷಿ ಪದ್ಧತಿ ಅನುಸರಿಸಿ ಅತ್ಯಧಿಕ ಇಳುವರಿ ಪಡೆಯುತ್ತಿರುವ ಪ್ರಗತಿಪರ ಅಡಿಕೆ ಬೆಳೆಗಾರರ ಮುಂಚೂಣಿಯಲ್ಲಿರುವುದು ಶ್ರೀಯುತರ ಮತ್ತೊಂದು ವಿಶೇಷ. **"ನನ್ನ ಆಗಮನವನ್ನು ನಿತ್ಯವೂ ಅಡಿಕೆ ಮರಗಳು ಬಹಳ ಕಾತರದಿಂದ ಕಾಯುತ್ತಿರುತ್ತವೆ. ಹಾಗೇನಾದರೂ ನಾನು ಹೋದಿದ್ದರೆ ಅವು ಬಹಳ ಬೇಸರಗೊಳ್ಳುತ್ತವೆ"** ಎಂದು ಭಾವಿಸುವ ಇವರ ಮನಸ್ಸು ಮತ್ತು ತೋಟದ ನಡುವಿರುವ ಭಾವನಾತ್ಮಕ ಸಂಬಂಧ ಅನಿರ್ವಚನೀಯ, ಸಾಹಿತ್ಯ, ಸಂಗಿತ, ಕಲೆ ಇತ್ಯಾದಿಗಳನ್ನು ಓದುವ, ಕೇಳುವ ಮತ್ತು ನೋಡುವರ ಮೇಲೆ ಅಪಾರ ಪ್ರಭಾವ ಬೀರುವಂತೆ ಶ್ರೀ ಕುರುಂಜಿಯವರ ಜೀವನ ಶೈಲಿ ಮತ್ತು ವಿಚಾರಧಾರೆಯು ಜನರಿಗೆ ವಿಶೇಷವಾದ ಮುದ ನೀಡುವ ಅಂಶಗಳಾಗಿವೆ.

ಶ್ರೀ ಡಿ. ಜವರೇಗೌಡ

---

ಹೆಬ್ಬೆಟ್ಟಿಗೆ ಸಹಿ, ಬಾಳಿಗೆ ಕಹಿ

# ಮರಣ ಪೂರ್ವ ಹೇಳಿಕೆ

ನ್ಯಾಯಾಲಗಳು ಸಾಕ್ಷ್ಯಕ್ಕೆ ಬಹಳ ಮಹತ್ವ ನೀಡುತ್ತವೆ. ಕೊಲೆ, ವರದಕ್ಷಿಣೆ ಸಾವು ಇತ್ಯಾದಿ ಮೊಕದ್ದಮೆಗಳಲ್ಲಿ ಸತ್ತಿರುವ ವ್ಯಕ್ತಿ ತಾನು ಸಾಯುವ ಮೊದಲು, ತನ್ನ ಸಾವುಂಟಾಗುತ್ತಿರುವುದಕ್ಕೆ ಕಾರಣ ಅಥವಾ ತನ್ನ ಸಾವುಂಟಾಗುತ್ತಿರುವುದಕ್ಕೆ ಕಾರಣವಾಗಿರುವ ಘಟನಾವಳಿಗಳ ಬಗ್ಗೆ ನೀಡುವ ಹೇಳಿಕೆಯೇ "ಮರಣಪೂರ್ವ ಹೇಳಿಕೆ" ಅಥವಾ "ಸಾಯುತ್ತಿರುವವನ ಹೇಳಿಕೆ" (Dying Declaration)

ಭಾರತದ ಸಾಕ್ಷ್ಯ ಅದಿನಿಯಮದ ಸೆಕ್ಷನ್ 32(1)"ಮರಣ ಪೂರ್ವ ಹೇಳಿಕೆ"ಯ ಕುರಿತು ಮಾಹಿತಿ ನೀಡುತ್ತದೆ. ಸಾಕ್ಷ್ಯ ಅಧಿನಿಯಮದ ಪ್ರಕಾರ ಒಂದು ಹೇಳಿಕೆಯನ್ನು 'ಮರಣಪೂರ್ವ ಹೇಳಿಕೆ' ಎಂದು ಪರಿಗಣಿಸಬೇಕಾದರೆ ಈ ಕೆಳಗಿನ ಅಂಶಗಳಿರಲೇಬೇಕು. ಅವಾವುವೆಂದರೆ.

1) ಆ ಹೇಳಿಕೆಯನ್ನು ನೀಡಿದ ವ್ಯಕ್ತಿ ಸತ್ತಿರಬೇಕು.

2.) ಹೇಳಿಕೆ ಸಾಯುತ್ತಿರುವ ಕಾರಣದ ಕುರಿತಾಗಿರಬೇಕು ಅಥವಾ ಸಾವುಂಟಾಗುತ್ತಿರುವುದಕ್ಕೆ ಸಂಬಂಧ ಪಟ್ಟ ಘಟನಾವಳಿಗಳ ಕುರಿತಾಗಿರಬೇಕು.

3) ಆತನ ಸಾವಿನ ಕಾರಣ, ಮೊಕದ್ದಮೆಯಲ್ಲಿ ತೀರ್ಮಾನಿಸಲ್ಪಡಬೇಕಾದ ಪ್ರಶ್ನೆಗಳಲ್ಲೊಂದಾಗಿರಬೇಕು.

4) ಅಂತಹ ಹೇಳಿಕೆ ಪೂರ್ಣವಾಗಿರಬೇಕು ಮತ್ತು

5) ಹೇಳಿಕೆ ಕೊಡುತ್ತಿರುವವನು ಹೇಳಿಕೆ ನೀಡುವ ಸ್ಥಿತಿಯಲ್ಲಿರಬೇಕು.

" NEMO MORITURUS PRDESUMITUR MENSIRE" ಎಂಬ ಕಾನೂನು ನಾಣ್ನುಡಿ(Maxim) ಯೊಂದಿದೆ. 'ಸಾಯುತ್ತಿರುವವನು ಸುಳ್ಳನ್ನು ಹೇಳಲಾರ' ಎಂಬುದು ಈ ನಾಣ್ನುಡಿಯ ಗೂಡಾರ್ಥ. ಮರಣ ಪೂರ್ವ ಹೇಳಿಕೆಯನ್ನು ಸಾಕ್ಷ್ಯವಾಗಿ ಸ್ವೀಕರಿಸಲು ಈ ನಾಣ್ನುಡಿಯೇ ಮುಖ್ಯ ಆಧಾರ ಎಂದರೆ ತಪ್ಪಾಗಲಾರದು. ಅಭಿಯೋಜನೆ (Prosecutions) ಪರ ಸಾಕ್ಷ್ಯ ನೀಡುವ ವ್ಯಕ್ತಿಯನ್ನು ವಿರುದ್ಧ ಪಕ್ಷದ ವಕೀಲರು ಪಾಟೀಸವಾಲು ( Cross Examination) ಮಾಡುವುದು ಸಾಮಾನ್ಯ. ಆದರೆ ಮರಣ ಪೂರ್ವ ಹೇಳಿಕೆ ಈ ವಿಷಯಕ್ಕೆ ಅಪವಾದವಾಗಿದೆ, ಹೇಗೆಂದರೆ ಹೇಳಿಕೆ ನೀಡಿದ ವ್ಯಕ್ತಿಯನ್ನು ಪಾಟೀಸವಾಲು ಮಾಡಲು ಆತನು ಬದುಕಿರುವುದೇ ಇಲ್ಲ! ಆದಾಗ್ಯೂ ಮರಣಪೂರ್ವ ಹೇಳಿಕೆಯನ್ನು ಸಾಕ್ಷ್ಯವಾಗಿ ಸ್ವೀಕರಿಸುವುದು (ಇತರ ಸಾಕ್ಷ್ಯಗಳಿಂದ ಧೃಡ ಪಟ್ಟಲ್ಲಿ) ಒಂದು ವಿಶೇಷ ಅನಿವಾರ್ಯತೆಯೇ ಇದಕ್ಕೆ ಕಾರಣವೆನ್ನ ಬಹುದು. ಅಂತೆಯೇ ನ್ಯಾಯಾಲಯದಲ್ಲಿ ಸಾಕ್ಷ್ಯನುಡಿಯುವವನು 'ಸತ್ಯವನ್ನೇ ಹೇಳುತ್ತೇನೆ" ಎಂಬ ಪ್ರತಿಜ್ಞೆ ಮಾಡಬೇಕಾಗುತ್ತದೆ. ಆದರೆ ಮರಣ ಪೂರ್ವ ಹೇಳಿಕೆಯ ವಿಷಯದಲ್ಲಿ ಹೇಳಿಕೆನೀಡಿದಾತ ಮೃತನಾಗಿರುವುದರಿಂದ ಇದು ಅನ್ವಯವಾಗದಿರುವುದು ಇನ್ನೊಂದು ವಿಶೇಷ.

ಮರಣಪೂರ್ವ ಹೇಳಿಕೆ ಮಾತಿನ ರೂಪದಲ್ಲಿರಬಹುದು ಅಥವಾ ಬರಹದ ರೂಪದಲ್ಲಿರಬಹುದು ಅಥವಾ ಭಾಗಶಃ ಮಾತಿನ ರೂಪ ಮತ್ತು ಭಾಗಶಃ ಬರಹದ ರೂಪದಲ್ಲಿರಬಹುದು ಅಥವಾ ಕೇವಲ ಚಿಹ್ನೆಗಳ ರೂಪದಲ್ಲಿರಬಹುದು.

ಮರಣಪೂರ್ವ ಹೇಳಿಕೆ ಬಾಯಿಮಾತಿನ ರೂಪದಲ್ಲಿದ್ದರೆ ಅಂತಹ ಹೇಳಿಕೆಯನ್ನು ಕೇಳಿಸಿಕೊಂಡ ಅಥವಾ ಯಾರ ಮುಂದೆ ಆ ಹೇಳಿಕೆಯನ್ನು ಮಾಡಲಾಗಿತ್ತೋ ಅಂತಹ ವ್ಯಕ್ತಿಯನ್ನು ಸಾಕ್ಷಿದಾರನಾಗಿ ವಿಚಾರಣೆಗೆ ಒಳಪಡಿಸಿ ಮರಣಪೂರ್ವ ಹೇಳಿಕೆ ಸತ್ಯವೆಂದು ಸಾಬೀತಾದಲ್ಲಿ ಅಂತಹ ಹೇಳಿಕೆಯನ್ನು ಸಾಕ್ಷ್ಯವಾಗಿ ಸ್ವೀಕರಿಸಬಹುದು. ಹೇಳಿಕೆ ದಾಖಲೆಯ ರೂಪದಲ್ಲಿದ್ದರೆ ಅಂತಹ ಹೇಳಿಕೆಯನ್ನು ಬರಕೊಂಡ ವ್ಯಕ್ತಿಯನ್ನು ಸಾಕ್ಷಿದಾರನಾಗಿ ವಿಚಾರಣೆಗೆ ಒಳಪಡಿಸಿ ಸತ್ಯಾಂಶ ಕಂಡು ಕೊಳ್ಳಬಹುದು.

ಮರಣಪೂರ್ವ ಹೇಳಿಕೆಯನ್ನು ಕ್ರಿಮಿನಲ್ ನ್ಯಾಯಾಲಯದಲ್ಲಿ ಮಾತ್ರ ಸಾಕ್ಷ್ಯವಾಗಿ ಸ್ವೀಕರಿಸಬೇಕೆಂದೇನೂ ಇಲ್ಲ. ಅಗತ್ಯವಿದ್ದರೆ ಸಿವಿಲ್ ನ್ಯಾಯಾಲಯದಲ್ಲೂ ಸಾಕ್ಷ್ಯವಾಗಿ ಸ್ವೀಕರಿಸಬಹುದು.

ಮರಣಪೂರ್ವ ಹೇಳಿಕೆ ನಂಬಲು ಸಂಪೂರ್ಣವಾಗಿ ಅರ್ಹವಾಗಿದ್ದರೆ ಕೇವಲ ಅದರ ಆಧಾರದ ಮೇಲೆ ಅಪರಾಧಿಗೆ ಶಿಕ್ಷೆ ವಿಧಿಸಬಹುದು ಎಂಬುದಾಗಿ ಮೊಕದ್ದಮೆಯೊಂದರಲ್ಲಿ ನ್ಯಾಯಾಲಯ ಅಭಿಪ್ರಾಯಪಟ್ಟಿದೆ.1979 CRI.L.J. NoC 211 (KANT)

ಇನ್ನೊಂದು ಮೊಕದ್ದಮೆಯೊಂದರಲ್ಲಿ ಮರಣಪೂರ್ವ ಹೇಳಿಕೆಯನ್ನು ಸಾವಿಗೀಡಾದ ವ್ಯಕ್ತಿಯ ತಾಯಿಯ ಮುಂದೆ ಮಾತ್ರ ನೀಡಲಾಗಿತ್ತು. ಆದರೆ ಕೇವಲ ಇದರ ಆಧಾರದ ಮೇಲೆ ಅಪರಾಧಿಗೆ ಶಿಕ್ಷೆ ನೀಡುವುದು ಸರಿಯಲ್ಲ ಎಂದು ನ್ಯಾಯಾಲಯ ಅಭಿಪ್ರಾಯ ಪಟ್ಟಿತು. AIR 1980 SC 419

ಸಾಯುತ್ತಿರುವ ವ್ಯಕ್ತಿ ಹೇಳಿಕೆ ನೀಡುವ ಸ್ಥಿತಿಯಲ್ಲಿದ್ದನೇ ಎಂಬ ಕುರಿತು ಅಭಿಪ್ರಾಯ ವ್ಯಕ್ತಪಡಿಸಲು ವೈದ್ಯರು ಸೂಕ್ತ ವ್ಯಕ್ತಿಗಳು ಎಂಬುದಾಗಿ ನ್ಯಾಯಾಲಯ ಮೊಕದ್ದಮೆಯೊಂದರಲ್ಲಿ ಅಭಿಪ್ರಾಯ ವ್ಯಕ್ತಪಡಿಸಿದೆ. (1976) 4 S.C.C. 351.

ಮರಣ ಪೂರ್ವ ಹೇಳಿಕೆ, ಅಂತಹ ವ್ಯಕ್ತಿಗೆ ಚಿಕಿತ್ಸೆ ನೀಡುತ್ತಿರುವ ವೈದ್ಯರ ಪ್ರಮಾಣಪತ್ರ ಹೊಂದಿರದಿದ್ದರೆ ಅಂತಹ ಹೇಳಿಕೆಗೆ ಮಹತ್ವ ನೀಡಕೂಡದು ಮತ್ತು ಮರಣ ಪೂರ್ವ ಹೇಳಿಕೆ ಪ್ರಶ್ನೆ ಮತ್ತು ಉತ್ತರಗಳ ರೂಪದಲ್ಲಿರಬೇಕು ಹಾಗೂ ಸಾಧ್ಯವಾದಷ್ಟು ಮಟ್ಟಿಗೆ ಹೇಳಿಕೆ ನೀಡಿದ ವ್ಯಕ್ತಿಯ ಶಬ್ದಗಳಲ್ಲಿರಬೇಕು ಎಂದು ವಿಭಾಗೀಯ ನ್ಯಾಯಪೀಠ ಮೊಕದ್ದಮೆಯೊಂದರಲ್ಲಿ ಹೇಳಿದೆ. ILR 1998 KANT 1387.

ಮರಣ ಪೂರ್ವ ಹೇಳಿಕೆ ವೈದ್ಯ ಅಥವಾ ದಂಡಾಧಿಕಾರಿಯಿಂದಲೇ ದಾಖಲಿಸಲ್ಪಡುವುದು ಅಪೇಕ್ಷಣೀಯವೆಂದು ಸರ್ವೋಚ್ಚ ನ್ಯಾಯಾಲಯ ಮರಣರ್ವ ಹೇಳಿಕೆಯ ಸಾಕ್ಷಿ ಮಹತ್ವವನ್ನು ಪರಿಶೀಲಿಸುತ್ತಿರುವ ಸಂದರ್ಭವೊಂದರಲ್ಲಿ ಸ್ಪಷ್ಟವಾಗಿ ಅಭಿಪ್ರಾಯ ವ್ಯಕ್ತಪಡಿಸಿದೆ. 1979 CRI. L.J.700.

ಶ್ರೀಘ್ರವೇ ತನ್ನ ಸಾವನ್ನು ನಿರೀಕ್ಷಿಸುತ್ತಿರುವವನು ಸುಳ್ಳು ಹೇಳಲಾರ ಎಂಬುದು ಪರಿಗಣಿಸಲ್ಪಟ್ಟ ವಿಚಾರ. ಆದರೆ ತಾನು ನಿರೀಕ್ಷಿಸಿದ್ದಕ್ಕಿಂತಲೂ ಹೆಚ್ಚು ಸಮಯ ವ್ಯಕ್ತಿ ಬದುಕಿದ ಮಾತ್ರಕ್ಕೆ 'ಮರಣಪೂರ್ವ ಹೇಳಿಕೆ' ತನ್ನ ಮಹತ್ವ ಕಳೆದುಕೊಳ್ಳಲಾರದೆಂದು ನ್ಯಾಯಾಲಯು ಇತ್ತೀಚಿನ ಮೊಕದ್ದಮೆಯೊಂದರಲ್ಲಿ ಅಭಿಪ್ರಾಯಪಟ್ಟಿದೆ. AIR 1998. SC. 684.

— *ಬಿ.ಕೆ. ಶ್ರೀಧರ,* ಅಡ್ವೋಕೇಟ್, ಮಡಿಕೇರಿ

---

ಕಲಿತ ಹೆಂಣು ಮನೆಗೆ ಕಂಣು

# ವಾಂಟೆಡ್ ಮಿಸ್ಟರ್ ರಾಜು [ನಮ್ಮ ರಾಜು ಮಂಜನ ಕಥೆ]

ಧಾರಾವಾಹಿ -10

**ಹಿಂದೆ ನಡದದ್.......**

ಮೈಸೂರಿಗೆ ಬಂದ ರಾಜುಗೆ ಹಣಸಂಪಾದನೆ ಮಾಡಕು ದಿನಕ್ಕೊಂದು ವೇಷನಹಾಕಂಡ್ ದಿನಕೊಂದು ಕಸುಬುನ ಹುಡುಕುತಾ ಇತ್. ಹಂಗಾಗಿ ಹಿಂದಿನ ದಿನ ಕಪಟಸನ್ಯಾಸಿಗೆ ಏಮಾರಿಸಿ ಅವನ ವರಸೆಲೇ 1000 ಸಂಪಾದನೆ ಮಾಡಿತ್ ಈದಿನ ಇದೇ ಖಾವಿ ವೇಸಲೇ ಮೈಸೂರು ಸಿಟಿಲಿ ಒಂದ್ ಖಾಯಂ ಆದ ಲಾಡ್ಜ್‌ನ ತಕಂಡ್ ಅಲ್ಲಿ ಉಳ್‌ಕಂಬಕೆ ಏರ್ಪಾಡ್ ಮಾಡಿಕಂಡತ್...

ಮುಂದಕೆ..........

ಗರಮಾ ಗರಮ್ ಛಾಯ್ ಯಾರಿಗೆ ಬೇಕ್ ಬಿಸಿಬಿಸಿ ಚಾಯ, ಕಾಫೀ ತ ಜೋರಾಗಿ ಕೂಗಿ ಹೇಳಿಕಂಡ್ ಈ ರಾಜು ಕೊಂಬರೆ ಹತ್ರ ಚಾಯವಾಲ ಹೈದ ಕರ್ದ್ವಾಕನ ರಾಜುಗೆ ಪಟ್ಟತ್ತ ನಿದ್ರೆಂದ ಎಚ್ಚರ ಆತ್, ಕೈಲಿದ್ದ ರಿಸ್ಟ್‌ವಾಚ್ ಗಂಟೆ 7½ನ ತೋರ್‌ಸ್ತಿತ್ತ್. ಸರಿ ಎದ್ದ್ ಅರೆಕಣ್ಣ್‌ಬುಟ್ಟ್‌ಕಂಡೇ ಒಂದ್ ಚೋಟಾ ಚಾಯ್ ಕೊಡಪ್ಪತ್ತೇಳ್ತ್. ಯಾಕೆತ್ತೇಳಿರೆ ರಾತ್ರಿ 11 ಗಂಟೆ ರಾತ್ರಿವರ್ಗೂ ಅಲ್ಲೇ ಅಲಂಕಾರ್ ಬಾರ್‌ಲಿ ಕುದ್ದ್‌ಕಂಡ್ ತಿಂದ್ ಕುಡ್ದ್ ಎದ್ದ್ ಬಂದಿತ್. ಆ ಮೇಲೆ ನಿತ್ಯಕರ್ಮಗಳನೆಲ್ಲಾ ನಿಧಾನಕ್ಕೆ ಮಾಡಿ ಮುಗ್ಸಿಕಂಡ್ ಇಂದ್ ಯಾವ ಕೆಲ್ಸನ ಹುಡ್ಕಿ ಹಿಡಿಯದೂ? ತ ಗ್ಯಾನ ಮಾಡಿಕಂಡೇ ಪುನ ಇನ್ನೊಂದು ಸರ್ತಿ ಹಂಗೇ ಹಾಸಿಗೆ ಮೇಲೆ ಹೊರಳಿ ಕಂಡತ್. ಈಗ ಪೋಲಿಸ್‌ನ ವೇಷನ ಹಾಕೊಂಬೋದಾ? ಅಥವಾ ಸನ್ಯಾಸಿ ವೇಷನ ಧರಿಸಿ ಕಂಬೋದಾ ತ್ತೇಳುವ ಐಡಿಯಾ ಸರಿಯಾಗಿ ಮನ್ಸಿಗೆ ಹೊಳೆಯದೆ ಹಂಗೇ ಮಲಗಿದಲ್ಲೇ ನಿದ್ದೆ ಹೊಡ್ತ್. ಎಷ್ಟೋ ಹೊತ್ತ್ ಕಳ್ದ್ ಹೋತ್. ಪುನಃ ಎಚ್ಚರ ಆಕ್ಯಾಕನ ಗಂಟೆ 4½ ಆಗಿತ್.

ಬೇಗ್ ಎದ್ದ್ ಕೈಕಾಲು ಮುಖನ ತೊಳ್ಕಂಡ್ ಆ ಸನ್ಯಾಸಿ ವೇಷನ ನೀಟಾಗಿ ಹಾಕಂಡತ್. ಜೊತೆಗಿದ್ದ ಕಮಂಡಲ ಮತ್ತೆ ದಂಡನ ಅಲ್ಲೇ ರೂಂಲಿ ಇಟ್ಟ್ ಬುಟ್ಟ್ ಹೊಸದಾಗಿ ತಕಂಡಿದ್ದ ಪೋಲಿಸ್ ದಫೇದಾರನ ಡ್ರೆಸ್‌ನ ಜೋಳಿಗೆ ಒಳಗೆ ತುಂಬಿಕಂಡತ್. ಅಲ್ಲಿಂದ ಗಾಂಧಿಸರ್ಕಲ್‌ಗೆ ಅಲ್ಲಿ ಮಧುನಿವಾಸ್ ಒಳಗೆ ನುಗ್ಗಿತ್ತ್. ಹೊಟ್ಟೆತುಂಬಾ ರವೆದೋಸೆ, ಚೌಚೌ ಬಾತ್ ಎಲ್ಲಾ ತಿಂದ್‌ಕಂಡ್ ಕಾಫಿ ಕುಡ್ದ್ ಸಿಗರೇಟ್‌ನ ಹಚ್ಚಿಕಂಡ್ ಹೊರಗೆ ಬಾತ್. ಅಲ್ಲೇ ಗಣೇಶ್ ಬಸ್ ಕೆ. ಆರ್. ಎಸ್‌ಗೆ ಹೊರಟ್ ನಿಂತಿತ್. K.R.S. ಬನ್ನಿ ಬನ್ನಿ. K.R.S., K.R.S. ತ್ತ ಅಲ್ಲಿದ್ದ ಕಂಡಕ್ಟರ್ ಕೂಗಿ ಕರೆತಿತ್ತ್. ಸರಿ. ಕೆ. ಆರ್. ಎಸ್ ಗಾದ್ರೂ ಹೋಗಿ ಬಂದ್ರೆ ಸ್ವಲ್ಪ ಟೈಂ ಪಾಸ್ ಮಾಡಕ್ ತೇಳಿಕಂಡ್ ಜನರ ಮದ್ಯ ಜಾಗ ಮಾಡಿಕಂಡ್ ಹೋಗಿ ಒಂದ್ ಸೀಟ್‌ನ ಹಿಡ್ದ್ ಕುದ್‌ಕಂಡತ್. ಬಸ್ ಒಳಗೆ ಹೆಚ್ಚಾಗಿ ಕೇರಳ ಕಡೆಂದ ಬಂದ ಜನ, ನಾರ್ಥ್ ಇಂಡಿಯಾ ಕಡೆ ಜನ ಬರೇ ಟೂರಿಸ್ಟ್ ಜನ ಬೃಂದಾವನ ಗಾರ್ಡನ್‌ನ ನೋಡಿಕೆ ಬಹಳ ಉತ್ಸಾಹದಿಂದ ಹೊರಟಿದ್ದೊ. 6½ ಗಂಟೆಗೆಲ್ಲಾ ಈ ಬಸ್ ಕೆ. ಆರ್. ಎಸ್ ಗಾರ್ಡನ್ ಒಳಗೆ ಹೋಗಿ ನಿಂತತ್. ಆ ಗಾರ್ಡನ್ ಒಳಗೆ ಜನ ಬಹಳ ಜಾಸ್ತಿ ಬಂದು ತುಂಬಿದೋ. ಒಳ್ಳೆ ಇರುವೆಗ ಸಾಲುಕಟ್ಟಿಕೊಂಡ್ ಹೋದಂಗೆ ಜನರ ಗುಂಪು ಸಾಗುತಿತ್ತ್. ದೂರದ ಊರ್‌ಗಳಿಂದ ಬಂದಂತಹ ಪ್ರವಾಸಿ ಜನಂಗ ಅಜ್ಜಂದರ್, ಅಜ್ಜಿಕ, ಹಂಗೇ ಕಾಲೇಜ್‌ಗಳಿಂದ ಸ್ಕೂಲ್‌ಗಳಿಂದ ಟೂರ್ ಬಂದ ಹೈದಂಗ ಗೂಡೆಗ ಎಲ್ಲಾ ಬಹಳ ಖುಷಿ ಖುಷಿ ಆಗಿ ಕೈ ಕೈ ಹಿಡ್‌ಕಂಡ್ ಸುತ್ತಾಡುತಿದ್ದೋ. ಅಲ್ಲಿನ ಬಣ್ಣದ ಲೈಟ್ ಬೆಳಕಿಗೆ ತರತರಲಿ ಚಿಮ್ಮುತಿದ್ದ ನೀರಿನ ಕಾರಂಜಿ ಗಳೊಟ್ಟಿಗೆ ಈ ಮಕ್ಕ ಎಲ್ಲಾ ನಗೆ ಆಡಿಕಂಡ್, ತಮಾಷೆ ಮಾಡಿ ಕಂಡ್ ಸಂತೋಷ ಪಡುತಿದ್ದೊ. ಆದ್ರೇ ಈ ಉತ್ಸಾಹಿ ಚಿಲುಮೆಯ ಮೂರ್ತಿ ಈ ಸನ್ಯಾಸಿ ವೇಷದಾರಿ ರಾಜುಗೆ ಇಂತಹ ಜೊತೆಗಾರರು ಯಾರೂ ಇಲ್ದೆ ಪೆಚ್ಚುಮೋರೆ ಹಾಕಿಕಂಡ್, ಈ ಮಕ್ಕಳ ಆಟಗಳ ಪಿಳಿ ಪಿಳಿ ಕಣ್ಣ್ ಬುಟ್ಟ್‌ಕಂಡ್ ಅವರ ಹಿಂದೆ ಬಾಯಿ ಬುಟ್ಟು ಕಂಡ್, ನಡೀತಿತ್ ಇಂತಹ ಜನರ ಮಧ್ಯೆ ಈ ಸನ್ಯಾಸಿಗೇನ್ ಕೆಲ್ಸ? ಇಂವನ ಮಾತಾಡ್ಸಿಕೆ ಯಾರೊಬ್ಬರೂ ಹತ್ರ ಬಾತಿತ್‌ಲೆ.

ಅಬ್ಬಾ! ಈ ಒಂದ್ ದಿನಕ್ಕೇ ಈ ಸನ್ಯಾಸಿ ವೇಷದ ಮೇಲೆ ರಾಜುಗೆ ಜಿಗುಪ್ಸೆ ಬಂದು ಬುಡ್ತ್ ಅದಕ್ಕೇ ಇರೋಕ್ಕು ಕೆಲವು ಜನ ವಯಸ್ಸಾದ ಮೇಲೆ ಜನರ ಈ ಜಂಜಾಟ್‌ದ ಬೇರೆ ಒಬ್ಬನೇ ಸಮಾಧಾನ ಆಗಿ ಇರಿಕೆ ಇಂತಹ ಸನ್ಯಾಸಿ ವೇಷನ ಧರಿಸಿ ಕಂಬೋದು ಕಂಡದೆ. ಯಾಕೆ ತ್ತೇಳಿರೆ ಈ ವೇಶನ ಹಾಕಂಡರೆ ಜನರ ಸಂಪರ್ಕನೇ ಬುಟ್ಟುಹೋದೆ. ಆದ್ರೇ ಕೆಲವು ಜನ ತಮ್ಮ ಹಲವಾರು ನೀಚ ಕೆಲ್ಸನ ಸಾದಿಸಿಕೆ ಜನ ಸಂಪರ್ಕ ಇಲ್ಲದಂಗೆ ಮಾಡಿಕಂಬಕ್ಕೆ ಈ ವೇಶನ ಹಾಕಂಬವು ಒಳೊ. ಇಂತವೇ ಕೊನೆಗೆ ಇಂವ ಒಬ್ಬ ಡೊಂಗಿ ಸನ್ಯಾಸಿತಾ ಗೊತ್ತಾಗಿ ಸಿಕ್ಕಿಹಾಕಿಕಂಬೊದು. ಹಿಂಗೇ ರಾಜು ಗ್ಯಾನ ಮಾಡಿಕಂಡ್ ನಡ್ದಾಕನ ಆ ಕೊನೇಲಿ ಇರುವ ಮ್ಯೂಸಿಕಲ್ ಪೌಂಟನ್‌ನ ಹತ್ರಕ್ಕೆ ಈ ಗುಂಪು ಮಧ್ಯಲಿ ಸಾಗಿತ್ತ್ ಆ ಮ್ಯೂಸಿಕ್ ಪೌಂಟನ್‌ನ ಸುತ್ತಾ ಜನ ಸೆರೆ ಇಲ್ಲದಂಗೆ ತುಂಬಿ ನಿಂತಿದ್ದೊ. ಅವರ ಸೆರೆಲಿ ಈ ಸನ್ಯಾಸಿ ಕೂಡಾ ನುಗ್ಗಿ ಅದೇನ್‌ತಾ ಆಸೆಲಿ ಬೊಗ್ಗಿ ನೋಡ್ತ್ ನಿಂತಿದ್ದವರ ಒತ್ತರಿಸಿ ಕಂಡ್ ಬಂದ ಈ ಸನ್ಯಾಸಿನ ಪಕ್ಕದಲ್ಲೇ ನಿಂತಿದ್ದ ಗೂಡೆಗ ನೋಡಿ ಪಕ ಪಕನೆ ನೆಗೆ ಆಡಿಬುಟ್ಟೊ. ಅವರ ಅರ್ಥಲಿ ಈ ಸನ್ಯಾಸಿಗ್ಯಾಕೆ ಇಂತಹ ಖುಷಿ ಪಡುವ ತೆವಲು ಜನರ ಮಧ್ಯೆ ನಮ್ಮನ್ನ ಒತ್ತರಿಸಿ ಕಂಡ್ ಬಂದ್ ಆನಂದ ಪಡುವ ಕೆಲ್ಸ ಯಾಕೆ ಇವಂಗೆ ಇವು ಹಂಗಿಸಿದಂಗೆ ನಗೆ ಆಡುದರ ನೋಡ್ದ ರಾಜುಗೆ ಸಿಟ್ಟ್ ಬಂದ್ ಬುಡ್ತ್. ಮನಸ್ಸಿಲಿದ್ದ ಆಸೆ, ಹುಮ್ಮಸ್‌ನ ಬಾಯಿ ಬುಟ್ಟ್ ಹೇಳುವಂಗೆ ಇಲ್ಲೆ. ಈ ಸನ್ಯಾಸಿ ವೇಷದ ಮೇಲೆ ಉರಿಹತ್ತಿಕಂಡ್ ಮುಖನ ಊದಿಸಿಕಂಡ್. "ಥೂ! ತರ್ಕ್‌ಲೆ" ಮೊದ್ಲ್ ಈ ಸನ್ಯಾಸಿ ವೇಷನ ಬಿಚ್ಚಿ ಬಿಸಾಕಿ ಆ ದಫೆದಾರನ ವೇಷನ ಹಾಕಂಡ್ ಒಳ್ಳೆ ದರ್ಪಲಿ ತಿರುಗಾಡಕು ತಾ ಗ್ಯಾನ ಮಾಡ್ತ್.

ಅಲ್ಲಿ ಅಷ್ಟೊಂದು ಮನ ಮೋಹಕವಾಗಿ ನಿಮಿಷಕೊಂದು ತರದ ಬಣ್ಣದ ಬೆಳಕಲಿ, ಆ ಮ್ಯೂಸಿಕ್‌ಗೆ ಸರಿಯಾಗಿ ನರ್ತನ

ಮಾಡುವ ಕಾರಂಜಿನ ಇನ್ನೂ ತುಂಬಾ ಹೊತ್ ನೋಡಿ ಕಣ್ಣಿಗೆ ಆನಂದ ಪಡಕ್ಕುತ್ತೇಳುವ ಆಸೆ ಇದ್ರೂ ಅಲ್ಲಿ ಇವಂಗೆ ಹೆಚ್ಚ್ ಹೊತ್ ನಿಲ್ಲಿಕೆ ಆತ್‌ಲೆ. ತನ್ನ ಪಾದದ ಕೆಳಗೆ ಎಲ್ಲಾ ಉರಿಹತ್ತಿ ಹೋದಂಗೆ ಆಗ್‌ತಿತ್. ಹಂಗಾಗಿ ಅಲ್ಲಿಂದ ನೆಟ್ಟಗೆ ವಾಪಾಸ್ಸು ಹೊರಟ್ ಬಂದ್ ಮೆಯಿನ್ ಗೇಟ್ ಕಡೆಗೆ ಬಾತ್. ಆ ಗೇಟ್ ಲಿದ್ದ ಒಬ್ಬ ಪಿ.ಸಿ. (ಪೋಲಿಸ್) ಹೇ ಸನ್ಯಾಸಿ ಅಲ್ಲೇ ಎಡಗಡೆಗೆ ತಿರುಗಿ ಹೋಗಯ್ಯಾತ್ತೇಳಿ ಏಕವಚನಲಿ ಹೇಳಿಕಂಡ್ ವ್ಯಂಗ್ಯವಾಗಿ ನಗೆ ಆಡ್‌ತಿತ್. ಇದನ್ನ ಕೇಳಿ ಈ ಸನ್ಯಾಸಿಗೆ ಇನ್ನೂ ಹೆಚ್ಚ್ ಸಿಟ್ಟ್ ಬಂದ್ ಹಲ್ಲ್‌ಕಚ್ಚಿಕಂಡತ್. ಇಂವ ಯಕಶ್ಚಿತ ಒಬ್ಬ ಪೋಲಿಸ್ ಪ್ಯಾದೆ. ನಾನ್ ಇನ್ನ್ ಸ್ವಲ್ಪ ಹೊತ್ತಿಗೆ ಪೋಲಿಸ್ ದಫೇದಾರ ಆಗಿ ಹೊನೆ. ಆಮೇಲೆ ನನ್ನ ಗತ್‌ನ ಇಂವಂಗೆ ಸರಿಯಾಗಿ ತೋರ್‌ಸ್‌ಕ್‌ತಾ ಸಮಧಾನ ಪಟ್ಟ್‌ಕಂಡತ್ ಆಗೇಟ್‌ಂದ ಹೊರಗೆ ಬಾತ್.

ಒಳ್ಳೆ ಕತ್ತಲಾಗಿತ್ ಆ ಗೇಟ್‌ನ, ಪಾರ್ಕ್‌ನ ಎಲ್ಲಾ ದಾಟಿ, ಮುಂದೆ ಇದ್ದ ಡೊಂಕು ತಿರುಗಾಸನ ದಾಟಿದಂಗೆ ಪಕ್ಕದ ಕುರುಚುಲು ಗಿಡಗಳ ಪೊದೆ ಮದ್ಯೆಕ್ಕೆ ನುಗ್ಗಿತ್. ಅಲ್ಲಿಂದ ರಾಜು ಹೊರಗೆ ಬಾಕಾಕನ ಹೆಗಲ್ ಮೇಲೆ ಎರಡ್ ಕೊರ್ ಇರುವ ಪೋಲಿಸ್ ದಫೇದಾರ ಆಗಿತ್. ಕೈಲಿ ಒಂದ್ ಡೈರಿ, ದೊಣ್ಣೆ, ಕಾಲಿಗೆ ಬೂಟ್, ತಲೆಗೆ ಹ್ಯಾಟ್ ಹಾಕಿದ ದಪ್ಪಮೀಸೆಯ ಈ ದಫೆದಾರ ಲಟ್ಟಪಟ್ಟದ ಸ್ಟೆಪ್ಸ್ ಹಾಕಂಡ್ ಕೈಲಿ ಸಿಗರೇಟ್ ಹಿಡ್‌ಕಂಡ್ ಆ ಕೆ. ಆರ್. ಎಸ್. ಪೋಲಿಸ್ ಸ್ಟೇಶನ್‌ನ ದಾಟಿಕಂಡೇ ಹೋಗಿ ಬೆಳಗೊಳದ ಪೇಪರ್ ಮಿಲ್ ಸರ್ಕಲ್‌ಗೆ ಬಂದ್ ತಲಪಿತ್ ಅಲ್ಲಿ ಮೂರು ರಸ್ತೆ ಕೂಡುವಲ್ಲಿ ಇಂವಂಗೆ ದಾರಿ ತಪ್ಪಿಹೋಗಿ ಹಂಗೆ ಏನೇನೋ ಗ್ಯಾನ ಮಾಡಿಕಂಡ್ ಮುಂದೆ ಹೋದವಂಗೆ ಗ್ಯಾಮನ್ ಪ್ಯಾಕ್ಟರಿಯ ಉದ್ದ ಸಾಲಾಗಿ ಕಟ್ಟಿಸಿದ ಖಾಲಿ ಖಾಲಿ ನಿರ್ಜನ ಕ್ವಾರ್ಟಸ್ ಕಣ್ಣಿಗೆ ಕಂಡತ್. ಥೂ ಎಂಥಾ ಕೆಲ್ಸ ಆಗಿ ಹೋತ್ ನಾನ್ ಮೈಸೂರು ಕಡೆಗೆ ಹೊರಟವಂಗೆ ಆ ಸರ್ಕಲ್‌ಲೇ ಮೂರು ಕಡೆ ರಸ್ತೆ ಒಡ್ಡದರಲ್ಲಿ ನಾನ್ ದಾರಿ ತಪ್ಪಿ ಹೋಗಿ ಇತ್ತಕಡೆಗೆ ಬಂದ್ ಬುಟ್ಟಳೆತಾ ಬೇಜಾರ್ ಮಾಡಿಕಂಡತ್. ಯಾಕೆ ತ್ತೇಳಿರೆ ಈ ರಸ್ತೆ ಮಾಮೂಲಿ ಬಸ್ ರಸ್ತೆ ಅಲ್ಲ. ಆಗೊಮ್ಮೆ ಈಗೊಮ್ಮೆ ಲೋಡ್ ತುಂಬಿಕಂಡ್ ಹೋಗುವ ಲಾರಿಗ, ಟೆಂಪೋಗ, ಟೂರಿಸ್ಟ್ ಬಸ್‌ಗ ದಾಟ್ಯಾಡುತಿದ್ದವು ಅಷ್ಟೆ. ಇದ್ ಮಡಿಕೇರಿ ಬೆಂಗಳೂರಿಗೆ ಸಾರ್ಟ್ ಕಟ್ಟ್ ಡೈವರ್ಸನ್ ರಸ್ತೆ ಆಗಿತ್. ಅಷ್ಟೊತ್ತಿಗೆ ಈ ಕತ್ತಲೆ ಒಳಗೆ ಎದುರುಗಡೇಂದ ಒಬ್ಬ ವಯಸ್ಸಾದ ಗೌಡ್ರು ಅವರ ಹಳೇ ಬುಲ್ಲೆಟ್ ಗಾಡಿನ ತಳ್ಳಲಾರದೆ ಕಷ್ಟಪಟ್ಟ್ ತಳ್ಳಿಕಂಡ್ ಬಾತಿದ್ದೊ, ಈ ದಪೆದಾರನ ನೋಡ್ದ ಆವುಕೆ ಬಹಳ ಖುಷಿ ಆತ್. ಸ್ವಾಮಿ ದಫೇದಾರರೆ ನನ್ನ ಬೈಕ್‌ನ ಒಸಿ ಚೆಕ್‌ಪ್‌ಮಾಡಿ ನೋಡಿ ನಾನ್ ಈಗ ಹಿನ್‌ಕಲ್‌ಲಿ ರಿಫೇರಿ ಮಾಡ್ಸಿಕಂಡ್ ಹೊರಟೆ ನೋಡಿ, ಅಲ್ಲಿ ಬೆಮೆಲ್ ಪ್ಯಾಕ್ಟರಿ ಹತ್ರಕ್ಕೆ ಬರೋವತ್ತಿಗೆ ಕೆಟ್ಟ್‌ಹೋತ್ ತಾ ಹೇಳ್ದೊ. ಇವರ ನೋಡ್ದ ದಫೇದಾರ ರಾಜುನ ಕ್ರಿಮಿನಲ್ ಮೈಂಡ್‌ಗೆ ಒಂದ್ ಐಡಿಯಾ ಹೊಳ್ತ್. ಆಯ್ತು ಯಜಮಾನ್ರೇ ನಾನು ನಿಮ್ಮ ಬೈಕ್‌ನ ರೆಡಿಮಾಡಿ ಕೊಟ್ಟನೆ. ಆದ್ರೇ ನೀವು ಅದ್‌ಕೆ ನಂಗೆ ಏನೂ ಕಾಸ್‌ಕೊಡ್ದು ಬೇಡ. ನಾನೇ ನಿಮಿಗೆ ಸಾಕಷ್ಟ್ ಕಾಸ್‌ನ ಕೊಟ್ಟನೆ. ಅದಕ್ಕೆ ನೀವು ಇಲ್ಲೇ ನನ್ನ ಜೊತೆ ಅರ್ಧಗಂಟೆ ನಿಮ್ಮ ಬೈಕ್‌ನ ನಿಲ್ಸಿಕಂಡ್ ಇರೋಕು. ಹಂಗೇ ಸ್ವಲ್ಪ ಹೊತ್ತ್ ನಿಮ್ಮ ಕೈಲಿದ್ದ ಟಾರ್ಚ್ ಲೈಟ್ ಕೂಡಾ ನಂಗೆ ಬೇಕಾದೆ ತ ಹೇಳ್ತ್. ಆಯ್ತು ಸ್ವಾಮಿ ಅರ್ಧಗಂಟೆ ಏನ್ ಒಂದು ಗಂಟೆ ಬೇಕಾದ್ರೂ ಇದ್ದನೆ. ನನ್ನ ಬೈಕ್‌ನ ನೀವು ರಿಪೇರಿ ಮಾಡಿಕೊಟ್ಟರೆ ಸಾಕ್ ಈ ಬೈಕ್‌ನ ಸ್ಟಾಟ್ ಮಾಡಿಕೆ ಒದ್ದ್ ಒದ್ದ್ ನಾನ್ ಸುಸ್ತ್ ಆಗಿ ಹೋಗೊಳೆ. ಇದರದ್ ಯಮ ಭಾರ ತಾ ಹೇಳಿ, ಒಪ್ಪಿಕಂಡತ್.

ರಾಜು ಅವರ ಟಾರ್ಚ್‌ಬೆಳಕಲಿ ಅದರ ಪ್ಲಗ್‌ನ ಬಿಚ್ಚಿನೋಡಿ ಅದರ ಕ್ಲೀನ್ ಮಾಡಿ ಹಾಕಿತ್. ಆಮೇಲೆ ವೈರಿಂಗ್‌ನ ಸ್ವಲ್ಪ ಅಲ್ಲಾಡಿಸಿ ನೋಡಿ ಬಿಗಿ ಮಾಡಿ, ಕಾರ್ಬರೇಟರ್ ಚೋಕ್‌ನ ಒಂದ್ ಸರ್ತಿ ಅಲ್ಲಾಡಿಸಿ ಸರಿ ಮಾಡ್ತ್. ಆಮೇಲೆ ಸೀಟ್ ಮೇಲೆ ಕುದ್ದ್‌ಕಂಡ್ ಸರಿಯಾಗಿ ಕಂಪ್ರೆಶರ್ ಬಿಲ್ಡ್‌ಆಪ್ ಆಗುವವರೆಗೆ ಮೆಲ್ಲೆ ಮೆಲ್ಲೆ ಕಿಕ್ ಮಾಡಿ ಕೊನೆಗೆ ಒಮ್ಮೆ ಜೋರಾಗಿ ಕಿಕ್ ಮಾಡಿ ಎಕ್ಸ್‌ಲೇಟರ್‌ನ ಕೊಡ್ತ್. ಬುಲ್ಲೆಟ್ ಗಾಡಿ ಪಸ್ಟ್‌ಕ್ಲಾಸಾಗಿ ಸ್ಟಾರ್ಟ್ ಆಗಿಹೋತ್. ಆ ವಯಸ್ಸಾದ ಗೌಡ್ರಿಗೆ ಬಹಳ ಖುಷಿ ಆಗಿ ಸ್ವಾಮಿ ದಫೇದಾರರೆ ನನ್ನ ಕಷ್ಟನ ಬಗೆ ಹರಿಸಿಬುಟ್ರೆತ್ತೇಳ್ತ್. ಆಗ ಈ ದಫೇದಾರ ಇರಲಿ ತಕೊಳ್ಳಿ ಒಂದೊಂದು ಸಿಗರೇಟ್‌ನ ಹಚ್ಚಿಕೊಳ್ಳೋನ ತೇಳಿ ಕಂಡ್ ಇಬ್ರೂ ಅದಕ್ಕೆ ಕಡ್ಡಿಗೀರಿ ಧಂ ಎಳ್ದ್ ಹೊಗೆ ಬುಡಿಕೆ ಶುರುಮಾಡ್ದೊ.

(ಮುಂದ್‌ವರ್ದದ) ಶಂಕರನ ಬಸಪ್ಪ

---

**ಅಡುಗೆ**

ಪುಸ್ತಕ ನೋಡಿ ಕಲ್ತುಟ್ಟು ಅಡುಗೆ
ಚಪಾತಿ ಗೊತ್ಲೆದ ಈ ಗೂಡೆ
ಪುಸ್ತಕಲಿ ಹಿಂಗೆ ಇತ್ತ್
ಅದೇ ಅವ್‌ಳಿಗೆ ಬೇಕಿತ್ತ್
ಹಿಟ್ಟ್‌ಕಲ್‌ಸಿ ಇಸಿ ಒಂದ್‌ಗಂಟೆ
ಗೂಡೆ ತಂದಿಟ್ಟತ್ತ್ ಹಿಟ್ಟ್‌ನ ಮೇಲೆ
ಒಂದ್ ಮಣಿಗಂಟೆ

ಕೆರೆಮೂಲೆ ಸಂಧ್ಯಾ

---

**ಸ್ವಾತಂತ್ರ ದಿನಾಚರಣೆ**

ವರ್ಷದಲ್ಲಿ ಒಂದೇ ಒಂದು ಬಾರಿ
ಸ್ವಾತಂತ್ರ ದಿನಾಚರಣೆ ಆದರೆ
ಕೆಲ ಗಂಡಸರಿಗೆ
ಹೆಂಡತಿ ತವರಿಗೆ
ಹೋದ ದಿನಗಳಲೆಲ್ಲಾ
ಸ್ವಾತಂತ್ರ ಆಚರಣೆ

ನೈಯಣ್ಣೀರ ರಶಿ, ಕಡಿಯತ್ತೂರು

ಕೊಡಗು ಸಂಗಾತಿ, ಪಾಕ್ಷಿಕ ಅನ್ನು ಕೊಂಡು ಓದಿರಿ.

13ನೇ ಪುಟದಿಂದ

ಒಂದು ವೇಳೆ ನಿಮಗೆ ಸುಳಿವು ಗೊತ್ತಾಗಿದ್ದರೆ ನಿಲುವು ಅದನ್ನು ರಹಸ್ಯವಾಗಿ ಪೋಲಿಸರಿಗೆ ತಿಳಿಸಬೇಕಿತ್ತು:."

ಶ್ರೀಕಂಠ "ಈ ರೀತಿ ಶಂಖ, ಜಾಗಟೆಹೊಡೆಯುತ್ತಾ ಪೋಲಿಸರ ಹತ್ತಿರ ಹೋದರೆ ತೊಂದರೆಯಾಗೊಲ್ಲವೆ?"

"ಈ ಪ್ರಕರಣಕ್ಕೆ ಕಾರಣನಾಗಿರೊ ಸೂತ್ರದಾರಿ ಈ ಗುಂಪಿನಲ್ಲಿ ಖಂಡಿತಾ ಇರುತ್ತಾನೆ, ಅವನು ನಿಮ್ಮನ್ನು ಖಂಡಿತಾ ಸುಮ್ಮನೆ ಬಿಡಲಾರ".

ರೇವತಿ ಭಯದಿಂದ ನಡುಗಿದಳು.

ಶ್ರೀಕಂಠ "ನೀವು ಈಗ ಆ ಬಂಗಲೆಗೆ ಹೋಗಬೇಡಿ. ನಮ್ಮ ಮನೆಗೆ ಬಂದು ಬಿಡಿ".

"ಹೌದು ರೇವತಿಯವರೆ".

ರೇವತಿ "ನೀವಿಬ್ಬರು ನನ್ನ ಬಗ್ಗೆ ಕಾಳಜಿ ತೋರಿಸುತ್ತಿರುವುದಕ್ಕೆ ಥ್ಯಾಂಕ್ಸ್. ಪೋಲಿಸ್ ಆಫೀಸರ್ ನನಗಾಗಿ ಅಲ್ಲಿಗೆ ಬರುತ್ತಾರೆ. ಅವರ ಜೊತೆ ಮಾತಾಡಿದ ನಂತರ ನಾನು ಮುಂದೆ ಎಲ್ಲಿರ ಬೇಕೆಂದು ತೀರ್ಮಾನಿಸುತ್ತೇನೆ.

"ಹಾಗಲ್ಲ ರೇವತಿ...."

"ಪ್ಲೀಸ್ ನನ್ನನ್ನು ಒತ್ತಾಯ ಮಾಡಬೇಡಿ".

ಶ್ರೀಕಂಠ, ಪೂಜಾರಿ ಪೆಚ್ಚಾದರು.

ರೇವತಿಗೆ ಅಪಾಯ ಎಂಬುದು ವಿಭಿನ್ನ ರೀತಿಯಲ್ಲಿ ಅತಿ ಶೀಘ್ರದಲ್ಲಿಯೇ ಎದುರಾಗುವುದರಲ್ಲಿತ್ತು !

(ಮುಂದುವರೆಯುತ್ತದೆ)

---

**ಕವನ**

ನಾನೇಕೆ ಸಂಸಾರವೆಂಬ ಬದುಕು ಹೀಗಾದೆ
ಈ ಬದುಕಿಗೊಂದು ಬೆಲೆ ಇಲ್ಲ
ಕರುಣೆ ತೋರದ ಕರಿನೆರಳಲ್ಲಿ ?

ವಾತ್ಸಲ್ಯತೋರದ ಮಾತಾಪಿತರಲ್ಲಿ
ನಾನ್ಯಾವ ತ್ಯಾಗಕೂ ಸಿದ್ಧವಿದ್ದರೇನಂತೆ
ತ್ಯಾಗ ಮಾಡುವ ಹಕ್ಕು ನನಗಿಲ್ಲದ ಮೇಲೆ

ಬಾಳಲಿ ಹೇಗೆ ? ಯಾವ ಸಾರ್ಥಕತೆಗೊಸ್ಕರ ?
ಹೆಣ್ಣಿನ ಬಾಳಿಗೆ ಬೆಲೆಯಿಲ್ಲದ ಜಗದಲ್ಲಿ
ಮಾತಾಪಿತರಲ್ಲಿ ನನಗೆಷ್ಟು ಅಭಿಮಾನವಿದ್ದರೇನಂತೆ

ಅದನ್ನುಳಿಸಿಕೊಳ್ಳುವ ಭಾಗ್ಯ ಮಾತಾಪಿತರಿಗಿಲ್ಲ
ಮನನೊಂದ ಹಾಗೆ ಅಕ್ಷಿಯ ಪೋರೆ ಒದ್ದೆಯಾದ ಹಾಗೆ
ಪಶ್ಚತಾಪ ಬರುವ ಸಮಯ ಒದಗಬಹುದೆ ?

ಆದರೆ ದಾನವಳಾಗಬೇಕಿತ್ತು ಅಂದು ನಾನು ಕುಟೀರದಲ್ಲಿ
ನಾನಿಂದು ಮಾನವಳಾದೆ ಜನರ ಶುಶ್ರೂಷೆಯಲ್ಲಿ
ಅದಕ್ಕಾಗಿ ಬದುಕುಳಿದಿದ್ದೆ ಶಿವ ! ನಿನ್ನ ಸೇವೆ ಮಾಡಲೆಂದು.

**ಗುತ್ತಿಮುಂಡನ ಗಿರೀಶ್‌ಕುಮಾರ್**
ಕೊಯನಾಡು.

# ಹೆಂಡ ಕುಡ್ಕ ಸೊಂಪಣ್ಣ

"ನಾ ಯಾವಂಗೆ ಹೆದುರುಲೆ" ತೇಳಿಕಂಡ್, ಕತ್ರಿಕಾಲ್ ಹಾಕಂಡ್ ದಾರಿಲಿ ಎರಕ್ ಶಾಪ್‌ಂದ ಸ್ವಾಂಪಣ್ಣ ಬಾದು ನೋಡಿಕೆ ಒಂದು ಲಾಯ್ಕ. ಒಮ್ಮೆ ಮಲಯಾಳಲಿ, ಒಮ್ಮೆ ಕೊಡ್‌ಗ್ ಬಾಷೆಲಿ, ನೋಡು ನೋಡು ಇಂಗ್ಲೀಷ ಬುಟ್ಟಕಂಡ್ ಬಾಯಿಲಿ ಒಂದು ಕಡೆ ಜೆಲ್ ಸೊರ್ಕಂಡ್ "ಶೀನಪ್ಪ, ಅಂವ ನಂಗೆ ಯಾವ ಲೆಕ್ಕ, ಅವನ ಒಂದು ಕೈ ನೋಡಕುತ ಯಾವಂಗೊ ಬೈಕಂಡ್ ಬಾದು ಸೊಂಪಣ್ಣನ ದಿನಚರಿ. ಅದನ್ನ ನೋಡಿ ಹೆಣ್ಣ್ ಕುಳ್ಳಕ್ಕ ಹೆಂಗೆ ತೂಗ್ಸಂಡ್ ಬಂದದೆ. ಕಾಂಬಲೆ, ಕರ್ದರೆ ಯಾರ್ ಹೋಬಡಿನೆ ಮಕ್ಕಳೆ ತ ಮಕ್ಕಳಿಗೆ ಕರ್ದ್ ಹೇಳ್ತ್. ಸ್ವಾಂಪಣ್ಣಂಗೆ ಕಡ್‌ಕ್‌ಲ್ ಹತ್ರ ಬಾಕನ ಕಡ್‌ಕ್‌ಲ್ ದಾಟಿಕಾಗದೆ ಕರ್ತ್ "ಏ ಸಣ್ಣಕ್ಕ, ಬಾವ ಒಮ್ಮೆ ನನ್ನ ದಾಟ್ಸ್, ಜೋಬ್‌ಲಿ ಕಡ್ಲೆ ಉಟ್ಟು ನಿಂಗೆ ಕೊಟ್ನೆವ", ತ ಮಗಳ ಕರ್ತ್ ಯಾರ ಸದ್ದೆ ಇಲ್ಲೆ. ಸ್ವಾಂಪಣ್ಣಂಗೆ ಸಿಟ್ಟ್‌ಬಂದ್ "ಬೋಳಿ ಮಕ್ಕಳೆ ನಿಮ್ಮನ ಸಾಂಕ್‌ಕನ ಅತ್‌ನೆ, ಈಗ ಯಾರ್ ಇಲ್ಲೆ ನಂಗೆ. ಬಂದರೆ ನಿಮ್ಮಲಿ ಒಬ್ಬನ ತೆಗೆಯದೆ ಬುಡ್ದುಲೆ, ಗುಂಡು ಹೊಡ್ದ್ ಬುಟ್ಟನೆ. ಸೂಳೆ ಮಕ್ಕಳೆ" ತೇಳಿ ಬೇಲಿನ ಗಟ್ಟಿ ಎಳೆಯಕನ ಬೇಲಿ ಮುರ್ದ್ ಕುತ್ತಿ ಬೀತ್ ಗದ್ದೆಗೆ. ಸಣ್ಣಕ್ಕನು, ಕುಳ್ಳಕ್ಕನು ಓಡ್ದೊ. ಹೆಂಗಾರ್ ಮನೆ ಉಬ್ಬುಲು ಹತ್ರ ಕರ್ಕಂಡ್ ಬಂದಾಕನ ಸ್ವಾಂಪಣ್ಣಂಗೆ ಎಲ್ಲಿಲ್ಲದ ದೈವ ಭಕ್ತಿ ಬಂದ್‌ಬುಡ್ತ್. "ಗೋವಿಂದ, ನಾರಾಯಣ, ಗಣಪತಿ, ಶಂಬೋ ಶಂಕರ" ತೇಳಿ ತಲೆಕೊಡೀಗೆ ಕೈಯೆತ್ತಿಕಂಡ್, ಸೀದಾ ನೆಲ್ಲಕ್ಕಿ ಅಡಿಕೆ ಬಾಕನ ಹೆಣ್ಣಿಗೆ ಆತ್ ನನ್ನ ಗಂಡಂಗೆ ಇಷ್ಟ್ ಕುಡ್ದರು ಎಷ್ಟ್ ದೇವರ ಮೇಲೆ ಭಕ್ತಿ ಉಟ್ಟುತ. ಅಂವ ಕಳ್ಳ್ ಕಾಸುವವರ ಹೆಸರ್ ಹೇಳಿಕಂಡ್ ಒಳಗೆ ಬಾದುತ ಯಾರಿಗೂ ಗೊತ್ತಾತ್‌ಲೆ. ಗೋಡೆಗೆ ಕೈಕೊಟ್ಟ್‌ಕಂಡ್ ಸೀದಾ ಅಡಿಗೆ ಮನೆಗೆ ಬಾತ್ ಸೊಂಪಣ್ಣ. ಇಕ್ಕ್‌ನೆ ತೇಳಿಕಂಡ್ "ಎಂಥ ಇಕ್ಕುದು. ಅಲ್ಲ ನೀವು ಯಾಕೆ ಹಿಂಗೆ ಕುಡಿಯದು ತ" ಹೆಣ್ಣ್‌ದ್ ರಾಮಾಯಣ ಸುರಾತ್ತ್ "ಏಯ್ ಉಸ್‌ರ್ ಬುಟ್ರೆ ಕೊಂದ್ ಬುಟ್ನೆ. ಕುಡ್ದ್ ಎಂಥ ಹಾಳ್ ಮಾಡ್ದೆ ನೆ ನಾನ್" ನಿಂಗೇನ್ ಕಮ್ಮಿ ಮಾಡ್ದೊಳೆ. ನಾ ಗೈದನೆ, ಕುಡ್ದನೆ, ನಿಂಗೇನ್ ಅವಶ್ಯ. ಇನ್ನೊಮ್ಮೆ ಉಸ್‌ರ್ ಎತ್ತಿರೆ ಕೊಂದ್ ಬುಟ್ನೆ" ತ ಹೆದ್‌ರ್ಸಿತ್. "ಕೊಲ್ಸಪ್ಪ ಕೊಲ್ಲಿ, ನಾನ್ ಯಾರ ಮೇಲೆ ಜೂವ ಬುಡಕುತ ಒಳೆ ತ ಕುಳ್ಳಕ್ಕ ಮರ್ಡ್‌ಕನ ಸಣ್ಣಕ್ಕ ಬಂದ್ ಸುಮ್ಮನಿರವ್ವ ತೇಳಿ ಎಳ್ಕಂಡ್ ಹೋತ್. ಈಗ ಸ್ವಾಂಪಣ್ಣ ನನ್ನ ಹೆಣ್ಣ ಮಕ್ಕ ನನ್ನ ಲಾಯ್ಕ ನೋಡ್ದುಲೆತ ಮರ್ಸ್ಟಕಂಡ್ ಕುದ್ದುಟು. ನೀವಾರ್ ಹೋಗಿ ಸ್ವಲ್ಪ ಬುದ್ದಿ ಹೇಳ್ಯಪ್ಪ.

**— ಮರದಾಳು ಶಾಂತಿ ರಾಜ, ಬೆಟ್ಟತ್ತೂರು.**

---

ನೂರಾರು ಕಾಡು ನಮ್ಮೂರ ಬೀಡು

# ಸಾವು, ಭಯ ಗೊತ್ತಿರದ ಅಲೆಗ್ಸಾಂಡರ್ ದಿ ಗ್ರೇಟ್ ಯಾರು?

ಸಂಗ್ರಹ ಬರಹ : ಪಿ. ಪಿ. ನೀಶಾ

ಅಲೆಗ್ಸಾಂಡರ್ ಕಾಲವಾಗಿ ಅನೇಕ ಶತಮಾನಗಳಾಗಿದ್ದರೂ ಸಹ, ಇಂದಿಗೂ ಅವನನ್ನು ವಿಶ್ವದ ವೀರಾಗ್ರಣಿಗಳಲ್ಲಿ ಒಬ್ಬನೆಂದು ಪರಿಗಣಿಸಲಾಗಿದೆ. ಈ ವೀರಯೋಧ, 23 ವರ್ಷಗಳಿಗೂ ಹಿಂದೆ, ಬೆಬಿಲೋನ್‌ನಲ್ಲಿ ಸಾವಿಗೀಡಾದನು. ಆಗ ಆತನ ವಯಸ್ಸು ಕೇವಲ 33 ವರ್ಷಗಳು.

ಅಲೆಗ್ಸಾಂಡರನ ಸಾಮ್ರಾಜ್ಯ ಗ್ರೀಸ್‌ನಿಂದ, ಭಾರತದವರೆಗೂ ಹಬ್ಬಿತ್ತು. ಆದರೆ ಅವನ ನಿಧನದ ನಂತರ ಈ ಸಾಮ್ರಾಜ್ಯ ಒಡೆದು ಹೋಳಾಯಿತು. ಆದರೆ ಅವನು ಸ್ಥಾಪಿಸಿದ ನಗರಗಳು ಈಗಲೂ ಇವೆ. ತನ್ನ ಬದುಕಿನ ಅಲ್ಪ ಕಾಲದಲ್ಲಿ ಅಲೆಕ್ಸಾಂಡರ್ ಸುಮಾರು 70 ನಗರಗಳನ್ನು ಸ್ಥಾಪಿಸಿದನು.

ಕೇವಲ ಹದಿನಾಲ್ಕು ವರ್ಷಗಳ ಬಾಲಕನಾಗಿದ್ದಾಗಲೇ ಅಲೆಗ್ಸಾಂಡರ್ ಬ್ಯೂಸಿಫಾಲಸ್ ಎಂಬ ರೋಷದ ಕುದುರೆಯನ್ನು ಪಳಗಿಸಿದನು. ಈ ಕುದುರೆಯನ್ನು ಹತೋಟಿಯಲ್ಲಿಡುವ ಸಾಮರ್ಥ್ಯ ಬೇರಾರಿಗೂ ಇರಲಿಲ್ಲ. ಈ ಕುದುರೆಯ ಮೇಲೆ ಕುಳಿತು ಅವನು ಎಲ್ಲ ಯುದ್ಧರಂಗಗಳಲ್ಲಿ ಹೋರಾಡಿದ. ಭಾರತದಲ್ಲಿ ನಡೆದ ಒಂದು ಯುದ್ಧದಲ್ಲಿ ಈ ಕುದುರೆ ಸತ್ತುಹೋಯಿತು. ಅಲೆಗ್ಸಾಂಡರ್ ಒಂದು ಪಟ್ಟಣವನ್ನು ನಿರ್ಮಿಸಿ, ಅದಕ್ಕೆ ಈ ಕುದುರೆಯ ಹೆಸರನ್ನಿಟ್ಟ.

ಕ್ರಿ. ಪೂ. 359 ರಲ್ಲಿ ಅಲೆಗ್ಸಾಂಡರನ ತಂದೆ ಫಿಲಿಪ್, ಮ್ಯಾಸಿಡೋನಿಯಾದ ರಾಜನಾದ, ಅವನು ತನ್ನದೇ ಆದ ಒಂದು ಸೈನ್ಯವನ್ನು ರಚಿಸಿದ ಮತ್ತು ಪರ್ಶಿಯನ್ ಸಾಮ್ರಾಜ್ಯದ ಮೇಲೆ ದಾಳಿಮಾಡುವ ಆಲೋಚನೆಯಲ್ಲಿದ್ದ. ಆದರೆ ಕ್ರಿ. ಪೂ. 336ರಲ್ಲಿ ಅರಮನೆಯ ಪಿತೂರಿಯೊಂದರಲ್ಲಿ ಅವನು ಕೊಲೆಯಾದ. ಅನಂತರ ಅವನ ಮಗ, ಅಲೆಗ್ಸಾಂಡರ್ ತನ್ನ ಇಪ್ಪತ್ತನೇ ವಯಸ್ಸಿನಲ್ಲಿ ದೊರೆಯಾದ.

ಅಲೆಗ್ಸಾಂಡರ್, ಯುದ್ಧ ಕಲೆಯಲ್ಲಿ ತನ್ನ ತಂದೆಯಿಂದ ತರಬೇತಿ ಪಡೆದ. ಅವನಿಗೆ ಬೌದ್ಧಿಕ ಮಾರ್ಗದರ್ಶನ ನೀಡಿದ್ದು, ಮಹಾನ್ ತತ್ವಜ್ಞಾನಿ ಅರಿಸ್ಟಾಟ್ಲ್. ಅಲೆಗ್ಸಾಂಡರನ ತಂದೆಯ ಸಾವಿನ ನಂತರ, ಅವನ ಸಾಮ್ರಾಜ್ಯದಲ್ಲಿ ಭಾರಿ ದಂಗೆ ಉಂಟಾಯಿತು. ಸ್ವಲ್ಪ ಸಮಯದಲ್ಲೇ ಅಲೆಗ್ಸಾಂಡರ್, ಶಾಂತಿ ಮತ್ತು ಶಿಸ್ತು ಮತ್ತೆ ನೆಲೆಸುವಂತೆ ಮಾಡಿದ. ಕ್ರಿ.ಪೂ. ಸುಮಾರು 334 ರಲ್ಲಿ ಯುವ ಅಲೆಗ್ಸಾಂಡರ್ ಪರ್ಶಿಯನ್ ಸಾಮ್ರಾಜ್ಯದ ಮೇಲೆ ದಾಳಿ ಮಾಡಿದ. ಅಲ್ಲಿ ಅವನು ಎರಡು ಯುದ್ಧಗಳಲ್ಲಿ ಹೋರಾಡಿದ. ಈ ಯುದ್ಧಗಳಲ್ಲಿ ಅವನಿಗೆ ಭಾರಿ ವಿಜಯ ದೊರೆಯಿತು. ಯುದ್ಧ ತಂತ್ರದಲ್ಲಿ ಅಲೆಗ್ಸಾಂಡರನಿಗೆ ಅತ್ಯುತ್ತಮ ತರಬೇತಿ ಲಭಿಸಿತ್ತು. ಅವನಿಗೆ ಭಯವೆಂಬುದೇ ಗೊತ್ತಿರಲಿಲ್ಲ. ಪರ್ಶಿಯಾವನ್ನು ವಶಪಡಿಸಿಕೊಂಡ ಬಳಿಕ, ಅವನು ಈಜಿಪ್ಟ್‌ನ ಮೇಲೆ ದಾಳಿ ಇಟ್ಟ. ಈಜಿಪ್ಟ್‌ನ್ನು ವಶಪಡಿಸಿಕೊಂಡು, ನೈಲ್ ನದಿಯ ಹತ್ತಿರ ತನ್ನ ಹೆಸರಿನಿಂದಲೇ ಅಲೆಗ್ಸಾಂಡ್ರಿಯಾ ಎಂಬ ನಗರವನ್ನು ಸ್ಥಾಪಿಸಿದ.

ಅಲೆಗ್ಸಾಂಡರ್ ಏಷಿಯಾ ಮೈನರ್ ಅನ್ನು ಪ್ರವೇಶಿಸಿದಾಗ, ಅವನಿಗೆ ಪುರಾತನ ದೊರೆ ಗಾರ್ಡಿಯಸ್‌ನ ರಥವನ್ನು ತೋರಿಸಲಾಯಿತು. ಈ ರಥವನ್ನು ಕಟ್ಟಿಟ್ಟಿರುವ ಗಂಟನ್ನು ಯಾರು ಬಿಡಿಸುವರೋ ಅವರು ಇಡೀ ಜಗತ್ತನ್ನು ಆಳುವರೆಂಬ ಕಥೆಯನ್ನು ಅವನಿಗೆ ತಿಳಿಸಲಾಯಿತು. ಅಲೆಗ್ಸಾಂಡರ್ ಒಂದು ಕತ್ತಿಯನ್ನು ಹಿಡಿದು, ಗಂಟನ್ನು ಕತ್ತರಿಸಿಹಾಕಿದ. ಅಲೆಕ್ಸಾಂಡರ್, ಮೆಸಿಡೊನಿಯಾ, ಗ್ರೀಸ್, ಈಜಿಪ್ಟ್, ಪರ್ಶಿಯ ಮತ್ತು ಏಷಿಯಾದ ರಾಜನಾದ. ಮುಂದಿನ ಆರು ವರ್ಷಗಳ ಕಾಲ ಅಲೆಗ್ಸಾಂಡರ್‌ನ ಸೈನ್ಯ ಮುನ್ನುಗುತ್ತಾ ಆಫ್‌ಘನಿಸ್ಥಾನ್ ಹಿಂದೂಕುಷ್, ಸಮರ್ ಖಂಡ್, ತಾಷ್ಕೆಂಟ್ ಮತ್ತು ಖೈಬರ್ ಕಣಿವೆ ಇವುಗಳನ್ನು ವಶಪಡಿಸಿಕೊಂಡಿತು. ಅನಂತರ ಅಲೆಕ್ಸಾಂಡರ್ ಭಾರತವನ್ನು ಪ್ರವೇಶಿಸಿದ.

ಏಷಿಯಾವನ್ನು ಪ್ರವೇಶಿಸಿದ ಬಳಿಕ, ಅಲೆಕ್ಸಾಂಡರ್ ಭೋಗ ಜೀವನ ಆರಂಭಿಸಿದ. ಅವು ರೊಕ್ಸಾನ ಎಂಬ ಶ್ರೀಮಂತಳೂ, ರೂಪವತಿಯೂ ಆದ ರಾಜಕುಮಾರಿಯನ್ನು ಮದುವೆಯಾದ. ಭಾರತದ ಧೈರ್ಯಶಾಲಿ ದೊರೆಯಾದ ಪೋರಸ್‌ನೊಡನೆ, ಅಲೆಗ್ಸಾಂಡರ್ ತನ್ನ ಕಡೇ ಯುದ್ಧದಲ್ಲಿ ಹೋರಾಡಿದ. ಆದರೆ ಬಹಳ ಕಷ್ಟದಿಂದ, ಅವನು ಈ ಯುದ್ಧದಲ್ಲಿ ಜಯ ಗಳಿಸಿದ. ಗಂಗಾ ನದಿಯನ್ನು ತಲುಪುವ ಆಸೆ ಅಲೆಗ್ಸಾಂಡರನಿಗಿತ್ತು. ಆದರೆ ಅವನ ಸೈನಿಕರಿಗೆ ಬಿಯಾಸ್ ನದಿಯಿಂದ ಆಚೆ, ಮುನ್ನುಗ್ಗಲು ಅವಕಾಶ ಸಿಗಲಿಲ್ಲ. ಈ ಸೈನಿಕರು ತಮ್ಮ ಊರು ಬಿಟ್ಟು 8 ವರ್ಷಗಳಿಗೂ ಹೆಚ್ಚು ಕಾಲವಾಗಿತ್ತು. ತನ್ನ ಸೈನಿಕರನ್ನು ಮುನ್ನುಗ್ಗುವಂತೆ ಮಾಡಲು ಅಲೆಗ್ಸಾಂಡರ್ ಬಹಳ ಪ್ರಯತ್ನಿಸಿದ. ಆದರೆ ಅವರು ಮುಂದೆ ಹೋಗಲಿಲ್ಲ. ಈ ಸೈನಿಕರು ತಮ್ಮ ಮನೆಗಳಿಗೆ ಹಿಂದಿರುಗಲಾರಂಭಿಸಿದರು. ಹೀಗೆ ವಾಪಸಾಗುವಾಗ ಮಾರ್ಗದಲ್ಲಿ, ಅಲೆಗ್ಸಾಂಡರನಿಗೆ ಅತಿಯಾಗಿ ಜ್ವರ ಬಂದು, ಕ್ರಿ.ಪೂ. 323ರ ಜೂನ್‌ನಲ್ಲಿ ಮರಣ ಹೊಂದಿದ

---

## ನಗೆ ಹನಿ

**ಬ್ಯಾಚುಲರ್**

ಮದುವೆಯಾಗ
ಬ್ಯಾಚುಲರ್‌ಗಳಿಗೆ
ಮನೆ ಕೊಡುವುದಿಲ್ಲ
ಎಂದ ಮಾಲೀಕ
ಎಲ್ಲಾ ಮಾಲೀಕರೂ
ಹೀಗೇ ಹೇಳಿದರೆ
ನಾವು ಮದುವೆ ಯಾಗುವುದಾದರೂ
ಹೇಗೆ? ಎಂದ ಬ್ಯಾಚುಲರ್
ಮಾಲೀಕನ ಮಗಳತ್ತ ನೋಡುತ್ತ !!

ನೈಯಣ್ಣೀರ ರಶಿ,
ಕಡಿಯತ್ತೂರು

## ತೆಕ್ಕಡೆ ತಮ್ಮನ ಜೋಕ್

ನಾನ್ ತುಂಬಾ ಸಣ್ಣಂವ ಆಗಿದ್ದೆ. ಆ ಕಾಲಲಿ ಮದುವೆ ತೇಳಿರೆ ಮಕ್ಕಳಿಗೊಂದು ಹಬ್ಬ, ದೊಡ್ಡವುಕೊಂದು ಸಡಗರ ಸಂಭ್ರಮ. ಮದುವೆ ಅದರಲ್ಲಿಯೂ ಮನೆಯವರ ಮದುವೆ ತೇಳಿರೆ ತಿಂಗಳಿಗೆ ಮುಂದೆ ಅವ್ವನ ಒಟ್ಟಿಗೆ ಮರ್ಸ್ಟ್ ಅಪ್ಪನೊಟ್ಟಿಗೆ ಪೆಟ್ಟ್‌ತಿಂದ್ ಹೆಂಗೆಲ್ಲಾ ಮಾಡಿ ಕಾಫಿ ಮಾರ್ದಂಗೆ ಒಂದು ಸುರಾಲ್, ಸರ್ಟ್ ತೆಗ್ಸಿ ಹೊಲ್ಸಿ ತಂದಂಗೆ ಹಾಕಿ ನೋಡಿ ಮದುವೆ ದಿನನ ಲೆಕ್ಕ ಹಾಕಿ ಹಾಕಿ ಆಕನ ಬಂದೆ ಬುಡ್ತ್ ಮದುವೆ. ಚಪ್ಪರ ಹಾಕ್‌ಕಾಕನ ಹಲ್ಸ್‌ನ ಸೋಪ್ಪು ಎಳ್ಕ ಬಾದು. ವಾಟೆ ಕಡ್ಕ ಬಾದು. ಸಗಣಿ ತಾದು ತೇಳಿ ಮೂರು ದಿನ ಕಳೆದು ಗೊತ್ತಿಲ್ಲದೆ ಹೋಗಿ ಹಂದಿ ಹೊಡೆವ ದಿನ ಬಿಳಗ್ ಹುಲ್ಲ, ಬಾಳ್ ಕತ್ತಿ, ತಕ್ಕಡಿ ತಂದ್ ಕೊಡ್ದು, ಹಂದಿ ಮಾಸ ಕೊಯದು ತೇಳಿ ಚಪ್ಪರ ಬಂದೇ ಬುಟ್ಟದೆ. ಚಪ್ಪರದ ಊಟಲಿ ಬಾಳಲೆ ಹಾಕುದು, ನೀರ್ ಹಾಕುದು, ಉಪ್ಪಿನ ಕಾಯಿ, ಪಲ್ಯ, ಕಾಫಿ ಹುಯ್ಯದು, ಬಾರಿ ಕುಸಿನ ಕೆಲ್ಸ. ಮತ್ತೆ ಅಡಿಗೆ ಮನೆಗೆ ಹೋಗಿ ಗೊತ್ತಿಲ್ಲದಂಗೆ ಹಪ್ಪಳನ ಕದ್ದ್ ಜೋಬುಲಿ ಹಾಕಂಡ್ ತಿಂಬದು. ಊಟಕ್ಕೆ ನಮ್ಮ ಸರದಿ ಬಂದಂಗೆ ಹಂದಿ ಮಾಸ ಹಾಕಂಡ್ ಅದರ್ನ ಅನ್ನಂದ ಮುಚ್ಚಿ ಹಂದಿ ತಿಂಬಲೆ ಕುರಿ ಬೇಕುಂತ ಹಾಕಿಸಿಕಂಡ್ ತಿಂದ್ ತೇಗ್‌ತಿದ್ದೊ. ಮತ್ತೆ ಊಟ ಆದಂಗೆ ಅಡಿಕೆ ಹುಡಿ ಬಾಚಿಕಂಡ್ ಬಾಯಿಲಿ ಜೋಬುಲಿ ತುಂಬಿಸಿ ಯಾರಿಗೂ ಗೊತ್ತಾಗದಂಗೆ ಬೀಡಿ ಕದ್ ಕಾಫಿ ತೋಟಲಿ ಸೇದಿ ಬಂದ್ ವಾಲಗದೊಟ್ಟಿಗೆ ವಿಷಲ್ ಹಾಕಂಡ್ ಕುಣ್ದ್ ಕುಣ್ದ್ ಊರಲಿ ಯಾರ್‍ಯಾರ್ ಆಗದ ಮಕ್ಕಳ ಕಾಲಿಗೆ ಕೊಕ್ಕೆ ಹಾಕಿ, ಜಿಂಟಿ, ಗುದ್ದಿ ಕೀಟಲೆ ಮಾಡ್ದು ಅಂದ್‌ನ ಪುಂಡಾಟ. ಮತ್ತೆ 10 ಗಂಟೆ ಕಳ್ದ್ ಮೇಲೆ ಮಲ್ಗಿದ ಮಕ್ಕಳ ಬಾಯಿಗೆ ಬಾಳೆ ಹಣ್ಣ್ ತುಂಬಿ ಮಡ್ಗುದು, ಚಡ್ಡಿ ಬಿಚ್ಚಿ ಹಾಸಿಗೆ ಅಡಿಗೆ ಹಾಕಿ ಮಡ್ಗುದು, ಯಾರ್‍ಯಾರ ಶೂನ ಸೇರ್ಸಿ ಗಂಟ್ ಹಾಕಿ ಮಡ್ಗುದು, ಮಲ್ಗಿದ ವಾಲಗದವರ ಚಂಡೆಗೆ ಬಡಿಯದು ಹಿಂಗೆಲ್ಲ ಆಕನ ಬೆಳಿಗ್ಗೆ ನಾಕ್ ಗಂಟೆಗೆ ದಿಬ್ಬಣ ಹೊರ್ಡ್‌ಗೆ ಸುರು ಅದೆ.

ದಿಬ್ಬಣ ಹೊರ್‌ಡ್‌ಕನ ಅವ ನಾ ಬನ್ನೆ ತೆಳ್ಕನ ಬ್ಯಾಡ ನಾವು ಬೇಗ ಬಂದವೆ ಮಕ್ಕ ಯಾರ್ ಬಾಕಾಗದ್ ತ ಅವ್ವ ಹೇಳ್ಕನ ನಾವು ಮರ್‍ನುದು. ಅಷ್ಟಾಕನ ಅವ್ವ ನಿನ್ನ ಅ ತೇಳಿ ಬೆರ್‍ಸಿದೆ ಮತ್ತೆ ಹೆಂಗೆಲ್ಲ ಮಾಡಿ ರಂಪ ಹಿಡ್ದ್ ಜೀಪು ಹತ್ತುತಿದ್ದೊ.

ಹಿಂದೆ ದಿಬ್ಬಣ ಹೋದು ತುಂಬಾ ಮೋಜಿನ ಸಂಗತಿ. ಆಗ ಜೀಪುಲಿ ಮೂರು ನಾಕ್ ಜನ ಜೋಕರ್‌ಗ ಇರ್‍ತಿದ್ದೊ. ಅದರ್‍ಲಿ ತಮ್ಮ ತೆಕ್ಕಡ ತಮ್ಮ ಬಹಳ ಪೆಮಸ್ಸ್. ಅಂವ ಜೀಪು ಹೋದಂಗೆ ಹೋದಂಗೆ ರಾಗ ಎಳಿಯಕೆ ಸುರು ಮಾಡ್ತಿತ್ ಆಗ ನಾವೆಲ್ಲಾ ವಿಷಲ್ ಹಾಕುದು ಚಪ್ಪಳೆ ತಟ್ಟುದು, ಅಂವ ಸುರು ಮಾಡ್ತಿತ್ ಕೇಳಿ.

ಸೋಬಾನೆ ಸೊಂಟಬ್ಯಾನೆ ಇತ್ತ ಬಾನೆ ತಬ್ಬಿಕಣೆ.. ಆಗ ಹೆಣ್ಣ್ ಮಕ್ಕ ಬಾರಿ ನಾಚಿಕೆ ಮಾಡ್ತಿದ್ದೊ ಮತ್ತೆ ಮುಂದುವರ್‍ಸ್ತಿತ್, ದೊಡ್ಡಗದ್ದೆ ಮೂಲೆಲಿ ದಿಬ್ಬಣ ಬಂದದೆ ಬಗ್ಗಿ ಬಗ್ಗಿ ನೊಡ್ದು ಡೊಳ್ಳೊಟ್ಟೆ ಬಾವ.

ಸೊಸೆ ಬಾತ್ ರೊಟ್ಟಿ ಮಾಡ್ತ್
ರೊಟ್ಟಿ ತಟ್ಟಿ ಸೊಸೆನ ಕೈ ಮೆತ್ತಂಗಾತ್
ರೊಟ್ಟಿ ತಿಂದ್ ಮಕ್ಕಳ ಬಾಯಿ ಮೆತ್ತಂಗಾತ್
ಮಗ ಬಾತ್ ಭತ್ತ ಕುಟ್ಟಿತ್
ಭತ್ತಕುಟ್ಟಿ ಮಗಳ ಕಾಲ್ ಮೆತ್ತಂಗಾತ್
ಕಡಿಕೆಲಿದ್ದ ಕಳ್ಳ್‌ನ ಕುಪ್ಪಿ ಕಾಲಿ ಆತ್
ಕೊಕ್ಕಲೆವರ ಹಂದಿ ಗ್ಯೆಪು ಕಾರಕಾರ
ಅಲ್ಲಿ ಇದ್ದ ಜನ ತೀರ ತಾರ ಮಾರ

ಮಧ್ಯಲಿ ಒಂದು ಡೈಲಾಗ್ ಹೊಡಿಬಡಿ ಹೊಡಿಬಡಿ ತೆಳ್ದೆ ಟೈ ತೇಳ್ತ್ ಎಳ್ದ್ ಹಾಕಿದಾತ ಗೋತ್ತಲೆ ಕಾಲ್ ಜಾರಿ ಬಿದ್ದದ್‌ತಾ ಗೊತ್ತಲೆ ನೊಡ್ನೇ! ಎದೆ ಮ್ಯಾಲೆ ಹಾರಿ ಕುದ್ದುಟು ಹಂದಿಯಾ? ಕೋಣ ಮರಿ! ಅಯ್ಯೋ ಮಕ್ಕಳೆ ತಬ್ಬುಲಿಯಾಗಿ ಬುಟ್ರಿಯಲ್ಲನೇ ತೇಳ್ದೆ ಕೊಟ್ಟುನ ಕಾವು ಬೇಕಾ ಕಳಿ ಕೋಲು ಬೇಕಾತ ಕೆಳ್ದೊ ನೋಡ್ನೆ ನನ್ನ ಮಕ್ಕ ಎಷ್ಟು ಉಸಾರ್ ಒಳತಾ.

ಮತ್ತೊಂದು ಹಾಡ್

ಯಾಕೆನೇ ಕೆಂಪುಹುಡುಗಿ ಕರಿ ಹುಡ್ಗನ ಕಂಡ್ ಕಿಲಕಿಲ ನೆಗಾಡಿಯಾ.

ನೀ ತೆಳ್ಳಂಗೆ ಬೆಳ್ಳಂಗೆ ಕೆಂಪಗೊಳತ ಜಂಬನೇ ಜಂಬ ಕಂಡದೇ.

ನಮ್ಮೂರ ಮಾರಿ ಅಮ್ಮನ ಜಾತ್ರೆಗೆ ನೀ ಎನಾದ್ರು ಬಂದರೆ

ನಮ್ಮೂರ ಪುಂಡು ಹುಡುಗ್ರು ಎತ್ತಿಕಂಡೋಗಿ ಸಂಭ್ರಮ ಮಾಡ್ತರೆ ಕಣೆಲೇ

ಇದ್ ನೂಕಿ ಗೂಡಿಗೊಂದು ಅಂವಂದ್ ಸವಾಲ್.

ಗೂಡೆ ಮನೆಗೆ ಹೋದಂಗೆ ಎಲ್ಲಾ ಮನೆಗೆ ಹುಗ್ಗುದು, ಎಲ್ಲವರ ಕಾಲ್ ಹಿಡಿಯದು, ಎಲ್ಲವೂ ಅಂವಂಗೆ ಅತ್ತೆ ಮಾವ ಮತ್ತೆ ಅತ್ತೆ ಮಗಳ ಕೊಟ್ಟಾತಾ ಕೇಳ್ದು ಹಿಂಗೆ ತೆಕ್ಕಡೆ ತಮ್ಮ ಮದುವೆ ಮನೆಲಿ ತುಂಬಾ ವಿಶೇಷ ವ್ಯಕ್ತಿ ಆಗಿ ಓಡಾಡ್ತಿತ್. ಸೋಬಾನೆ ಹೇಳ್ದು, ಪೆಟಿಗೆ ನೋಡ್ದು, ನೀರ್ ತಾಕನ ಒಂದು ರಸಮಂಜರಿ ನೀಡ್ತಿತ್. ಅವನ ಹಾಡ್ ಮಕ್ಕ ಆಗಿ ಇದ್ದ ನಮಿಗೆಲ್ಲಾ ಬಾಯಿಪಾಟ. ಈಗ ಮದುವೆ ವಿಧಾನನೆ ಬದಲಾವಣೆ ಅದಂರ್ದ ಅದೆಲ್ಲ ಮೂಲೆ ಗುಂಪಾಗುಟ್ಟು. ನಂಗೆ ಈಗ ಅನ್ಸಿದೆ ಈಗನ ವಿಜೃಂಭಣೆಕಿಂತ ಆಗನ ಸಂಪ್ರದಾಯಿಕ ವಾಗಿ ಮನೆಲೆ ಮಾಡುವ ಮದುವೆ ತುಂಬ ಅರ್ಥಗರ್ಬಿತ ವಾಗಿತ್‌ತಾ. ಈಗಲೂ ನಮ್ಮ ಈ ತೆಕ್ಕಡೆ ತಮ್ಮ ಬಾರಿ ಜನಂಗೆ ಗೊತ್ತಿರುವ ವ್ಯಕ್ತಿ. ಈ ಲೇಖನ ಓದಿ ತೆಕ್ಕಡೆ ತಮ್ಮನ ಗೊತ್ತಿಲ್ಲದವು ವಿಚಾರ್ಸಿ ತಿಳ್ಕಣಿ. ನಮ್ಮ ಮುತ್ತಾರ್ಮುಡಿಲೇ ಉಟ್ಟು He is one of the comedy man in Thekkada family

— ಬರ್‌ದ್ದವು : ತೆಕ್ಕಡೆ ಕುಮಾರ್, ಮುತ್ತಾರ್ಮುಡಿ

---

**ಓದದ ಬಾಯಿ ಬಿಲದ ಬಾಯಿ**

## ಅಭಿನಂದನೆಗಳು ಬಡುವಂಡ್ರ ಆಶಾಕುಮಾರಿ ಅವರಿಗೆ



ಬಡುವಂಡ್ರ ಪೂವಯ್ಯ ಸೀತಮ್ಮ ಅವರ ಪುತ್ರಿ ಆಶಾಕುಮಾರಿ ಅವರು "ಮಹಿಳಾ ಕಾವ್ಯದಲ್ಲಿ ಹೆಣ್ಣಿನ ಪರಿಕಲ್ಪನೆ" ಎಂಬ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರ ಪಡಿಸಿರುವ ಮಹಾಪ್ರಬಂಧಕ್ಕೆ ಮೈಸೂರು ವಿಶ್ವವಿದ್ಯಾನಿಲಯ ಡಾಕ್ಟೋರೇಟ್ ಪದವಿ ನೀಡಿದೆ. ಅವಳಿಗೆ ತುಂಬು ಹೃದಯದ ಅಭಿನಂದನೆಗಳು **ಅವಳ ಮುಂದಿನ ಉಜ್ವಲ ಭವಿಷ್ಯಕ್ಕೆ ಶುಭ ಹಾರೈಸುವ.**

ಯಿಂದ : ಅಕ್ಕ : **ಕರಕರನ ಅನಿತಾ ಪೊನ್ನಪ್ಪ**
ಬಾವ : **ಕರಕರನ ಪೊನ್ನಪ್ಪ**
ಗಾಳಿಬೀಡು ಗ್ರಾಮ ಮತ್ತು ಅಂಚೆ

## ಶುಭ ಹಾರೈಕೆ



ಸುಳ್ಯ ತಾಲ್ಲೂಕು ಮಂಡೆಕೋಲು ಗ್ರಾಮದ ಬೊಳಗಲ್ಲು ಮನೆ ಶಿವರಾಮ ಗೌಡರ ಧರ್ಮಪತ್ನಿ ಕೆ. ಎಂ. ಕುಸುಮಾವತಿ, ಸಹ ಶಿಕ್ಷಕಿ, ಸರ್ಕಾರಿ ಮಾದರಿ ಕನ್ನಡ ಪ್ರಾಥಮಿಕ ಶಾಲೆ, ಜೀವನ ಭೀಮಾನಗರ, ಬೆಂಗಳೂರು - 75, ಇವರು ಮಾದರಿ ಶಿಕ್ಷಕಿಯ ಕೀರ್ತಿಗೆ ಪಾತ್ರರಾಗಿರುತ್ತಾರೆ. ತಾರೀಕು 31-10-1999 ರಲ್ಲಿ ಕೆ. ಎಸ್. ಮುದ್ದಪ್ಪ ಸ್ಮಾರಕ ಟ್ರಸ್ಟ್‌ನವರು ರಾಜ್ಯಮಟ್ಟದ ಸಾಂಸ್ಕೃತಿಕ ಸ್ಪರ್ಧೆಯನ್ನು ಶ್ರೀಕೃಷ್ಣರಾಜೇಂದ್ರ ಪರಿಷನ್ಮಂದಿರ, ಚಾಮರಾಜ ಪೇಟೆ ಬೆಂಗಳೂರುನಲ್ಲಿ ನಡೆದ ಇದರಲ್ಲಿ ಪಾಲ್ಗೊಂಡು **ರಾಜ್ಯಮಟ್ಟದ ನೆನಪಿನ ಶಕ್ತಿಯ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನವನ್ನು ಪಡೆದಿರುತ್ತಾರೆ.** ಇವರು ಕೊಡಗು ಜಿಲ್ಲೆಯ ಅರೆಭಾಷಿಕರ ಪ್ರತಿಭೆಯಾಗಿ ಇನ್ನು ಹೆಚ್ಚಿನ ಸ್ಪರ್ಧೆಗಳಲ್ಲಿ ಭಾಗವಹಿಸಿ ಯಶಸ್ವಿಯಾಗಲೆಂದು ಶುಭವನ್ನು ಹಾರೈಸೋಣಾ.

## ಪೂಜ್ಯರ ಸವಿನೆನಪು



**ಕಾಳೇರಮ್ಮನ ಗಣಪತಿ**

ನೀವು ನಮ್ಮನ್ನಗಲಿದರೂ ನಿಮ್ಮ ನೆನಪು ಚಿರ ನೂತನವಾಗಿಯೇ ಇದೆ. ನಿಮ್ಮ ತ್ಯಾಗ, ಪ್ರೀತಿ, ವಾತ್ಸಲ್ಯಗಳಿಂದ ಕೂಡಿದ ಆದರ್ಶ ಜೀವನ ನಮಗೆ ಮಾರ್ಗದರ್ಶನವು ಹೌದು. ನಿಮ್ಮ ಆತ್ಮಕ್ಕೆ ಅನುದಿನವು ಚಿರಶಾಂತಿಯನ್ನು ಬಯಸುವೆವು

ಪತ್ನಿ : **ಭಾಗೀರಥಿ,** ಮಕ್ಕಳು : **ಮೀರ, ನಮಿತಾ,**
ಶಿವನಂಜಪ್ಪ, ಬಡಾವಣೆ, ನೆಹರು ನಗರ ಮಂಡ್ಯ - 571 401
✆ : 08232 / 23700, 918 / 23700

ಜನನ : 8-9-1938 ಮರಣ : 15-6-1997

## 4ನೇ ಪುಣ್ಯಸ್ಮರಣೆ



**ಕರ್ಣೆಯ್ಯನ ಪೊನ್ನಪ್ಪ ಕೂಸಕ್ಕ**
ಮರಣ : 25-5-1996

ನೀವ್ ತಾರೀಖ್ 25-5-1996ರ್ಲಿ ನಮ್ಮನ್ನಗಲಿ ಸ್ವರ್ಗಸ್ಥರಾದಿರಿ. ಇಂದ್ ನಿಮ್ಮ ಸವಿನೆನಪ್ ಮಾತ್ರ ನಮ್ಮಲ್ಲಿ ಉಳ್‌ದುಟ್ಟು. ನಿಮ್ಮ ಆದರ್ಶ ಗುಣಗ ನಮಿಗೆ ದಾರಿದೀಪ ಆಗಿಟ್ಟು. ನಿಮ್ಮ ಆತ್ಮಕ್ಕೆ ಚಿರಶಾಂತಿನ ಪರಮಾತ್ಮ ನೀಡಲಿತ್ತೇಳಿ ಕೇಳಿಕಂಡವೆ.

ಪ್ರಕಟಣೆ : **ಕರ್ಣೆಯ್ಯನ ಪೊನ್ನಪ್ಪ, ಲಕ್ಷ್ಮಣ**
**ಮಕ್ಕಳು / ಮೊಮ್ಮಕ್ಕಳು / ಸೊಸೆಯಂದಿರು / ಅಳಿಯಂದಿರು**
ಹೊಸ ಪಟ್ಟಣ ಕೊಡಗು

KA/SK/MYS-88 10-01-96 TCI Kar. 09592

# ಕೊಡಗು ಮತ್ತು ದಕ್ಷಿಣ ಕನ್ನಡ ಗೌಡ ವಿದ್ಯಾ ಸಂಘ

ಹಾಸನ ಶಾಖೆ (573/201) ಹಾಸನ ಜಿಲ್ಲೆ, ಕರ್ನಾಟಕ ರಾಜ್ಯ

## ಪ್ರಕಟಣೆ : ಜನಾಂಗ ಬಾಂಧವರಲ್ಲಿ ನಮ್ರ ವಿನಂತಿ

ಕೊಡಗು ಮತ್ತು ಕನ್ನಡ ಜಿಲ್ಲೆಯ ಅರೆಭಾಷಿಕ ಗೌಡ ಬಾಂಧವರಲ್ಲಿ ನಮ್ಮ ಕಳಕಳಿಯ ವಿನಂತಿಕೆ ಏನೆಂದರೆ, ಹಾಸನ ನಗರದಲ್ಲಿ 1992-93ರ ಸಾಲಿನಲ್ಲಿ ಸನ್ಮಾನ್ಯ ಶ್ರೀ ಕೋಳಿಬೈಲು ಬೆಳ್ಳಿಯಪ್ಪ, I.A.S. ರವರು ಜಿಲ್ಲಾಧಿಕಾರಿಗಳಾಗಿದ್ದಾಗ ನಮ್ಮ ಈ ಮೇಲಿನ ಸಂಘಕ್ಕೆ 80" × 120" ವಿಸ್ತೀರ್ಣದ ಖಾಲಿ ನಿವೇಶನವನ್ನು ಮಂಜೂರು ಮಾಡಿದ್ದರು. ಇದು ಹಾಸನ ತಿಪಟೂರು ರಾಜ್ಯ ಹೆದ್ದಾರಿಯಲ್ಲಿದ್ದು, ಹಾಲಿ ಪ್ರಾದೇಶಿಕ ಸಾರಿಗೆ ಕಛೇರಿ; ಕೇಂದ್ರಿಯ ಸ್ಕೂಲ್ ಮತ್ತು ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಕಾಲೋನಿಯ ಸಮೀಪ ಇರುತ್ತದೆ. ಸದರಿ ನಿವೇಶನದಲ್ಲಿ ಈವರೆಗೆ ಯಾವುದೇ ಚಟುವಟಿಕೆಗಳು ಇರುವುದಿಲ್ಲ. ಈಗ ಇತರ ಹಲವು ಸಂಘ ಸಂಸ್ಥೆಗಳು ವಶಪಡಿಸಿಕೊಳ್ಳಲು ಪ್ರಯತ್ನಿಸುತ್ತಿರುವ ವಿಷಯ ನಮಗಳ ಗಮನಕ್ಕೆ ಬಂದಿರುತ್ತದೆ.

ಆದ್ದರಿಂದ ಈ ಸದರಿ ನಿವೇಶನದಲ್ಲಿ ಶೀಘ್ರವಾಗಿ ಗೌಡ ಸಮುದಾಯ ಭವನವನ್ನು ಈ ಸಾಲಿನಲ್ಲಿಯೇ ನಿರ್ಮಿಸಲು ಎಲ್ಲಾ ಪ್ರಯತ್ನಗಳನ್ನು ಮಾಡಲಾಗುತ್ತಿದೆ. ಹಾಗಾಗಿ ಹಾಸನದ ನಮ್ಮ ಬಂಧುಗಳಲ್ಲದೆ, ಕೊಡಗು, ಕನ್ನಡ ಜಿಲ್ಲೆ, ಮೈಸೂರು, ಮಂಡ್ಯ, ಬೆಂಗಳೂರು ಹಾಗೂ ರಾಜ್ಯದ, ದೇಶ ವಿದೇಶಗಳಲ್ಲಿ ವಾಸವಿರುವ ನಮ್ಮ ಬಂಧುಗಳು ತಮ್ಮ ಅಮೂಲ್ಯ ತನು ಮನ ಧನ ಸಹಾಯ ನೀಡಿ ಸಹಕರಿಸುವಂತೆ ನಮ್ಮ ಕಳಕಳಿಯ ಪ್ರಾರ್ಥನೆಯಾಗಿದೆ.

ಹಾಸನದಲ್ಲಿ ತಾಂತ್ರಿಕ ಮಹಾ ವಿದ್ಯಾಲಯ, ಡೆಂಟಲ್ ವೈದ್ಯಕೀಯ ಕಾಲೇಜು, ಬಿ.ಎಡ್. ಕಾಲೇಜು, ಪಾಲಿಟೆಕ್ನಿಕ್, ಐ.ಟಿ.ಐ., ಸಿ.ಪಿ.ಎಡ್., ಟಿ.ಸಿ.ಹೆಚ್., ಪ್ರಥಮ ದರ್ಜೆ ಕಾಲೇಜು, ಮಹಿಳಾ ಮತ್ತು ಇತರ ಕಾಲೇಜುಗಳು, ಬಿ.ಬಿ.ಎಂ. ಕಾಲೇಜು, ಹಲವಾರು ಸ್ಕೂಲ್/ ಕಾನ್ವೆಂಟ್‌ಗಳು, ಆಯುರ್ವೇದಿಕ್ ವೈದ್ಯಕೀಯ ಕಾಲೇಜು ಹಾಗೂ ಇನ್ನಿತರ ಹಲವಾರು ವಿದ್ಯಾ ಸಂಸ್ಥೆಗಳು ಇರುತ್ತವೆ. ನಮ್ಮ ಜನಾಂಗದ ವಿದ್ಯಾರ್ಥಿಗಳಿಗೆ ಮುಂದೆ ಅಲ್ಪಮಟ್ಟಿಗಾದರು ಸಹಾಯವಾಗಲಿ ಎಂಬ ಸದುದ್ದೇಶದಿಂದ ಈ ಪ್ರಸಕ್ತ ಈ ಸಾಲಿನಲ್ಲಿಯೇ ಅಂದಾಜು 10 ಲಕ್ಷಗಳಷ್ಟು ಸಂಗ್ರಹಿಸುವ ಮೂಲಕ, ನಾಲ್ಕು, ಐದು ಕೊಠಡಿಗಳ ಶಾಶ್ವತವಾದ ಗೌಡ ಸಮುದಾಯ ಭವನವನ್ನು ಕಟ್ಟಿಸಲು ಉದ್ದೇಶಿಸಲಾಗಿದೆ. ಇದಕ್ಕೆ ತಾವುಗಳು ತಮ್ಮ ವಿಶಾಲ ಹೃದಯವಂತಿಕೆಯ ತನು, ಮನ, ಧನ ನೀಡಿ ಸಹಕರಿಸುವಂತೆ ಇನ್ನೊಮ್ಮೆ ಈ ಮೂಲಕ ಕೋರಲಾಗಿದೆ.

ಇಂತಿ ತಮ್ಮವರೆ ಆದ
ಅಧ್ಯಕ್ಷರು ಮತ್ತು ನಿರ್ದೇಶಕರು ಹಾಗೂ ಸದಸ್ಯರು
ಕೊಡಗು ಮತ್ತು ದ. ಕನ್ನಡ ಗೌಡ ವಿದ್ಯಾ ಸಂಘ,
ಹಾಸನ

ವಂತಿಕೆ ಕಳುಹಿಸುವ ವಿಳಾಸ :
**ಕೆ. ಎಸ್. ಗಣೇಶ್**
ಖಜಾಂಚಿ
C/o ಕ್ಲಾಸಿಕ್ ಸ್ಟುಡಿಯೋ
ಎನ್. ಆರ್. ವೃತ್ತ, ಹಾಸನ - 573 201

**Kodagu Sangathi** Kannada Fortnightly Edited, Published, Printed & Owned by Pattada P. Sheelamani, No. 35, Savitha Nilaya, I Cross, 4th Block, **Jayalaxmipuram, Mysore - 12.** And **SANGATHI** Office ✆ : **0821/516771.** And Printed at Sri Guru Raghavendra Printers, 489, Devamba Agrahara, K. R. Mohalla, Mysore - 24. ✆ : 0821/431792.